ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಬಾಪು ಪ್ರಪಂಚ


ಕನ್ನಡ - English Monthly

ಸಂಪುಟ – 3 : ಸಂಚಿಕೆ – 1 ಏಪ್ರಿಲ್ 2021 ಪುಟ – 32 ₹ 20/-













ಸ್ವಾತಂತ್ರ್ಯೋತ್ಸವ @ 75 ವರ್ಷಾಚರಣೆ - 2021-2022



ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್

(14.04.1891 – 06.12.1956)

– ಇಂದಿರಾ ಕೃಷ್ಣಪ್ಪ

ಡಾ. ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಯ ಬೆಳಕಿನಲ್ಲಿ ಮಹಿಳಾ ಚಳುವಳಿ

ಜಾಗತೀಕರಣದ ಪ್ರಸ್ತುತ ಸಂದರ್ಭದಲ್ಲಿ ಆಧುನಿಕ ಸ್ತ್ರೀವಾದದ ಸಿದ್ಧಾಂತಗಳು ವಿಶ್ವವ್ಯಾಪಕತೆಯನ್ನು ಪಡೆದುಕೊಂಡಿದೆ ಮತ್ತು ವಿಭಿನ್ನ ತಾರ್ಕಿಕತೆಯೊಂದಿಗೆ ಮನುಷ್ಯ ಸಂಬಂಧಗಳನ್ನು ಓರೆಗೆ ಹಚ್ಚುತ್ತಿವೆ ಹಾಗೂ ಮಾನವ ಸಮಾಜವನ್ನು ಮಾನವೀಯಗೊಳಿಸುತ್ತಿವೆ. ಎಂದು ಹೇಳಬಹುದು. ಆಧುನಿಕ ಸ್ತ್ರೀವಾದ ದೇಶ, ವರ್ಗ, ವರ್ಣ, ಧರ್ಮ, ಕುಟುಂಬ, ವಿವಾಹ ಮತ್ತು ಜಾತಿ ಜನಾಂಗ ಮುಂತಾದ ಸಾಮಾಜಿಕ ಸಂಸ್ಥೆಗಳ ಮುಂದೆ ಸ್ತ್ರೀ ಶೋಷಣೆಯ ಹಲವಾರು ಪ್ರಶ್ನೆಗಳನ್ನು ಎತ್ತಿವೆ. ಮಹಿಳಾ ಅಧೀನತೆಗೆ ಕಾರಣವಾಗಿರುವ ಶಕ್ತಿಗಳನ್ನು ಕಟಕಟೆಗೆ ತಂದು ನಿಲ್ಲಿಸಿವೆ. ಈ ಹಿನ್ನೆಲೆಯಲ್ಲಿ ಭಾರತದ ಸಮಾಜದಲ್ಲಿನ ಮಹಿಳೆ ಮತ್ತು ಸ್ತ್ರೀವಾದವನ್ನು ಚರ್ಚಿಸುವಾಗ, ಇಲ್ಲಿನ ಪುರುಷ ಕೇಂದ್ರಿತ ಯಜಮಾನ ಸಂಸ್ಕೃತಿ ಹಾಗೂ ಅದು ಶತಮಾನಗಳಿಂದ ಬೆಳಸಿದ ದಾಸ್ಯದ ಪದರುಗಳು, ಆ ಪದರುಗಳಲ್ಲಿ ಕಳೆದುಹೋಗುತ್ತಿರುವ ಮಹಿಳೆ ನಡೆಸಿದ ವಿಮೋಚನಾ ಹೋರಾಟಗಳು ಹಾಗೂ ಫಲಾಫಲಗಳು ತನ್ಮೂಲಕ ಒಡಮೂಡಿದ ತಾತ್ವಿಕತೆ, ಆಶಯ ಹಾಗೂ ಗುರಿಗಳು ಅನಾವರಣಗೊಳ್ಳುತ್ತಾ ಹೋಗುತ್ತವೆ. ಮಹಿಳಾ ವಿಮೋಚನಾ ಹೋರಾಟದ ಜಾಡು ಹಿಡಿದು ಹೊರಟಾಗ, ಜಾತಿ ಶ್ರೇಣೀಕರಣದ ಭಾರತೀಯ ಸಮಾಜದಲ್ಲಿ ಜಾತಿ ಆಧಾರಿತ ಮಹಿಳಾ ಶ್ರೇಣೀಕರಣವೂ ಇರುವುದು ಸೂರ್ಯ ಪ್ರಾಕಾಶದಷ್ಟು ನಿಚ್ಚಳ. ಭಾರತದಲ್ಲಿನ ಜಾತಿ ಪದ್ಧತಿ ಮತ್ತು ಅದು ರೂಪಿಸಿದ್ದ ವಿಘಟಿತ ಸಮಾಜ ಹಾಗೂ ರಾಷ್ಟ್ರೀಯ ಐಕ್ಯತೆಗೆ ಅದು ಒಡ್ಡುತ್ತಿರುವ ಸವಾಲುಗಳನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ವಸಾಹತುಶಾಹಿ ಬ್ರಿಟಿಷ್ ಆಳ್ವಿಕೆಯ ಸಂದರ್ಭದಲ್ಲಿ ಹಲವಾರು ಸಮಾಜ ಸುಧಾರಕರು ಹಾಗೂ ಸಮಾಜ ಪರಿವರ್ತನಾಕಾರರು ಜಾತಿಪದ್ಧತಿ ವಿರುದ್ಧ ಸಮರ ಸಾರಿದ್ದನ್ನು ನಾವು ಗಮನಿಸಬಹುದಾಗಿದೆ. ಅವರಲ್ಲಿ ಪ್ರಮುಖವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್, ಶಾಹು ಮಹಾರಾಜ್, ಸಯ್ಯಾಜಿರಾವ್ ಗಾಯಕ್‌ವಾಡ್, ಜ್ಯೋತಿಬಾ ಪುಲೆ, ಸಾವಿತ್ರಿಬಾಯಿ ಪುಲೆ, ನಾರಾಯಣ ಗುರು, ಅಯ್ಯನ್‌ಕಾಳಿ, ಪೆರಿಯಾರ್ ರಾಮಸ್ವಾಮಿ ನಾಯ್ಕರ್, ಮಹರ್ಷಿ ಕರ್ವೆ, ಪಂಡಿತ ರಮಾಬಾಯಿ, ತಾರಾಬಾಯಿ, ಮಹಾತ್ಮಾ ಗಾಂಧೀಜಿ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರು. ಇವರಲ್ಲಿ ಜಾತಿ ಪದ್ಧತಿ ವಿರುದ್ಧ ತಾರ್ಕಿಕವಾಗಿ ಹಾಗೂ ಸೈದ್ಧಾಂತಿಕವಾಗಿ ಹೋರಾಟವನ್ನು ಕಟ್ಟಿದ ಡಾ. ಬಿ.ಆರ್. ಅಂಬೇಡ್ಕರ್ ಅವರ ದೃಷ್ಟಿಕೋನ, ಸ್ತ್ರೀವಾದಿ ಚಿಂತನೆಗೆ ಭದ್ರ ನೆಲೆಗಟ್ಟಾಗಿರುವುದನ್ನು ಗುರುತಿಸಬಹುದು. ಭಾರತದ ಪ್ರಮುಖ ಚಿಂತಕರಲ್ಲಿ ಒಬ್ಬರಾದ ಅಂಬೇಡ್ಕರ್ ಅವರನ್ನು ಕುರಿತು ಕಂಚ ಇಲಯ್ಯ ಅವರು **"Ambedkar's Image is grow day by day into magnitude prophetic personality"** ಇದಕ್ಕೆ ಸಂವಾದಿಯಾಗಿರುವ ಶ್ರೀ ವೆಲರಿಯನ್ ರೋಡ್ರಿಗಸ್ ಅವರು **"It would have been a different India without him and in all probability a much more inequaliable & unjust on"** ಎಂದು ಬರೆಯುತ್ತಾರೆ. ಅಂಬೇಡ್ಕರ್ ಅವರ ಚಿಂತನೆಗಳು, ಚಳುವಳಿಗಳು ಮತ್ತು ಸಂವಿಧಾನದತ್ತವಾಗಿ ಒದಗಿಸಿದ ಹಕ್ಕುಗಳು, ಅವಕಾಶಗಳು, ಅಧಿಕಾರಗಳು ಸ್ತ್ರೀವಾದದ ತಾತ್ವಿಕತೆಗೆ ಹೇಗೆ ನೆಲೆಗಟ್ಟಾಗಿದೆ, ಎಂಬುದನ್ನು ಸಂಕ್ಷಿಪ್ತವಾಗಿ ಹೇಳಲು ಪ್ರಯತ್ನಿಸಲಾಗಿದೆ. ಹೀಗೆ ಹೇಳುವ ಸಂದರ್ಭದಲ್ಲಿ ಮೂರು ಆಯಾಮಗಳಲ್ಲಿ ಅಂಬೇಡ್ಕರ್ ಚಿಂತನೆಗಳು ಹಾಗೂ ಮಹಿಳಾ ವಿಮೋಚನೆಯನ್ನು ತಿಳಿದುಕೊಳ್ಳಬಹುದಾಗಿದೆ. 1) ಭಾರತದ ಮಹಿಳಾ ಸಮುದಾಯದ ಕುರಿತಾದ ಅಂಬೇಡ್ಕರ್ ಚಿಂತನೆಗಳು, 2) ಮಹಿಳಾಪರ ಹೋರಾಟಗಾರನಾಗಿ ಅಂಬೇಡ್ಕರ್, 3) ಮಹಿಳೆಯರ ಹಕ್ಕು, ಅಧಿಕಾರಗಳನ್ನು ಸಂವಿಧಾನಾತ್ಮಕಗೊಳಿಸಿದ ಅಂಬೇಡ್ಕರ್.

ಬ್ರಿಟಿಷ್ ಇಂಡಿಯಾದಲ್ಲಿ ರಾಷ್ಟ್ರೀಯ ಚಳುವಳಿ ರೂಪುಗೊಳ್ಳುತ್ತಿದ್ದ ಸಂದರ್ಭದಲ್ಲಿ ಎರಡು ಪ್ರಧಾನ ಧಾರೆಗಳಲ್ಲಿ ಭಾರತೀಯ ಸಮಾಜ, ಜಾತಿಪದ್ಧತಿ, ಅಸ್ಪಶ್ಯತೆ, ನಿಮ್ನವರ್ಗ, ಲಿಂಗತಾರತಮ್ಯ, ಶಿಕ್ಷಣದ ಪ್ರಶ್ನೆಗಳು, ಸ್ವಾತಂತ್ರ್ಯ ಹೋರಾಟದೊಂದಿಗೆ ಮಿಳಿತವಾಗಿ ಅನೇಕ ಸುಧಾರಣಾ ಕಾರ್ಯಕ್ರಮಗಳು, ಕಾನೂನುಗಳು ಜಾರಿಗೊಂಡವು. ಮೊದಲನೆಯದು ಭಾರತದ ಬಿಡುಗಡೆಯೇ ಪ್ರಥಮ ಆದ್ಯತೆಯಾಗಿ ಪರಿಗಣಿಸಿದ ಗಾಂಧೀಜಿ ಅವರ, "ಮಹಿಳೆ ಹಾಗೂ ಶ್ರೇಣೀಕೃತ ಸಮಾಜ ಸುಧಾರಣಾ ಕಾರ್ಯಕ್ರಮಗಳು" ಎರಡನೆಯದು ಜಾತಿ ಸಂಘರ್ಷದಿಂದಲೇ ಮಹಿಳೆಯರು ಮತ್ತು ದಲಿತರು ಆರೋಗ್ಯಪೂರ್ಣ ಸಮಾಜವನ್ನು ಕಟ್ಟಬಹುದು ಮತ್ತು ಬಿಡುಗಡೆಯನ್ನು ಕಾಣಬಹುದೆಂಬ ಚಿಂತನಾಕ್ರಮ. "ಹಿಂದೂ ಸಮಾಜದಲ್ಲಿ ಮಹಿಳೆ ಮತ್ತು ದಲಿತ ಎಂಬುದು ವಿಭಜಿಸಿ ಗ್ರಹಿಸಬೇಕಾದ ಸಂಗತಿಯಲ್ಲ. ಮನುವಿನ ಅಣತಿಯಂತೆ ನಡೆಯುವ ಸಮಾಜದಲ್ಲಿ ಸ್ತ್ರೀ ಮತ್ತು ಶೂದ್ರರ ಸ್ಥಾನಮಾನಗಳು ದುಃಖದುಮ್ಮಾನಗಳು ಬೇರೆ ಬೇರೆಯೇ ಅಲ್ಲ. ಜಾತಿ ಪದ್ಧತಿಯು ಪುರುಷಾಧಿಕಾರದ ಪ್ರಧಾನ ಸಾಧನವಾಗಿದೆ ಮತ್ತು ಮಹಿಳೆಯರು ಜಾತಿವಿನಾಶದ ಹೋರಾಟದಲ್ಲಿ ತೊಡಗಿದಾಗ ಮಾತ್ರ ಮಹಿಳಾ ವಿಮೋಚನೆ ಸಾಧ್ಯ. ಲಿಂಗ ತಾರತಮ್ಯದ ಹೋರಾಟಕ್ಕೆ ಜಾತಿ ವಿನಾಶದ ಹೋರಾಟವೇ ಅನಿವಾರ್ಯವಾದುದಾಗಿದೆ. ಎಂಬ ಅಭಿಪ್ರಾಯವನ್ನು ಅಂಬೇಡ್ಕರ್ ಹೊಂದಿದ್ದರು.

ಮುಂದುವರಿಯುವುದು...



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕನ್ನಡ – ಇಂಗ್ಲಿಷ್ ಮಾಸಪತ್ರಿಕೆ

BAPU PRAPANCHA

(A Monthly Kannada - English Magazine of Gandhian Thoughts)

ಪ್ರಧಾನ ಸಂಪಾದಕರು :
ನಾಡೋಜ ಡಾ.ವೂಡೇ ಪಿ. ಕೃಷ್ಣ
Chief Editor :
Nadoja Dr. Wooday P. Krishna

ಸಂಪಾದಕರು : ಇಂದಿರಾ ಕೃಷ್ಣಪ್ಪ
Editor : **Indira Krishnappa**

ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ
Advisory Editor : **V.N. Tippana Gouda**

ಪ್ರಕಾಶಕರು : ಕಾರ್ಯದರ್ಶಿ
ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು–560001

Published by :
Karnataka Gandhi Smaraka Nidhi
Gandhi Bhavana, Kumarapark East
Bengaluru - 560001
Phone : +91 80 22261967, 9738605799
gandhibhavanabengaluru@gmail.com

Design & Print : **CreativeGeekZ**
Yadhava College Road, Madhavanagara
Bengaluru - 560001
Ph : +91 80 40927049
E-mail : mail@creativegeekz.com



ಈ ಸಂಚಿಕೆಯಲ್ಲಿ

ಸಂಪಾದಕೀಯ



ಇಂದಿರಾ ಕೃಷ್ಣಪ್ಪ

ಸಹೃದಯ ಓದುಗ ಬಳಗದವರಿಗೆ ವಂದನೆಗಳು.

ಕರೋನಾ–19 ಆರಂಭವಾಗಿ ದಿ.25.03.2021ಕ್ಕೆ ಒಂದು ವರ್ಷ ತುಂಬಿದೆ. ಆಗಿನ ಲಾಕ್‌ಡೌನ್ 68 ದಿನಗಳು ಜಾರಿಯಲ್ಲಿದ್ದು ವರ್ಷ ಕಳೆದಿದೆ. ಇಡೀ ದೇಶದಲ್ಲಿ ಕರ್ಫ್ಯೂ ರೀತಿ ವಾತಾವರಣ ನಿರ್ಮಾಣವಾದ ಪ್ರಥಮ ಆವೃತ್ತಿ 2020 ಮಾರ್ಚ್ 25ರ ಮಧ್ಯಾಹ್ನ 12 ಗಂಟೆಯಿಂದ, ಏಪ್ರಿಲ್ 14ರವರೆಗೆ ಜಾರಿಯಾಗಿತ್ತು. 2ನೇ ಹಂತದ ಲಾಕ್‌ಡೌನ್ ಏಪ್ರಿಲ್ 15 ರಿಂದ ಮೇ 3ರವರೆಗೆ 19 ದಿನಗಳು, 3ನೇ ಹಂತದಲ್ಲಿ ಮೇ 4 ರಿಂದ 11ರವರೆಗೆ 14 ದಿನಗಳು, 4ನೇ ಹಂತದಲ್ಲಿ ಮೇ 18ರಿಂದ 31ರವರೆಗೆ ಜಾರಿಯಲ್ಲಿತ್ತು. ಅಗತ್ಯ ಸೇವೆಗಳ ಹೊರತುಪಡಿಸಿ ಶಾಲಾ ಕಾಲೇಜು, ಸರ್ಕಾರಿ ಕಚೇರಿಗಳು ಪ್ರತಿಯೊಂದು ರಾಜ್ಯ, ಕೇಂದ್ರಾಡಳಿತ ಪ್ರದೇಶ, ಪ್ರತಿ ಜಿಲ್ಲೆ, ಗ್ರಾಮಗಳು ಲಾಕ್‌ಡೌನ್‌ಗೆ ಒಳಪಟ್ಟವು. ಆಗ ಕೊರೋನಾ 562 ಪ್ರಕರಣಗಳು ದಾಖಲಾಗಿ 10 ಸಾವು ಸಂಭವಿಸಿತ್ತು. ಕೊರೋನಾ ಸೋಂಕು ಒಬ್ಬರಿಂದ ಒಬ್ಬರ ನಿಕಟ ಸಂಪರ್ಕದಿಂದ ಕೆಮ್ಮಿದಾಗ, ಸೀನಿದಾಗ ಹರಡುತ್ತದೆ. ಹಿರಿಯರಿಗೆ ಮತ್ತು ಗಂಭೀರ ಕಾಯಿಲೆಯವರಿಗೆ ಸೋಂಕು ತಗುಲಿದರೆ, 20% ಜನರಿಗೆ ಸಮಸ್ಯೆಗಳಾಗುತ್ತದೆ. 30% ಮಂದಿಗೆ ತೀವ್ರನಿಗಾ ಬೇಕಾಗಬಹುದು. 30 ವರ್ಷಕ್ಕಿಂತ ಕಿರಿಯರಿಗೆ ಮತ್ತು ಆರೋಗ್ಯವಂತರಲ್ಲಿ ಕೊರೋನಾ ಬಂದರೂ 85–90% ಜನರಲ್ಲಿ ಸಮಸ್ಯೆ ಉಂಟು ಮಾಡದೆ ವಾಸಿಯಾಗುತ್ತದೆ ಎಂಬ ಸಾಮಾನ್ಯ ಅರಿವು ಎಲ್ಲರಲ್ಲೂ ನಂತರದಲ್ಲಿ ರೂಢಿಯಾಯಿತು. ಲಾಕ್‌ಡೌನ್ ವೇಳೆಯಲ್ಲಿ ಜನರ ಜೀವನ ಶೈಲಿಯೇ ಬದಲಾವಣೆಗೆ ಒಳಪಟ್ಟು, ಕಚೇರಿಗಳಲ್ಲಿ ಶೇ 50% ಸಿಬ್ಬಂದಿ, ಆನ್‌ಲೈನ್ ಶಿಕ್ಷಣ, ವಾಟ್ಸಾಪ್ ಪರೀಕ್ಷೆ, ವರ್ಕ್‌ಫ್ರಂ ಹೋಂ, ವೆಬಿನಾರ್, ಝೂಮ್ ಆಫ್ ಮೀಟಿಂಗ್, ಸಭೆ, ಸಮಾರಂಭಗಳು ವರ್ಚುವಲ್, 12 ಕೋಟಿ ಉದ್ಯೋಗ ಬಂದ್, 3 ಕೋಟಿ ಉದ್ಯೋಗ ನಷ್ಟ, ಜಿಲ್ಲೆಗಳ ಹಸಿರು–ಕಿತ್ತಳೆ–ಕೆಂಪು ವಲಯಗಳಾಗಿ ವಿಂಗಡನೆ. ಲಕ್ಷಗಟ್ಟಲೆ ಕಾರ್ಮಿಕ ವಲಸೆ, ಗುಳೆ, ಪ್ರಾಣಹಾನಿ, ಸಾವು, ರೈಲು, ವಿಮಾನ, ಬಸ್ ಸಂಚಾರ ಸ್ತಬ್ಧ, ಗಾರ್ಮೆಂಟ್ಸ್ ವಲಯ ಸ್ಥಬ್ಧ, ಆರ್ಥಿಕ ಸ್ಥಿತಿ ಪಾತಾಳಕ್ಕೆ ಕುಸಿತ– ಹೀಗೆ ಇಡೀ ದೇಶ, ವಿಶ್ವವೇ ಕೊರೋನಾ–19ರ ಹಿಡುಗಿನಿಂದ, ತತ್ತರಿಸಿತು. ಜೂನ್ 1 ರಿಂದ ಡಿಸೆಂಬರ್‌ವರೆಗೆ ಹಂತಹಂತವಾಗಿ, ಅನ್‌ಲಾಕ್ ಪ್ರಕ್ರಿಯೆಗಳು ಆರಂಭವಾಗಿ ಜನಜೀವನ ಸಹಜ ಸ್ಥಿತಿಗೆ ಬಂದಿತ್ತು. ಆದರೆ ಲಾಕ್‌ಡೌನ್ ಅವಧಿಯಲ್ಲಿ–75000 ಕೊರೋನಾ ಪ್ರಕರಣಗಳು, 2500 ಮಂದಿ ಸಾವು, ದಿನಕ್ಕೆ 4000 ಪ್ರಕರಣಗಳ ಏರಿಕೆ ಆರಂಭವಾಗಿದ್ದವು. ನಂತರದ ಈ ಒಂದು ವರ್ಷದಲ್ಲಿ 1 ಕೋಟಿ 17 ಲಕ್ಷ ಕೊರೋನಾ ಪ್ರಕರಣಗಳು, 1.60 ಲಕ್ಷ ಜನ ಸೋಂಕಿನಿಂದ ಮೃತಪಟ್ಟರು ಮತ್ತು ಒಂದು ಕೋಟಿ 20 ಲಕ್ಷ ಜನ ಸೋಂಕಿನಿಂದ ಚೇತರಿಸಿಕೊಂಡರು. ಆದರೆ ಕೊರೋನಾ ಪ್ರಕರಣಗಳು ಮಾರ್ಚ್ 2021 ರಿಂದ ಅತಿವೇಗವಾಗಿ ಹಬ್ಬುತ್ತಿರುವ ಭೀತಿ, ಜನರು ಹಾಗೂ ಸರ್ಕಾರವನ್ನು ತಲ್ಲಣಗೊಳಿಸಿದೆ. ಪುನಃ ಲಾಕ್‌ಡೌನ್ ಸ್ಥಿತಿಗೆ ಹೋಗಬಾರದೆಂಬ ಜಿಜ್ಞಾಸೆಯಿಂದ ವೀಕೆಂಡ್ ಕರ್ಫ್ಯೂ, ಹೊಸ ಮಾರ್ಗಸೂಚಿಗಳು, ನಿರ್ಬಂಧಗಳು, ಕಠಿಣ ಕ್ರಮಗಳು ಜಾರಿಯಾಗುತ್ತಿವೆ. ಈ ಸಂಪಾದಕೀಯ ಬರೆಯುವ ವೇಳೆಗೆ ದೇಶದಲ್ಲಿ ಒಂದೇ ದಿನ 2 ಲಕ್ಷ ಪ್ರಕರಣ ದಾಖಲು, ರಾಜ್ಯದಲ್ಲಿ 14,738 ಪ್ರಕರಣಗಳು ದಾಖಲು, 66 ಜನರು ದೇಶದಲ್ಲಿ ಒಂದೇ ದಿನ ಸಾವಿಗೀಡಾಗುತ್ತಿದ್ದಾರೆ. ಮೊದಲ ಅಲೆಗಿಂತಲೂ ಅತಿ ತೀವ್ರವಾದ್ದರಿಂದ ರಾಜ್ಯದಲ್ಲಿ ಆಸ್ಪತ್ರೆಗಳು, ಚಿಕಿತ್ಸೆಗಳು, ಲಸಿಕೆ ಹಾಕುವಿಕೆ, ಟೆಸ್ಟಿಂಗ್, ಕ್ವಾರಂಟೈನ್ ಕೇಂದ್ರಗಳು, ಹೋಂ ಕ್ವಾರಂಟೈನ್ ವ್ಯವಸ್ಥೆಗಳು, ಟೂಲ್‌ಕಿಟ್‌ಗಳು, ಮಾಸ್ಕ್, ದೈಹಿಕ ಅಂತರ, ಸ್ಯಾನಿಟೈಸ್ ವ್ಯವಸ್ಥೆ ಅಧಿಕಾಧಿಕಗೊಂಡಿವೆ. ಆದಾಗ್ಯೂ ನೆರೆರಾಜ್ಯವಾದ ಮಹಾರಾಷ್ಟ್ರದಲ್ಲಿ 30,57,885 ಸೋಂಕಿತರು, ದಿನಕ್ಕೆ 56,033 ಜನರ ಸಾವು, ದಿನಕ್ಕೆ 47,288 ಹೊಸ ಸೋಂಕು ಹರಡುವಿಕೆ, ದಿನಕ್ಕೆ 155ರಂತೆ ಜನರ ಸಾವು ಆತಂಕವನ್ನು ಕರ್ನಾಟಕದಲ್ಲಿ ಸೃಷ್ಟಿಸಿದೆ. ಹಾಗೆಯೇ ನೆರೆರಾಜ್ಯವಾದ ಕೇರಳ, ತಮಿಳುನಾಡು, ಗುಜರಾತ್, ರಾಜಸ್ಥಾನದ ಅಂಕಿ ಅಂಶಗಳು ಕರ್ನಾಟದಲ್ಲಿ ಅತೀವ ಭಯದ ವಾತಾವರಣ ಹರಡಿದೆ. ಆದರೆ ಜನರು ಸ್ವಯಂ ಆಗಿ, ಮಾರ್ಗಸೂಚಿಗಳನ್ನು ಪಾಲನೆ ಮಾಡುವ ಅಭ್ಯಾಸ ಮಾಡಿಕೊಂಡಿರುವುದಿಲ್ಲ. ಮಾರುಕಟ್ಟೆಯಲ್ಲಿ, ರಸ್ತೆಗಳಲ್ಲಿ, ಅಂಗಡಿಗಳಲ್ಲಿ ಮುಗಿಬಿದ್ದು ವ್ಯಾಪಾರದ ಭರಾಟೆಯಲ್ಲಿರುವುದು ನಿತ್ಯ ಕಂಡುಬರುತ್ತಿದೆ. ಮಾಧ್ಯಮಗಳ (ದೃಶ್ಯ–ಶ್ರವ್ಯ) ಮುಖಾಂತರ ಕೊರೋನಾ ತೀವ್ರತೆ ಬಿತ್ತರಿಸುತ್ತಿದ್ದರೂ, ಜನರು ಕೊರೋನಾ ಕಲಿಸಿದ ಪಾಠದಿಂದ ಎಚ್ಚೆತ್ತುಕೊಳ್ಳದಿರುವುದು ಎಲ್ಲೆಲ್ಲೂ ಕಂಡು ಬರುತ್ತಿದೆ. ಆದ್ದರಿಂದ ದೇಶ ಮತ್ತೆ ಲಾಕ್‌ಡೌನ್ ಸ್ಥಿತಿಗೆ ಮರಳುವುದೇ ಶ್ರೇಯಕರವೆನಿಸುತ್ತಿದೆ.

ಇಂಥಹ ಭೀಭತ್ಸ ವಾತಾವರಣದಲ್ಲಿ, ಏಪ್ರಿಲ್ 3 ರಂದು ಛತ್ತೀಸ್‌ಗಡದ ತೇಕಲ್‌ಗುಡ್ಡ ಗ್ರಾಮದಲ್ಲಿ ಸಿ.ಆರ್.ಪಿ.ಎಫ್, ಯೋಧರ ಮೇಲೆ ನಕ್ಸಲರ ಅನಿರೀಕ್ಷಿತ ದಾಳಿಯಿಂದ 23 ಜನ ಯೋಧರನ್ನು ದೇಶ ಕಳೆದುಕೊಂಡಿತು. 35ಕ್ಕೂ ಹೆಚ್ಚು ಯೋಧರು ಅಂಗವಿಹೀನರಾದರು. ಒಬ್ಬ ಯೋಧ ಕಾಣೆಯಾದನು. ಪ್ರತಿದಾಳಿಯಿಂದ 30 ಜನ ನಕ್ಸಲರು ಬಲಿಯಾದ ಮರುಕ್ಷಣವೇ ಮೂರು ಟ್ರಾಕ್ಟರ್‌ಗಳಲ್ಲಿ ಅವರ ಮೃತ ದೇಹವನ್ನು ಹೊತ್ತೊಯ್ದರು. ಹಾಗೂ ಕೋಬ್ರಾ ತಂಡದಿಂದ ಎಕೆ–47 ರೈಫಲ್‌ಗಳು, ಮೆಷಿನ್ ಗನ್‌ಗಳನ್ನು, ಬೂಟುಗಳನ್ನು ಕದ್ದರು. ಈ ಘನಘೋರ ದಾಳಿ ನಡೆದು ಹೊರಜಗತ್ತಿಗೆ ವಿಷಯ ತಲುಪಿ, ನೆರವಿನ ಹಸ್ತ ಬರುವುದರೊಳಗೆ ನಾವು ಶೌರ್ಯ ಸ್ಥೈರ್ಯಕ್ಕೆ ಹೆಸರಾದ ಯೋಧರನ್ನು ಕಳೆದುಕೊಂಡಿದ್ದೆವು. ಸ್ವಾತಂತ್ರ್ಯೋತ್ಸವ–75ರ ವರ್ಷಾಚರಣೆ ಆರಂಭದಲ್ಲಿ ಇಂಥಹ ಭೀಕರತೆ, ಸತ್ಯ ಶಾಂತಿ, ಅಹಿಂಸೆಯ ಗಾಂಧಿ ಚಿಂತನೆಗೆ, ಅದರಂತೆ ಪಡೆದ ಸ್ವಾತಂತ್ರ್ಯ, ಪ್ರಜಾಪ್ರಭುತ್ವಕ್ಕೆ ಆತಂಕದ ಕ್ಷಣಗಳು ಎದುರಾಗುತ್ತಿರುವುದನ್ನು ತೀವ್ರವಾಗಿ ಗಮನಿಸಿ, ಅದರ ನಿವಾರಣೆಗೆ ಸರ್ಕಾರ ಎಲ್ಲಾ ರೀತಿಯಲ್ಲಿ ಕ್ರಮಕೈಗೊಳ್ಳಬೇಕಾಗಿದೆ.

ಇದೇ ಸಂದರ್ಭದಲ್ಲಿ ಸಾರಿಗೆ ನೌಕರರು 10 ದಿನಗಳಿಂದ ನಡೆಸುತ್ತಿರುವ ಮುಷ್ಕರಕ್ಕೆ ಕೊನೆ ಹಾಡಬೇಕಿದೆ. ಅವರ ಬೇಡಿಕೆಗಳನ್ನು, ಸಹೃದಯತೆಯಿಂದ ಪರಿಶೀಲಿಸುವ ಕ್ರಮ ಆಗಬೇಕಿದೆ. ಸಾರಿಗೆ ನೌಕರರು, ಸಿಬ್ಬಂದಿಗಳು ಹಗಲಿರುಳೆನ್ನದೆ, ಕೊರೋನಾ ಸಂದರ್ಭದಲ್ಲಿ ಮನೆಮಾರು ಬಿಟ್ಟು ಪ್ರಯಾಣಿಸುತ್ತಲೇ ಜೀವನ ಕಳೆಯುವರು. ಸರ್ಕಾರ ಪರ್ಯಾಯ ಮಾರ್ಗಗಳು, ಸಂಧಾನಗಳ ಮೂಲಕ ಹುದ್ದೆವಾರು, ಗ್ರೇಡ್‌ವಾರು ಸರ್ಕಾರಿ ನೌಕರಿಗೆ ಒಳಪಡಿಸುವಿಕೆ ಕ್ರಮಗಳನ್ನನುಸರಿಸುವ ಮೂಲಕ ಅವರ ಬೇಡಿಕೆ ಈಡೇರಿಸಬೇಕೆಂಬುದು ಗಾಂಧಿ ಚಿಂತಕರ ಆಶಯವಾಗಿದೆ.



ಆಫ್ರಿಕಾಕ್ಕೆ ಹೊರಡಲು ಸಿದ್ಧತೆ : ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ" ಕೃತಿಯಿಂದ ಆಯ್ದ ಭಾಗ

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸುತ್ತಿದ್ದೇವೆ.)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

"ನಿಮಗೆ ಮೊದಲನೆಯ ತರಗತಿಯಲ್ಲಿ ಸ್ಥಳ ಒದಗಿಸಲು ನಾವು ನಮ್ಮ ಕೈಲಾದ ಯತ್ನವನ್ನೆಲ್ಲ ಮಾಡಿದವು. ಆದರೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ, ಡೆಕ್ (ಕೊನೆಯ ತರಗತಿ) ನಲ್ಲಿ ನೀವು ಪ್ರಯೋಗ ಮಾಡುವುದಾದರೆ ಆಗಬಹುದು. ನಿಮ್ಮ ಊಟಕ್ಕೆ ಸಲೂನ್ (ಮೇಲು ದರ್ಜೆಯವರು ಊಟ ಮಾಡುವ ಸ್ಥಳ) ನಲ್ಲಿ ಏರ್ಪಾಡು ಮಾಡಬಹುದು" ಎಂದ ಏಜೆಂಟನು ಹೇಳಿದ. ಆಗ ನಾನು ಮೊದಲನೆಯ ತರಗತಿಯಲ್ಲಿ ಪ್ರಯಾಣ ಮಾಡುತ್ತಿದ್ದ ಕಾಲವಾಗಿತ್ತು. ಬ್ಯಾರಿಸ್ಟರು ಡೆಕ್ಕಿನಲ್ಲಿ ಪ್ರಯಾಣ ಮಾಡುವುದು ಹೇಗೆ? ಆದುದರಿಂದ ನಾನು ಅದನ್ನು ತಿರಸ್ಕರಿಸಿದೆ. ಏಜೆಂಟನ ಪ್ರಾಮಾಣಿಕತೆಗೆ ಬಗ್ಗೆಯೂ ನನಗೆ ಸಂದೇಹವುಂಟಾಯಿತು. ಮೊದಲನೆಯ ತರಗತಿಯ ಒಂದು ಸ್ಥಳ ಹಡಗಿನಲ್ಲಿ ಸಿಕ್ಕಲಾರದೆಂಬ ಮಾತಿನಲ್ಲಿ ನನಗೆ ನಂಬಿಕೆ ಇರಲಿಲ್ಲ. ಏಜೆಂಟನ ಒಪ್ಪಿಗೆ ಪಡೆದು ಮೊದಲನೆಯ ತರಗತಿಯ ಸ್ಥಳವನ್ನು ಸಂಪಾದಿಸಿಕೊಳ್ಳಲು ನಾನೇ ಪ್ರಯತ್ನ ಮಾಡತೊಡಗಿದೆ. ನಾನು ಹಡಗಿಗೆ ಹೋಗಿ ಮುಖ್ಯ ಅಧಿಕಾರಿಯನ್ನು ಭೇಟಿಯಾದೆ. ಆತ ನನಗೆ ಮುಚ್ಚುಮರೆಯಿಲ್ಲದೆ ಹೀಗೆ ಹೇಳಿದನು "ಸಾಮಾನ್ಯವಾಗಿ ನಮ್ಮ ಹಡಗಿಗೆ ಇಂತಹ ನೂಕುನುಗ್ಗಲು ಇಲ್ಲ, ಆದರೆ ಮೊಸಾಂಬಿಕ್ ಗವನ್ನರ್, ಈ ಹಡಗಿನಲ್ಲಿ ಪ್ರಯಾಣ ಮಾಡುತ್ತಿದ್ದಾರೆ, ಆದುದರಿಂದ ಎಲ್ಲ ಮಲಗುವ ಮಂಚಗಳೂ ಭರ್ತಿಯಾಗಿವೆ" ಎಂದು.

"ಹೇಗಾದರೂ ಮಾಡಿ, ನನಗೂ ಒಂದಿಷ್ಟು ಸ್ಥಳವನ್ನು ಎಲ್ಲಿಯಾದರೂ ಕೊಡಲಾರಿರಾ?" ಎಂದು ಕೇಳಿದೆ. ಆತ ನಗುತ್ತಾ ನನ್ನನ್ನು ತಲೆಯಿಂದ ಕಾಲಿನವರೆಗೆ ನೋಡಿದ. "ಒಂದೇ ಮಾರ್ಗ ಇರುವುದು. ನನ್ನ ಕ್ಯಾಬಿನ್‌ನಲ್ಲಿ ಇನ್ನೊಂದು ಮಲಗುವ ಮಂಚವಿದೆ. ಅದನ್ನು ಸಾಮಾನ್ಯವಾಗಿ ಪ್ರಯಾಣಿಕರಿಗೆ ಕೊಡುವುದಿಲ್ಲ, ಆದರೆ ನಿಮಗೆ ಅದನ್ನು ಕೊಡಲು ಸಿದ್ಧನಾಗಿದ್ದೇನೆ' ಎಂದನು. ನಾನು ಆತನನ್ನು ವಂದಿಸಿ, ಟಿಕೀಟು ಕೊಳ್ಳುವಂತೆ ಏಜೆಂಟನಿಗೆ ತಿಳಿಸಿದೆ. 1893ನೆಯ ಏಪ್ರಿಲ್‌ನಲ್ಲಿ ನಾನು ನನ್ನ ಅದೃಷ್ಟವನ್ನು ಪರೀಕ್ಷಿಸಿಕೊಳ್ಳಲು ದಕ್ಷಿಣ ಆಫ್ರಿಕಾಕ್ಕೆ ಪೂರ್ಣ ಉತ್ಸಾಹದಿಂದ ಹೊರಟೆ.

ನಮ್ಮ ಹಡಗು ನಿಂತ ಮೊದಲನೆಯ ಬಂದರು ಲಾಮು ಎಂಬುದು. ನಾವು ಹೊರಟ ಹದಿಮೂರನೆಯ ದಿನ ಅಲ್ಲಿಗೆ ತಲುಪಿದೆವು. ಆ ವೇಳೆಗೆ ಹಡಗಿನ ಕಪ್ತಾನನೂ ನಾನೂ ಒಳ್ಳೆಯ ಸ್ನೇಹಿತರಾಗಿದ್ದೆವು. ಆದರೆ ಆತನಿಗೆ ಚದುರಂಗದ ಆಟವಾಡುವುದರಲ್ಲಿ ಇಷ್ಟ ಹೆಚ್ಚು. ಆ ಆಟ ಅವನಿಗೆ ಹೊಸದಾಗಿದ್ದುದರಿಂದ, ಆ ಆಟಕ್ಕೆ ತನಗಿಂತಲೂ ಹೆಚ್ಚು ಹೊಸಬರಾಗಿದ್ದವರು ಅವನ ಜತೆಗೆ ಆಡುವುದು ಅವನಿಗೆ ಬೇಕಾಗಿತ್ತು. ಆದುದರಿಂದ ಅವನು ನನ್ನನ್ನು ಆಟಕ್ಕೆ ಆಹ್ವಾನಿಸಿದ. ಚದುರಂಗದ ಆಟದ ವಿಷಯ ನಾನು ಬಹಳ ಕೇಳಿದ್ದೆ, ಆದರೆ ಯಾವಾಗಲೂ ಆದನ್ನು ಆಡಿರಲಿಲ್ಲ. ಬುದ್ಧಿ ಶಕ್ತಿಯನ್ನು ಉಪಯೋಗಿಸಲು ಈ ಆಟದಲ್ಲಿ ಬಹಳ ಅವಕಾಶವಿದೆಯೆಂದು ಆಟಗಾರರು ಹೇಳುತ್ತಿದ್ದುದನ್ನು ಕೇಳಿದ್ದೆ. ಕಾಪ್ತಾನನು ನನಗೆ ಪಾಠ ಹೇಳಿ ಕೊಡಲು ಮುಂದೆ ಬಂದನು. ನನ್ನ ತಾಳ್ಮೆಗೆ ಮಿತಿಯೇ ಇಲ್ಲದುದರಿಂದ ನಾನು ಆತನಿಗೆ ಒಳ್ಳೆಯ ಶಿಷ್ಯನಾದೆ. ನಾನು ಪ್ರತಿ ಆಟದಲ್ಲಿಯೂ ಸೋಲುತ್ತಿದ್ದೆ. ಆದರಿಂದ ನನಗೆ ಆಟವನ್ನು ಕಲಿಸಬೇಕೆಂಬ ಆಸೆ ಆತನಿಗೆ ಇನ್ನೂ ಹೆಚ್ಚಾಯಿತು, ಚದುರಂಗದ ಆಟ ನನಗೂ ಪ್ರಿಯವಾಯಿತು. ಆದರೆ ಅದರಲ್ಲಿ ನನ್ನ ಅಭಿರುಚಿ ಹಡಗಿನಲ್ಲಿಯೇ ಕೊನೆಗೊಂಡಿತು. ರಾಜ ರಾಣಿ ಮುಂತಾದುವುಗಳನ್ನು ನಡೆಸುವುದರ ಆಚೆಗೆ ನನಗೆ ಅದನ್ನು ಕಲಿಯುವುದು ಸಾಧ್ಯವಾಗಲಿಲ್ಲ. ಲಾಮು ಬಂದರಿನಲ್ಲಿ, ಹಡಗು ಲಂಗರು ಹಾಕಿ, ಮೂರು ನಾಲ್ಕು ಗಂಟೆಗಳ ಕಾಲ ಉಳಿಯಿತು. ಬಂದರನ್ನು ನೋಡುವುದಕ್ಕಾಗಿ ನಾನು ಇಳಿದೆನು. ಕಪ್ತಾನನೂ ಸಹ ಹಡಗಿನಿಂದ ಇಳಿದು ಹೋದನು. ಆದರೆ ಆತ ನನಗೆ "ಇಲ್ಲಿ ಸಮುದ್ರವನ್ನು ನಂಬುವುದಕ್ಕಾಗುವುದಿಲ್ಲ, ನೀನು ಜಾಗ್ರತೆಯಿಂದ ಹಿಂದಿರುಗಿಬಿಡು" ಎಂದು ಹೇಳಿದನು. ಅದು ಬಹಳ ಸಣ್ಣ ಊರು. ನಾನು ಅಂಚೆ ಆಫೀಸಿಗೆ ಹೋದೆ. ಅಲ್ಲಿದ್ದ ಭಾರತೀಯ ನೌಕರರನ್ನು ನೋಡಿ ನನಗೆ ಸಂತೋಷವಾಯಿತು. ಅವರೊಂದಿಗೆ ನಾನು ಮಾತನಾಡಿದೆ. ಅಲ್ಲಿ ನಾನು ಆಫಿಕನ್ನರನ್ನು ನೋಡಿದೆ. ಅವರ ಜೀವನದ ರೀತಿನೀತಿಗಳಲ್ಲಿ ನನಗೆ ಬಹಳ ಕುತೂಹಲವುಂಟಾಗಿತ್ತು. ಅದನ್ನು ತಿಳಿದುಕೊಳ್ಳಲು ಪ್ರಯತ್ನಪಟ್ಟೆ. ಇವೆಲ್ಲದರಿಂದ ಸ್ವಲ್ಪ ಕಾಲ ಕಳೆದುಹೋಯಿತು.

ಡೆಕ್‌ನಲ್ಲಿ ಪ್ರಯಾಣ ಮಾಡುತ್ತಿದ್ದ ಕೆಲವು ಪ್ರಯಾಣಿಕರಿಗೂ ನನಗೂ ಹೆಚ್ಚು ಪರಿಚಯವಾಗಿತ್ತು. ಅವರಲ್ಲಿ ಕೆಲವರು ನಿಧಾನವಾಗಿ ಅಡಿಗೆ ಮಾಡಿಕೊಂಡು ಶಾಂತವಾಗಿ ಊಟಮಾಡುವ ಉದ್ದೇಶದಿಂದ ಹಡಗಿನಿಂದ ಇಳಿದಿದ್ದರು. ಈಗ ತಮ್ಮ ಕೆಲಸವನ್ನು ಮುಗಿಸಿಕೊಂಡು ಅವರು ಹೊರಡಲು ಸಿದ್ಧರಾಗಿದ್ದರು. ಆದುದರಿಂದ ನಾವೆಲ್ಲರೂ ಒಂದೇ ದೋಣಿಯನ್ನು ಏರಿದೆವು. ಬಂದರಿನಲ್ಲಿ ಅಲೆಗಳ ಹೊಡೆತ ಜೋರಾಗಿದ್ದಿತು. ನಮ್ಮ ದೋಣಿ ಹೊರಬಹುದಾದುದಕ್ಕಿಂತ ಹೆಚ್ಚು ಜನರನ್ನು ಹೊತ್ತಿತ್ತು. ಪ್ರವಾಹವು ಅತ್ಯಂತ ವೇಗವಾಗಿತ್ತು. ದೋಣಿಯ ಹಗ್ಗವನ್ನು ಹಡಗಿನ ಏಣಿಗೆ ಕಟ್ಟಲು ಸಾಧ್ಯವಾಗುತ್ತಲೇ ಇರಲಿಲ್ಲ

ಮುಂದುವರಿಯುವುದು...

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕರ್ನಾಟಕದಲ್ಲಿ ಕಾಂಗ್ರೆಸ್ : ಬೆಳಗಾವಿ, 1924

ಮೋ. ಕ. ಗಾಂಧಿ (ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ) : ಸಂಪಾದನೆ : ಸಿದ್ದವನಹಳ್ಳಿ ಕೃಷ್ಣಶರ್ಮ

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು - ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)


ಹಾಗೆ ಅದರ ಅರ್ಥಮಾಡಿದರೆ ನೀವು ಪರದೇಶಿ ವಸ್ತ್ರವನ್ನು ಪರಿಣಾಮಕಾರಿಯಾಗಿ ಬಹಿಷ್ಕರಿಸಲಾರಿರಿ; ಈ ಒಪ್ಪಂದವನ್ನು ಓದಿ, ಅದರ ಸತ್ಯವನ್ನು ಅರ್ಥಮಾಡಿಕೊಳ್ಳಿ ಎನ್ನುತ್ತೇನೆ. ಕಾಂಗ್ರೆಸ್ ಸದಸ್ಯರಿಂದ ನಾವು ಅಪೇಕ್ಷಿಸುವ ಕನಿಷ್ಠ ಬಯಕೆ ಇದು. ಎಂದಮೇಲೆ ಜನರಿಂದ ಇದಕ್ಕಿಂತ ಹೆಚ್ಚು ನಾವು ಹೇಗೆ ಅಪೇಕ್ಷಿಸಬಹುದು? ವಯಸ್ಕರಾದ ನಾವಷ್ಟೇ ಅಲ್ಲ ಮಕ್ಕಳು ಕೂಡ ಎಲ್ಲ ಸಂದರ್ಭಗಳಲ್ಲಿಯೂ ಖಾದಿಯನ್ನು ಧರಿಸಬೇಕು. ಎಂದರೆ ಖಾದಿ ನಮ್ಮೆಲ್ಲರ ನಿತ್ಯೋಪಯೋಗದ ವಸ್ತ್ರ ಆಗಬೇಕು. ಹಾಗೆ ಆಗದಿದ್ದರೆ ಬಹಿಷ್ಕಾರ ಯಶಸ್ವಿ ಆಗಲಾರದು.

ಇಷ್ಟ ಇಲ್ಲದಿರುವವರನ್ನು ತಾವು ಸ್ವಯಂ ನೂಲಬೇಕಾಗಿಲ್ಲ ಎಂದು ಕೊಟ್ಟ ವಿನಾಯಿತಿ ನೂಲದೇ ಇರಲು ಒಂದು ಅವಕಾಶ ಎನ್ನುತ್ತಾರೆ. ಆದರೆ ಒಪ್ಪಂದವನ್ನು ಹಾಗೆ ನಾನು ಓದುವುದಿಲ್ಲ. ನೀವು ಹಾಗೆ ಅರ್ಥಮಾಡುವುದಾದರೆ ನಾಳೆ ಗೊತ್ತುವಳಿಯನ್ನು ನಿರಾಕರಿಸುತ್ತೇನೆ. ಅದರಿಂದ ಪರದೇಶೀ ವಸ್ತ್ರ ಬಹಿಷ್ಕಾರ ಅಸಾಧ್ಯವಾಗುತ್ತದೆ ಎಂದು ನನಗೆ ನೋವೆನಿಸುತ್ತದೆ. ಆದರೂ ಚಿಂತೆಯಿಲ್ಲ. ಇಷ್ಟವಿಲ್ಲದಿರುವ ಈ ಮಾತು ಬಂದಿರುವುದು ದೈಹಿಕವಾಗಿ ಅಸಮರ್ಥರಾಗಿ ಮತ್ತು ಇಷ್ಟವಿಲ್ಲದಿರುವವರಿಗಾಗಿ. ಮಕ್ಕಳು ಖಂಡಿತವಾಗಿಯೂ ಈ ವಿವರದಲ್ಲಿ ಬರುವುದಿಲ್ಲ. ಪರದೇಶೀ ವಸ್ತ್ರ ಬಹಿಷ್ಕಾರವಾಗಬೇಕಾದರೆ ಈ ಒಪ್ಪಂದವನ್ನು ನೀವು ನಡೆಸಲೇಬೇಕು. ಪ್ರಾಮಾಣಿಕವಾಗಿ ನಾವು ಪ್ರಯತ್ನಿಸಿದರೆ ಸಫಲತೆ ಬಂದೇ ಬರುತ್ತದೆ. ಪ್ರತಿನಿಧಿಗಳು ಹಳ್ಳಿಗಳಲ್ಲಿ ಹರಡಿಕೊಂಡು ರಾಟೆಯ ಸಂದೇಶವನ್ನು ಬೀರುತ್ತ ಬಂದರೆ, ನಮ್ಮಲ್ಲಿಯ ಉತ್ತಮೋತ್ತಮರ ಸಮಸ್ತಶಕ್ತಿಯು ಇದರಲ್ಲಿ ತೊಡಗಿಕೊಳ್ಳುತ್ತದೆ. ಇದರಲ್ಲಿ ನಿಮಗೆ ನಂಬಿಕೆ ಇಲ್ಲದಿದ್ದರೆ ಈ ಗೊತ್ತುವಳಿಯನ್ನು ಸ್ವೀಕರಿಸುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ನಾಳೆ ನಾವು ಸೇರಿದಾಗ ಅದರ ಪೂರ್ಣ ಪರಿಣಾಮವನ್ನು ಅರಿತುಕೊಂಡು ನೀವು ಮತ ಕೊಡಿ. ಈ ಕಾರ್ಯಕ್ರಮವನ್ನು ನೀವು ಪ್ರಾಮಾಣಿಕವಾಗಿ ನಡೆಸದಿದ್ದರೆ, ಇದು ಸಫಲ ಆಗಲಾರದು. ಪ್ರತಿಯೊಬ್ಬ ಪ್ರತಿನಿಧಿಯೂ ಹಿಂದಕ್ಕೆ ಹೋದಾಗ ತಮ್ಮ ಪ್ರಾಂತದ ಹಳ್ಳಿಗರೊಂದಿಗೆ ಸಂಪರ್ಕ ಬೆಳೆಸಿಕೊಂಡು ಅವರು ಏನು ಮಾಡಬೇಕು ತಿಳಿಸಿ ಹೇಳಬೇಕು. ನಾಳೆ ಮತ ಕೊಡುವಾಗ ಇದರ ಪರಿಣಾಮವನ್ನು ಯೋಚಿಸಿ ವಿಚಾರಪೂರ್ವಕವಾಗಿ ಮತ್ತು ಮನಃಪೂರ್ವಕವಾಗಿ ಮತ ಕೊಡಬೇಕು.

ನೀವು ಇಲ್ಲಿಂದ ಹೊರಟುಹೋಗುವ ಮೊದಲು ನಿಮಗೆ ಎಚ್ಚರಿಕೆ ಕೊಟ್ಟು ನಿಮ್ಮ ಮೇಲೆ ಇರುವ ಈ ಪವಿತ್ರ ಭಾರದ ಬಗ್ಗೆ ನಿಮಗೆ ನೆನಪು ಕೊಡುತ್ತೇನೆ. 27ನೇ ತಾರೀಖಿಗೆ ಎಲ್ಲ ಕೆಲಸವನ್ನು ಮುಗಿಸಿ ಒಂದು ದಿನ ಅ. ಭಾ. ಕಾಂಗ್ರೆಸ್ ಸಮಿತಿಯ ಕೆಲಸಕ್ಕೆ ಕಾರ್ಯಕಲಾಪದ ವಿಧಾನಕ್ಕೆ ಕಾರ್ಯನಿರ್ವಾಹಕ ಸಮಿತಿಯ ನೇಮಕಕ್ಕೆ ಇಟ್ಟುಕೊಳ್ಳೋಣ.

(ಆಗ ಕೇಳ್ಕರ್ ಅವರು ಮಹಾತ್ಮ ಗಾಂಧೀಜಿಗೆ ಹೀಗೆ ಹೇಳಿದರು. "ನಿಮ್ಮ ವಿನಂತಿಯನ್ನು ಕೇಳಿದೆ. ಇದು ಸ್ವರಾಜ್ಯ ಪಕ್ಷದವರಿಗೆ ಆಯಿತು. ಇನ್ನೊಂದು ಭಾಗ ಇದೆಯಲ್ಲ ಒಪ್ಪಂದದ್ದು, ವಿಧಾನಸಭೆಯ, ಶಾಸನಸಭೆಯ ಕಾರ್ಯ, ಕಾಂಗ್ರೆಸ್ ಪರ ನಡೆಯಬೇಕು. ಶಾಸನಸಭಾ ಸದಸ್ಯರಿಗೆ ಸರ್ವ ವಿಧದಲ್ಲಿಯೂ ನೆರವಾಗಬೇಕು ಎಂದು ಅಪರಿವರ್ತನವಾದಿಗಳಿಗೆ ವಿನಂತಿ ಮಾಡಿ.") ಕೇಳ್ಕರರ ಮಾತು ನನಗೆ ಸಂಪೂರ್ಣ ಒಪ್ಪಿಗೆ. ಆಗಲೇ ಯಂಗ್ ಇಂಡಿಯಾದಲ್ಲಿ ಇದನ್ನು ನಾನು ಬರೆದಿದ್ದೇನೆ. ನಾಳಿನ ಕೆಲಸಕ್ಕೆ ಸಿದ್ಧ ಆಗುವ ಮೊದಲು ಅಪರಿವರ್ತನ ವಾದಿಗಳಿಗೆ ನಾನು ನೆನಪು ಕೊಡಬಯಸುತ್ತೇನೆ. ನಮ್ಮ ವಿನಂತಿ ಕೇವಲ ಸ್ವರಾಜ್ಯ ಪಕ್ಷಕ್ಕಲ್ಲ. ಅಪರಿವರ್ತನವಾದಿಗಳಲ್ಲೂ ನೂಲುವ ಮತಕ್ಕೆ ವಿರುದ್ಧವಾದವರು ಇದ್ದಾರೆ ಎಂದು ಕೇಳಿದ್ದೇನೆ. ಆದ್ದರಿಂದ ಅಪರಿವರ್ತನವಾದಿಗಳಿಗೆ ನನ್ನ ವಿನಂತಿ ಇಷ್ಟು. ಈ ಒಪ್ಪಂದವನ್ನು ನನ್ನ ಮನಸ್ಸಿನಂತೆ ಅವರು ಅಂಗೀಕರಿಸಿ ಅದರಂತೆ ನಡೆಯಬೇಕು. ನನ್ನ ಸಾಮರ್ಥ್ಯ ಇದ್ದಷ್ಟು ಒಬ್ಬ ಮನುಷ್ಯ ಎಷ್ಟು ಮಾಡಬಹುದೋ ಅಷ್ಟೂ ಸಹಾಯ ಸ್ವರಾಜ್ಯಪಕ್ಷಕ್ಕೆ ಮಾಡುತ್ತೇನೆ; ಯಾವ ವಿಧದಲ್ಲಿಯೂ ಅವರ ಆಶಯಕ್ಕೆ ಧಕ್ಕೆ ತರುವುದಿಲ್ಲ. ಅವರ ಆಶಯ ಏನು ಎಂದು ತಿಳಿದೂ ತಿಳಿದೂ ಹೇಳುತ್ತಿದ್ದೇನೆ. ಏಕೋ ಏನೋ ಅವರ ವಿಧಾನಗಳು ನನಗೆ ಸರಿಬರುವುದಿಲ್ಲ. ಅವರ ಆಶಯ ಅವರದೇ ಅಲ್ಲ, ಕಾಂಗ್ರೆಸ್ಸಿನದೂ ಅಲ್ಲ, ಇಡೀ ರಾಷ್ಟ್ರದ್ದು. ನಾನು ಇದನ್ನು ತೀರ್ಮಾನಿಸಲಾರೆ. ಇದೇನು ಬಂತು ರಾಟೆ ಎಂದು ಹೇಳಲು ಅವರಿಗೆ ಸಂಪೂರ್ಣ ಹಕ್ಕು ಇದೆ. ಹಾಗೇ ನನಗೂ ಹಕ್ಕು ಇದೆ. ಇದೇನು ಈ ಶಾಶನಸಭೆಗಳ ಮಾತು ಎಂದು ಹೇಳಲು. ನೌಕರರಶಾಹಿಯನ್ನು ಎದುರಿಸಲು ಇದೊಂದು ಮುಖ್ಯ ಸಾಧನ ಎಂದು ಅವರು ಹೇಳುತಾರೆ. ನನಗೆ ಅವರ ದಾರಿ ಸರಿಕಾಣುವುದಿಲ್ಲ. ಆದರೂ ನಾನು ಸ್ವರಾಜ್ಯ ಪಕ್ಷಕ್ಕೆ ನೆರವಾಗಬಲ್ಲೆ. ಅವರ ಧೋರಣೆಗೆ ಕಾಂಗ್ರೆಸ್ಸಿನಲ್ಲಿ ನಿಶ್ಚಿತವಾದ ಸ್ಥಾನ ಕೊಡಬಲ್ಲೆ.

ಮುಂದುವರಿಯುವುದು...



ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

– ಇಂದಿರಾ ಕೃಷ್ಣಪ್ಪ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಸುಂದರಮ್ಮ ಮತ್ತು ವನಜಾಬಾಯಿ : ಬಳ್ಳಾರಿ ಜಿಲ್ಲೆಯ ಆದಾನಿ, ಹರಪನಹಳ್ಳಿ, ಹೊಸಪೇಟೆ, ಬಳ್ಳಾರಿ ಜಿಲ್ಲೆಯಲ್ಲಿ ನಡೆದ ಪ್ರಭಾತ್ ಪೇರಿಗಳಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು ಎಂಬ ಮಾಹಿತಿಯನ್ನು ಸೂರ್ಯನಾಥ ಕಾಮತ್ 1944ರ ಸಂಪುಟ – ಒಂದರಲ್ಲಿ ದಾಖಲಿಸಿದ್ದಾರೆ. ಹೊಸಪೇಟೆಯಲ್ಲಿ ಮತ್ತಿಹಳ್ಳಿ ರಾಘವೇಂದ್ರರಾಯರ ಪತ್ನಿ ಸುಂದರಮ್ಮ ಮತ್ತು ಮಗಳು ವನಜಾಬಾಯಿ ಭಾಗಿಯಾಗಿದ್ದರು ಮತ್ತು ಅವರು ಖಾದಿ ಉಡುಪು ಧಾರಿಗಳಾಗಿದ್ದರು ಮತ್ತು ಸುಂದರಮ್ಮ ಅವರು ನಂತರದಲ್ಲಿ ನಗರಸಭೆ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆಂಬ ದಾಖಲೆಗಳು ದೊರಕುತ್ತವೆ.

ಡಾ. ಲಕ್ಷ್ಮೀದೇವಿ : ಡಾ. ಲಕ್ಷ್ಮೀದೇವಿ ಅವರು ಬಾಲವಿಧವೆಯಾಗಿದ್ದು, ಗಾಂಧಿ ಅವರ ಸ್ವಾತಂತ್ರ್ಯ ಹೋರಾಟ ಮತ್ತು ರಚನಾತ್ಮಕ ಕಾರ್ಯಗಳಿಂದ ಪ್ರಭಾವಿತರಾಗಿದ್ದರು. ಇದರಿಂದಾಗಿ ಖಾದಿ ತೊಡಲು ಆರಂಭಿಸಿದರು ಮತ್ತು ಸಾರ್ವಜನಿಕ ಸಭೆಗಳಲ್ಲಿ ಭಾಗವಹಿಸಿ, ಮಹಿಳಾ ಸಂಘಟನೆಗಳಲ್ಲಿ ತೊಡಗಿಕೊಂಡಿದ್ದರು. ಆದ್ದರಿಂದ ಇವರನ್ನು 'ಖದ್ದರಮ್ಮ' ಎಂದೂ ಕರೆಯುತ್ತಿದ್ದರು. 1933 ಮತ್ತು 1938ರಲ್ಲಿ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿ ಬಂಧಿತರಾಗಿ ಜೈಲುಶಿಕ್ಷೆ ಅನುಭವಿಸಿದರು. ಇವರನ್ನು ಅಂದಿನ ವಿಚಾರವಂತ ಮತ್ತು ವಕೀಲರೂ ಆಗಿದ್ದ ಮೃತ್ಯುಂಜಯ ಶಾಸ್ತ್ರಿ ಅವರು ಮರುವಿವಾಹವಾದರು. ದಂಪತಿಗಳು ಖಾದಿ ವಸ್ತ್ರಧಾರಿಗಳಾಗಿದ್ದರು. ಮತ್ತು ಬಾಲಕಿಯನ್ನು ದತ್ತು ತೆಗೆದುಕೊಂಡು ಸಾಕಿದರು. ನಂತರದಲ್ಲಿ ಮದರಾಸು ಶಾಸನ ಸಭೆಗೆ ಬಳ್ಳಾರಿ ಜಿಲ್ಲೆಯಿಂದ ಆಯ್ಕೆಯಾಗಿದ್ದರು.

ಪದ್ಮಾವತಿಬಾಯಿ ಬುರ್ಲಿ : ಅಪ್ಪಟ ದೇಶಭಕ್ತ ಬಿದಾಚಾರ್ಯ ಬುರ್ಲಿ ಅವರ ಪತ್ನಿಯಾದ ಪದ್ಮಾವತಿಬಾಯಿ ಅತೀವ ಸಂಕಷ್ಟದಲ್ಲಿ ಕುಟುಂಬ ಸಲಹಿದರು. ಅಹಿಂಸೆ, ಸರಳತೆ, ಮಿತ ಆಹಾರದ ಪ್ರತಿಪಾದಕಿಯಾಗಿದ್ದರು. ಪ್ರತಿನಿತ್ಯ ಕುಟುಂಬದಲ್ಲಿ ಕಡಿಮೆ ಆಹಾರ ಬಳಸಿ, ಉಳಿದ ಆಹಾರವನ್ನು ಸತ್ಯಾಗ್ರಹಿಗಳಿಗೆ ವಿತರಿಸುತ್ತಿದ್ದರು. ಹೀಗೆ ಆಹಾರ ವಿತರಣೆ ಸಂದರ್ಭದಲ್ಲಿ ಪೋಲೀಸರ ಕೈಗೆ ಸಿಕ್ಕಿಬಿದ್ದು ಮೂರು ತಿಂಗಳ ಕಾಲ ಕಠಿಣ ಕಾರಾಗ್ರಹ ಶಿಕ್ಷೆಗೆ ಒಳಗಾಗ ಬೇಕಾಯಿತು

ಮುಂದುವರಿಯುವುದು...

ಗಾಂಧೀಜಿ ಅವರ ವೈಜ್ಞಾನಿಕ ಚಿಂತನೆಗಳು (ಮುಂದುವರಿದ ಭಾಗ)

– ಡಾ. ಸುಮಂಗಲಾ ಎಸ್. ಮುಮ್ಮಿಗಟ್ಟಿ

ಗಾಂಧಿ ಶಾಂತಿ ಪ್ರತಿಷ್ಠಾನ ಮತ್ತು ಗಾಂಧಿ ಸ್ಮಾರಕ ನಿಧಿ ಅವರು ಸಂಯುಕ್ತವಾಗಿ ದಿ.24.12.2020ರಂದು ಆಯೋಜಿಸಿದ ಡಬ್ಲ್ಯೂ.ಹೆಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸದಲ್ಲಿ ಮಂಡಿಸಿದ ಲೇಖನವನ್ನು ಫೆಬ್ರವರಿ ತಿಂಗಳಿಂದ ಪ್ರಕಟಿಸಲಾಗುತ್ತಿದೆ.

1934 ರಲ್ಲಿ ಅವರು ಪ್ರಾರಂಭ ಮಾಡಿದ ಆಲ್ ಇಂಡಿಯಾ ವಿಲೇಜ್ ಇಂಡಸ್ಟ್ರೀಸ್ ಅಸೋಸಿಯೇಷನ್ ಅವರ ಕಾರ್ಯ ವೈಖರಿ ಮತ್ತು ಅವರು ಗ್ರಾಮ ಕೈಗಾರಿಕೆಗಳಿಗೆ ಕೊಡುತ್ತಿದ್ದ ಮಹತ್ವವನ್ನು ತೋರಿಸುತ್ತದೆ. ತಕಲಿ, ಚರಕ ಮತ್ತು ಸ್ಪಿಂಡಲ್‌ಗಳನ್ನು ಉತ್ತಮ ಪಡಿಸುವ ಕ್ರಿಯೆ, ಬರೆಯುವ ಪೆನ್ನುಗಳನ್ನು ಉತ್ತಮವಾಗಿಸುವಷ್ಟೆ ಮಹತ್ವವನ್ನು ಪಡೆಯಬೇಕು ಎಂದು ಗಾಂಧೀಜಿ ಅವರು ಹೇಳುತ್ತಿದ್ದರು. ವಿದ್ಯುತ್ ಶಕ್ತಿ ಹಳ್ಳಿಯ ಮನೆ ಮನೆಗೆ ತಲುಪುವಂತಾಗಿ ಅವರ ಉಪಕರಣಗಳ ಚಾಲನೆಗೆ ಅನುಕೂಲವಾದರೆ ನನ್ನ ಅಭ್ಯಂತರವಿಲ್ಲ ಆದರೆ ಅದು ಕೆಲವರ ಸ್ವತ್ತು ಮಾತ್ರ ಆಗಬಾರದು ಎನ್ನುವುದು ಗಾಂಧೀಜಿ ಅವರ ಅಭಿಮತವಾಗಿತ್ತು.

"ವಿಜ್ಞಾನ," ವಿಜ್ಞಾನ ಎನಿಸಿಕೊಳ್ಳಬೇಕಾದರೆ, ಅದು ಮನಸ್ಸು ದೇಹ ಮತ್ತು ಆತ್ಮಗಳನ್ನು ಸಂಪೂರ್ಣವಾಗಿ ಸಂತೃಪ್ತಿಪಡಿಸಬೇಕು" ಎನ್ನುವುದು ಗಾಂಧೀಜಿ ಅವರ ಅಭಿಪ್ರಾಯವಾಗಿತ್ತು. ಗ್ರಾಮಗಳಲ್ಲಿದ್ದ ಎಣ್ಣೆಯ ಗಾಣಗಳನ್ನು ಹೆಚ್ಚು ಸಮರ್ಥ ಮಾಡಲು ಅಲ್ಲಿನ ಹಿಟ್ಟಿನ ಗಿರಣಿಗಳು ಮತ್ತು ಕಬ್ಬು ಅರೆಯುವ ಉಪಕರಣಗಳನ್ನು ಉತ್ತಮ ಪಡಿಸುವ ಕಾರ್ಯಕ್ಕೆ ಗಾಂಧೀಜಿ ಅವರು ಪ್ರೋತ್ಸಾಹ ನೀಡುತ್ತಿದ್ದರು. ಅವರ ಪ್ರಕಾರ ಪ್ರತಿ ಹಳ್ಳಿಯೂ ತನ್ನದೇ ಆದ ವಿಜ್ಞಾನಿಗಳನ್ನು ಹೊಂದಿರಬೇಕು. ಅವರು ಹಳ್ಳಿಯ ಜನರ ಕೆಲಸಗಳನ್ನು ಸುಲಲಿತವಾಗುವಂತೆ ಮಾಡಲು ವೈಜ್ಞಾನಿಕ ಅನ್ವಯತೆಗಳನ್ನು ಕಂಡುಕೊಳ್ಳಬೇಕು ಎನ್ನುವುದಾಗಿತ್ತು.

1933 ರ ರಲ್ಲಿ ಗಾಂಧೀಜಿ ಅವರು ಸಬರಮತಿಯನ್ನು ಬಿಟ್ಟು ವಾರ್ಧಾ ಹಾಗೂ ನಂತರ ಸೇವಾಗ್ರಾಮಕ್ಕೆ ಬಂದಮೇಲೆ ಅವರು ಹಿಂದ್ ಸ್ವರಾಜ್‌ನಲ್ಲಿ ಕಲ್ಪಿಸಿಕೊಂಡಂತಹ ಸ್ವತಂತ್ರ ಭಾರತದ ನಿರ್ಮಾಣದ ಕೆಲಸಕ್ಕೆ ಕೈ ಹಾಕಿದರು. ಅವರು ತಾವು ಕೈಗೊಂಡ ಪ್ರವಾಸಗಳಲ್ಲಿ 'ಖಾದಿ" ಯ ಪರಿಣಾಮ ಸಾಲದು ಎನ್ನುವುದನ್ನು ಕಂಡಿದ್ದರು. ಗ್ರಾಮಸ್ಥರು ಮತ್ತು ಪಟ್ಟಣದ ಜನರ ನಡುವೆ ಸಂಪರ್ಕ ಕ್ರಮೇಣವಾಗಿ ಕಡಿಮೆಯಾಗುತ್ತಿದೆ, ಗ್ರಾಮ ಕೈಗಾರಿಕೆಗಳು ನಗರದ ಜನರ ಪಾಲಾಗುತ್ತಿವೆ ಎನ್ನುವುದನ್ನು ಅವರು ತಿಳಿದಿದ್ದರು. ಅದಕ್ಕಾಗಿ ಅವರು ಗ್ರಾಮಗಳನ್ನು ಪುನರುಜ್ಜೀವನಗೊಳಿಸುವ ಕಾರ್ಯಕ್ಕೆ ಕೈ ಹಾಕಿದರು. ಗ್ರಾಮಗಳು ಕೇವಲ ಕಚ್ಚಾ ವಸ್ತುಗಳನ್ನು ಪೂರೈಸುವ ಸ್ಥಳಗಳಾಗಬಾರದು ಎನ್ನುವುದು ಅವರ ಅಭಿಪ್ರಾಯವಾಗಿತ್ತು.

ಮುಂದುವರಿಯುವುದು...

ಗಾಂಧೀಜಿಯ ಕೊನೆಯ ಉಪವಾಸಗಳು

(ಲೂಯಿ ಫಿಶರ್ ಮಹಾತ್ಮ ಗಾಂಧಿ, ಜಗತ್ತಿಗೆ ಅವರ ಸಂದೇಶ ಕೃತಿಯಿಂದ ಆಯ್ದ ಭಾಗಗಳು)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಶಾಂತಚಿತ್ತನಂತಿದ್ದು, ಎಚ್ಚರವಾದಾಗ ಮೃದುವಾಗಿ ನಕ್ಕನು. ಪ್ರಾರ್ಥನಾ ಸಭೆಗೆ ಹೋಗಲು ಏಳುವುದಕ್ಕೆ ಪ್ರಯತ್ನಿಸಿ, ನಿಂತುಕೊಳ್ಳಲಾರದೆ ಧ್ವನಿವರ್ಧಕದ ಯಂತ್ರದಿಂದ, ಆಲ್ ಇಂಡಿಯಾ ರೇಡಿಯೋದಲ್ಲಿ ದೇಶಕ್ಕೆಲ್ಲಾ ಕೇಳುವಂತೆ ಮಾತನಾಡಿದರು. "ಬೇರೆಯವರು ಏನು ಮಾಡುತ್ತಿರುವರೆಂದು ಮನಸ್ಸಿಗೆ ಹಚ್ಚಿಕೊಳ್ಳಬೇಡಿ. ಪ್ರತಿಯೊಬ್ಬರೂ ಬೆಳಕನ್ನು ಮನಸ್ಸಿನ ಒಳಕ್ಕೆ ತಿರುಗಿಸಿ, ಸಾಧ್ಯವಾದಷ್ಟು ಮಟ್ಟಿಗೆ ಹೃದಯವನ್ನು ಪರಿಶುದ್ಧ ಮಾಡಿಕೊಳ್ಳಬೇಕು. ಹಾಗೆ ನೀವು ಮಾಡಿಕೊಂಡರೆ ಇಂಡಿಯಾಕ್ಕೆ ಸಹಾಯ ಮಾಡಿದಂತಾಗುತ್ತದೆ. ಆದರೆ ನನ್ನ ವಿಚಾರ ಮುಖ್ಯವಲ್ಲ. ಸಾವನ್ನು ತಪ್ಪಿಸಿಕೊಂಡವರು ಯಾರೂ ಇಲ್ಲ. ಹೆದರುವುದೇಕೆ? ಸಾವು, ಕಷ್ಟದಿಂದ ಪಾರುಗಾಣಿಸುವ ಸ್ನೇಹಿತ". ಇಷ್ಟು ಹೇಳುವ ವೇಳೆಗೆ ಆಯಾಸವಾಗಲು ಮಿಕ್ಕ ಸಂದೇಶವನ್ನು ಬೇರೆಯವರು ಓದಿದರು. ವೈದ್ಯರು ನಾಲ್ಕನೆಯ ದಿನ ಉಪವಾಸ ಮಾಡಿದರೆ ಬದುಕಿದರೂ ಏನಾದರೂ ಶಾಶ್ವತ ಹಾನಿಯಾಗುವುದೆಂದು ಹೇಳಿದರು. ನೀರು ಕುಡಿಯುತ್ತಿರಲಿಲ್ಲ; ಮೂತ್ರ ವಿಸರ್ಜನೆ ಮಾಡುತ್ತಿರಲಿಲ್ಲ. ಲಕ್ಷ್ಯ ಮಾಡದೆ ಎರಡು ನಿಮಿಷ ಪ್ರಾರ್ಥನಾ ಸಭೆಯನ್ನುದ್ಧೇಶಿಸಿ, ಧ್ವನಿವರ್ಧಕ ಯಂತ್ರದ ಮೂಲಕ ಮಾತನಾಡಿ, "ಈ ನಾಲ್ಕನೆಯ ದಿನವಿರುವಷ್ಟು ಸುಖವಾಗಿ ನಾನೆಂದೂ ಇರಲಿಲ್ಲ:, ಎಂದು ಜಂಭಕೊಚ್ಚಿದ್ದರು. ಧ್ವನಿಯೂ ಶಕ್ತಿಯುತವಾಯಿತು. ಜನವರಿ 17ನೇ ತಾರೀಕು ಆತನ ತೂಕ 107 ಪೌಂಡುಗಳಿತ್ತು, ಮುಸ್ಲಿಮರು ಧೈರ್ಯವಾಗಿ ಹಿಂದಿರುಗಬಹುದೇನೋ ನೋಡಲು ಪ್ಯಾರೆಲಾಲರನ್ನು ಪಟ್ಟಣದೊಳಕ್ಕೆ ಕಳುಹಿಸಿದರು. ಮಹಾರಾಜರುಗಳಿಂದ, ಪಾಕಿಸ್ತಾನದ ಮುಸ್ಲಿಮರಿಂದ, ಇಂಡಿಯಾದ ಎಲ್ಲಾ ಕಡೆಗಳಿಂದ ನೂರಾರು ತಂತಿ ವರ್ತಮಾನಗಳು ಬಂದವು. ಆತನಿಕೆ ತೃಪ್ತಿಯಾದರೂ, "ರಾಜ ಮಹಾರಾಜರುಗಳಾಗಲಿ, ಹಿಂದೂ ಸಿಕ್ಕರಾಗಲಿ, ಬೇರೆ ಯಾರಾಗಲಿ, ನನ್ನ ಜೀವನದ ಈ ಪವಿತ್ರ ಸಮಯದಲ್ಲಿ, ಉಪವಾಸ ನಿಲ್ಲಿಸಲು ಮೋಸ ಮಾಡಿದರೆ ಅವರಿಗಾಗಲಿ, ಇಂಡಿಯಾಗಾಗಲಿ ಒಳ್ಳೆಯದಲ್ಲ. ಆತ್ಮಶಾಂತಿಗೋಸ್ಕರ ಉಪವಾಸ ಮಾಡುವ ಸಮಯಕ್ಕಿಂತ ಹಿತಕರವಾದ ಸಮಯ ನನಗಿಲ್ಲ. ಎಂದಿಗಿಂತ ಹೆಚ್ಚು ಸಂತೋಷವನ್ನು ಈ ಉಪವಾಸ ನನಗೆ ಕೊಟ್ಟಿದೆ. ಸೈತಾನನಿಂದ ದೇವರ ಕಡೆ ಮನಃಪೂರ್ವಕವಾಗಿ ಪ್ರಯಾಣ ಬದಲಿಸಿರುವೆನೆಂಬ ಧೈರ್ಯವಿಲ್ಲದ ಯಾರೂ ನನ್ನನ್ನು ಈ ಸುಖಮಯವಾದ ಸ್ಥಿತಿಯಲ್ಲಿ ಹಿಂಸೆ ಪಡಿಸಬೇಡಿ. ಎಂದು ಉಚ್ಚರಿಸಿದರು.

ಮುಂದುವರಿಯುವುದು..

ಸಂಗ್ರಹ : ನಳಿನಾ ಡಿ – ಪತ್ರಕರ್ತೆ, ಕವಯಿತ್ರಿ



ಯುವ ನಾಯಕತ್ವದಲ್ಲಿ ಹೊಸ ಮನ್ವಂತರ ಹುಟ್ಟಿಕೊಳ್ಳಲಿ

– ಡಾ. ಎಚ್.ಎಸ್. ದೊರೆಸ್ವಾಮಿ

'ನನ್ನ ರಾಷ್ಟ್ರಭಕ್ತಿ ಪ್ರಜೆಗಳನ್ನು ಪ್ರತ್ಯೇಕಗೊಳಿಸುವಂಥದ್ದಲ್ಲ; ಪರಸ್ಪರರನ್ನು ಒಗ್ಗೂಡಿಸುವಂಥದು. ನಮ್ಮ ಆದರ್ಶ ಉದಾರವಂತವಾದುದು–ವಸುದೈವ ಕುಟುಂಬಕಂ ಎಂಬ ಪರಂಪರೆ ನಮ್ಮದು. ನಾನಾ ಧರ್ಮದವರು ಭಾರತದಲ್ಲಿ ಸಂಪೂರ್ಣ ಸಹಕಾರದಿಂದ ಸ್ನೇಹದಿಂದ ಬಾಳುತ್ತಾರೆ ಎಂದರು ಗಾಂಧೀಜಿ'.ದೇಶಪ್ರೇಮ, ಧಾರ್ಮಿಕತೆ ಹಾಗೂ ಪರಂಪರೆಗಳ ಬಗ್ಗೆ ಗಾಂಧೀಜಿಯವರ ದೃಷ್ಟಿಕೋನ ಹೀಗಿತ್ತು. ಬ್ರಿಟಿಷರನ್ನು ಓಡಿಸಿ ಸ್ವರಾಜ್ಯ ಸ್ಥಾಪನೆಗಾಗಿ ಜೀವನವನ್ನೇ ಮುಡಿಪಾಗಿಟ್ಟ ಆ ಮಹಾತ್ಮನ ವಿಚಾರಗಳನ್ನು ಈಗಿನ ಪೀಳಿಗೆಗೆ ತಲುಪಿಸುವಲ್ಲಿ ನಾವು ವಿಫಲರಾಗಿದ್ದೇವೆ. ಬದಲಿಗೆ, ರಾಷ್ಟ್ರಭಕ್ತಿಯ ಪರಿಕಲ್ಪನೆಯನ್ನೇ ವಿಕೃತಗೊಳಿಸಿ ಇಂದಿನ ಯುವ ಪೀಳಿಗೆಯನ್ನು ದಿಕ್ಕು ತಪ್ಪಿಸುವ ಹೀನಕಾರ್ಯ ಎಗ್ಗಿಲ್ಲದೆ ಸಾಗಿದೆ. 'ಸ್ವರಾಜ್ಯ ಎಂದರೆ ಯಾವುದೇ ಒಂದು ಧರ್ಮದ ರಾಷ್ಟ್ರವಲ್ಲ; ಹಿಂದೂಗಳ ರಾಷ್ಟ್ರವೂ ಅಲ್ಲ. ತಮ್ಮ ಸ್ವಾರ್ಥ ಸಾಧನೆಗಾಗಿ 'ಹಿಂದೂ ರಾಷ್ಟ್ರ' ಸ್ಥಾಪಿಸಬೇಕೆನ್ನುವ ಕುಪ್ರಯತ್ನಗಳು ನಡೆಯುತ್ತಿವೆ. ನನ್ನ ಶಕ್ತಿಯನ್ನೆಲ್ಲ ಬಳಸಿ ಇದರ ವಿರುದ್ಧ ಹೋರಾಡುತ್ತೇನೆ. ಅಧಿಕಾರದ ಅಮಲಿನಲ್ಲಿ ಅಲ್ಪಸಂಖ್ಯಾತರನ್ನು ತುಳಿದುಹಾಕಿ ಹಿಂದೂ ರಾಷ್ಟ್ರವನ್ನು ಸ್ಥಾಪಿಸುವುದಾದರೆ ಅದು ಹಿಂದೂ ಧರ್ಮಕ್ಕೆ ದ್ರೋಹ ಬಗೆದಂತೆ. ಅದು ಹಾನಿಕಾರಕವೂ ಹೌದು' ಎಂದು ಗಾಂಧೀಜಿ ಸ್ಪಷ್ಟವಾಗಿ ಹೇಳಿದ್ದರು. ಆಗ ಹಿಂದು ದೇವಾಲಯಗಳಿಗೆ ಹರಿಜನರು ಬರುವಂತಿರಲಿಲ್ಲ. ಬಂದರೆ ಅವರನ್ನು ಸನಾತನಿಗಳು ಬರ್ಬರವಾಗಿ ನಡೆಸಿಕೊಳ್ಳುತ್ತಿದ್ದರು. 'ಹಿಂದುಗಳು ತಮ್ಮ ಇಂಥಾ ವರ್ತನೆಗಾಗಿ ಪಶ್ಚಾತಾಪಪಡಬೇಕು' ಎಂದರು ಗಾಂಧೀಜಿ. ಹರಿಜನರಿಗೆ ದೇವಾಲಯಕ್ಕೆ ಪ್ರವೇಶದ ಹಕ್ಕನ್ನು ನೀಡಬೇಕೆಂದು ಹಿಂದುಗಳಲ್ಲಿ ವಿನಂತಿಸಿಕೊಂಡರು. ಸನಾತನಿಗಳು ಗಾಂಧಿ ಅವರ ನಿಲುವನ್ನು ಅಲ್ಲಗಳೆದರು. ಆಗ ಗಾಂಧೀಜಿ ಹರಿಜನರಿಗೆ ದೇವಾಲಯ ಪ್ರವೇಶಿಸಲು ಅವಕಾಶ ಮಾಡಿಕೊಡಬೇಕೆಂದು ಉಪವಾಸ ಸತ್ಯಾಗ್ರಹ ಆರಂಭಿಸಿದರು. ಹಳ್ಳಿಹಳ್ಳಿಗೂ ಗಾಂಧೀಜಿಯ ಉಪವಾಸದ ಸುದ್ದಿ ಕಾಳ್ಗಿಚ್ಚಿನಂತೆ ಮುಟ್ಟಿತು. ಗಾಂಧೀಜಿ ಅವರ ಉಪವಾಸ 21 ದಿನ ನಡೆಯಿತು. ಉಪವಾಸ ಮುಕ್ತಾಯಕ್ಕೆ ಮೊದಲೇ ಅನೇಕ ಕಡೆ ಹರಿಜನರ ದೇವಾಲಯ ಪ್ರವೇಶಕ್ಕೆ ಜನರು ಅವಕಾಶ ಮಾಡಿಕೊಟ್ಟರು. ನೈಜ ಸ್ವಾತಂತ್ರ್ಯ ಹಾಗೂ ಪ್ರಜಾತಂತ್ರವನ್ನು ನೆಲೆಗೊಳಿಸುವ ಅವರ ದೃಢ ಹೋರಾಟ ಮುಂದುವರಿಯುತ್ತಿದ್ದಂತೆಯೇ ಗಾಂಧೀಜಿ ಮತಾಂಧನ ಗುಂಡಿಗೆ ಬಲಿಯಾದರು. ಅದೇ ಹಂತಕ ಶಕ್ತಿಗಳು ಇಂದು ಮತ್ತಷ್ಟು ಬಲಿಷ್ಠವಾಗಿವೆ. ಎಲ್ಲೆಡೆ ಅಧರ್ಮ ತಾಂಡವವಾಡುತ್ತಿದೆ. ಹೀಗಾಗಿ ಇಂದು ನಾವು ಒಂದು ಧರ್ಮಯುದ್ಧ ಕೈಗೊಳ್ಳಬೇಕಿದೆ.

ಮುಂದುವರಿಯುವುದು...

ನವ ಭಾರತ ನಿರ್ಮಾಪಕರು : ಲೋಕ ಮಾನ್ಯರು : ಶತದಿನ ಸಂಸ್ಮರಣೆ

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.



ತಿಲಕರು ಸ್ಥಾಪಿಸಿದ ಡೆಕ್ಕನ್ ಎಜುಕೇಶನ್ ಸೊಸೈಟಿಯಲ್ಲಿ ಎರಡು ಮುಖ್ಯ ವಿಷಯಗಳಿಂದ ಸದಸ್ಯರಲ್ಲಿ ಭಿನ್ನಾಭಿಪ್ರಾಯಗಳು ಮೂಡಿದವು. 1) ಕೇಸರಿ ಮತ್ತು ಮರಾಠ ಪತ್ರಿಕೆಗಳ ಧ್ಯೇಯೋದ್ದೇಶಗಳು, 2) ಅಜೀವ ಸದಸ್ಯರು ಸಾರ್ವಜನಿಕ ಕೆಲಸಗಳಲ್ಲಿ ಭಾಗಿಯಾಗುವುದು. ಈ ಎರಡೂ ವಿಷಯಗಳಲ್ಲಿ ತಿಲಕ್, ಗೋಖಲೆ ಅಗರ್‌ಕರ್, ರಾನಡೆ ಅವರಲ್ಲಿ ಚರ್ಚೆಗಳು ಆರಂಭವಾದವು. ರಾನಡೆ ಮತ್ತು ಅಗರ್‌ಕರ್ ಅವರು ಸದಸ್ಯರು ಸಮಾಜ ಸುಧಾರಣೆ ಕೆಲಸದಲ್ಲಿ ಭಾಗವಹಿಸಬಹುದೆಂದರು. ಆದರೆ ತಿಲಕರು ಇಬರಿಬ್ಬರ ಅಭಿಪ್ರಾಯವನ್ನು ಒಪ್ಪಲಿಲ್ಲ. ಇಂಥಹ ಭಿನ್ನಾಭಿಪ್ರಾಯಗಳ ನಡುವೆಯೇ ಗೋಖಲೆ ಅವರು ಸಾರ್ವಜನಿಕ ಸಭಾದ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದರು. ಡೆಕ್ಕನ್ ಶಿಕ್ಷಣ ಸಂಸ್ಥೆಯ ಉದ್ಯೋಗಿಗಳು ಶಿಕ್ಷಣದ ಹೊರತಾಗಿ ಬೇರೆ ಚಟುವಟಿಕೆಗಳಲ್ಲಿ ತೊಡಗಬಾರದೆಂಬ ಅಭಿಪ್ರಾಯಹೊಂದಿದ ತಿಲಕರಿಗೆ, ಗೋಖಲೆ ಅವರ ಈ ನಡೆ ಸಿಟ್ಟಿಗೆಬ್ಬಿಸಿದ್ದು, ಅವರೊಂದಿಗೆ ವಾಗ್ವಾದವನ್ನು ಮಾಡಿದರು. ಅದೇ ರೀತಿ ತಿಲಕರು 1889ರಲ್ಲಿ ಕಾಂಗ್ರೆಸ್ಸಿನ ಕೆಲಸವನ್ನು ಕೈಗೆತ್ತಿಕೊಂಡು ನಿಯಮ ಉಲ್ಲಂಘನೆ ಅವರೇ ಮಾಡಿದ್ದಾರೆಂದು ತೀವ್ರ ಟೀಕೆಗೆ ಒಳಗಾಗದರು. ಟೀಕೆಗೆ ಉತ್ತರಿಸುತ್ತಾ 'ಕಾಂಗ್ರೆಸ್‌ನ ಕೆಲಸ ತಾತ್ಪೂರ್ತಿಕವಾದದ್ದು ಎಂದು ನಾನು ಭಾವಿಸುತ್ತಿದ್ದೇನೆ. ಈ ಶಾಖೆಗಳನ್ನು ಪ್ರಾರಂಭಿಸಿದಾಗಿನಿಂದಲೂ ನಾನು ಹೊರಗಡೆ ಕೆಲಸಮಾಡಲಿಲ್ಲ. ಸಾರ್ವಜನಿಕ ಸಭಾದ ಕಾರ್ಯದರ್ಶಿಯಾಗಿ ಕೆಲಸ ಮಾಡಲು ನನ್ನನ್ನು ಕೇಳಿದ್ದರು. ಆದರೆ ನಾನು ಅಲ್ಲಿ ತಾತ್ಪೂರ್ತಿಕ ಕೆಲಸ ಮಾತ್ರ ಮಾಡಬಲ್ಲೆನೆಂಬ ಕಾರ್ಯದರ್ಶಿ ಕೆಲಸ ಮಾಡಲಾರೆನೆಂದಿದ್ದೆ. ವಿಷಮದ ವಿಮರ್ಶೆ ಮಾಡದೆ ನನ್ನ ಮೇಲೆ ಆರೋಪ ಮಾಡಿರುವುದು ವಿಷಾದಕರ ಎಂದಿದ್ದರು.



1917ರಲ್ಲಿ ಲೋಕಮಾನ್ಯ ಬಾಲ ಗಂಗಾಧರ ಟಿಳಕರು ಬೆಳಗಾವಿಗೆ ಬಂದಾಗ : ಎಡಗಡೆಯಿಂದ ಮೊದಲಿಗರು ಗೋವಿಂದರಾವ್ ಯಾಳಗಿ, ಬಲಗಡೆಯಿಂದ ಕೊನೆಯವರು ಗಂಗಾಧರ ದೇಶಪಾಂಡೆ

ಮುಂದುವರಿಯುವುದು...

ಅಕ್ಷರದವ್ವ : ಸಾವಿತ್ರಿಬಾ ಪುಲೆ :

ಎಸ್.ಎಂ. ಶ್ಯಾಮಲ, ಅಧ್ಯಾಪಕರು (ನಿ)

ಸಾವಿತ್ರಿ ಪುಲೆ 1951ರಲ್ಲಿ ಆರಂಭಿಸಿದ ಶಾಲೆಗಳಿಗೆ 1953ರ ವೇಳೆಗೆ ಎಲ್ಲಾ ಸಮುದಾಯದ ಹೆಣ್ಣು ಮಕ್ಕಳು ಬರಲಾರಂಭಿಸಿದ್ದರು. ಉದಾರ ದಾನಿಗಳಿಂದ ಶಾಲೆ ಮತ್ತು ವಾಚನಾಲಯಗಳನ್ನು ಮುನ್ನಡೆಸಿದ್ದರು. ಇದರಿಂದಾಗಿ ಪುಲೆ ದಂಪತಿಗಳ ಹೆಸರು ಸಾಮಾನ್ಯ ಜನರ ಬಾಯಲ್ಲಿ ನಲಿದಾಡಿತು. ಬರೋಡದ ಮಹಾರಾಜ ಸಯ್ಯಾಜಿರಾವ್ ಅವರ ಆಪ್ತಮಿತ್ರರಾದ ಬಾಮಪರಮಾನಂದರು ದಿ.31.7.1890ರ ಪತ್ರದಲ್ಲಿ "ಜ್ಯೋತಿಬಾ ಅವರಿಗಿಂತ, ಸಾವಿತ್ರಿ ಪುಲೆ ಅವರು ಹೆಚ್ಚು ಪ್ರಶಂಸೆಗೆ ಅರ್ಹರು. ಸಾವಿತ್ರಿ ಅವರ ಸಹಿಷ್ಣುತೆ ಮತ್ತು ಸಹಕಾರ ಜ್ಯೋತಿಬಾ ಅವರಿಗೆ ದೊರಕಿದ್ದರಿಂದಲೇ, ಅವರು ಇಷ್ಟೊಂದು ಸಾಧನೆ ಮಾಡಲು ಸಾಧ್ಯವಾಗಿದೆ. ಉನ್ನತ ಶಿಕ್ಷಣ ಪಡೆದ ಮೇಲೆ ಜಾತಿಯ ಮಹಿಳೆಯರು ಇಂಥಹ ತ್ಯಾಗ ಮಾಡಲಾರರು" ಎಂದು ಅಪಾರ ಮೆಚ್ಚುಗೆ ವ್ಯಕ್ತ ಪಡಿಸಿದ್ದರು.

ಮಧ್ಯಂತರದಲ್ಲಿ 1848ರಲ್ಲಿ ಅಸ್ಪೃಶ್ಯ ಮಕ್ಕಳಿಗಾಗಿ ಶಾಲೆ ಆರಂಭಿಸಿದರು. ವಯಸ್ಕರಿಗಾಗಿ ರಾತ್ರಿ ಶಾಲೆ ತೆರೆದು, ರೈತರು, ಕಾರ್ಮಿಕರಿಗೆ ಅರಿವಿನ ಬೆಳಕನ್ನು ಹತ್ತಿಸಿದರು. ಈ ಶಾಲೆಗಳಲ್ಲೂ ಸಾವಿತ್ರಿಪುಲೆ ಶಿಕ್ಷಕಿಯಾಗಿ ಸೇವೆಸಲ್ಲಿಸಿದರು. ಇವರು ಮಹಾರಾಷ್ಟ್ರದಲ್ಲಿ ಆರಂಭವಾದ ಪ್ರಥಮ ರಾತ್ರಿ ಶಾಲೆಗಳಾಗಿವೆ. ಶಿಕ್ಷಣ ಕ್ಷೇತ್ರದಲ್ಲಿ ಇವರ ಸೇವೆ ಅನುಕರಣೀಯವಾದುದು ಎಂದು ಪತ್ರಿಕೆಗಳು ಶ್ಲಾಘಿಸಿದವು. ಬಲ್ಲಾಚಾರ್ಯ ಎಂಬ ಸರ್ಕಾರಿ ನೌಕರ ಒಂದು ತಿಂಗಳ ಸಂಬಳವನ್ನು ಶಾಲೆಗೆ ದೇಣಿಗೆಯಾಗಿ ನೀಡಿದ್ದನು. ಅಂದಿನ ಬ್ರಿಟಿಷ್ ಸರ್ಕಾರ ಜ್ಯೋತಿಬಾ ಪುಲೆ ಅವರನ್ನು ಶಾಲು ಹೊದಿಸಿ, ಸನ್ಮಾನಿಸಿದ್ದರು. ಮೇಜರ್ ಕ್ಯಾಂಡಿ ಎರ್ರಿಸಮ್ ಮುಂತಾದವರು. ಪುಲೆ ಅವರನ್ನು ಪ್ರಶಂಸಿಸಿದರು. 1849ರಲ್ಲಿ ಪುಲೆ ದಂಪತಿಗಳು ಪುಣೆಯ ಉಸ್ಮಾನ್ ಶೇಖರ ವಾಡೆಯಲ್ಲಿ, ಸತಾರ ನಗರದಲ್ಲಿ ಶಾಲೆಗಳನ್ನು ಆರಂಭಿಸಿದ್ದರು.



ಸರ್ಕಾರವೇ ಶಾಲೆಗಳನ್ನು ಆರಂಭಿಸುವವರೆಗೆ ಪುಲೆ ದಂಪತಿಗಳು ಆರಂಭಿಸಿದ ಶಾಲೆಗಳು, ಮಕ್ಕಳಿಗೆ ವಿದ್ಯಾಭ್ಯಾಸ ಕಲಿಸಿದವು. "ಸರ್ವರಿಗೂ ಶಿಕ್ಷಣವೆಂಬುದು" ಸಾರ್ವತ್ರಿಕ ಹಕ್ಕಾಗಲು ಇದು ಭದ್ರ ಬುನಾದಿ ಹಾಕಿತೆಂದೇ ಹೇಳಬಹುದು. ಸಮಾಜದ ಪಾರಂಪರಿಕ ವ್ಯವಸ್ಥೆಯಲ್ಲಿ ವಿಧವೆಯರ ಸ್ಥಿತಿಗತಿಗಳ ಬಗ್ಗೆ ಸಾವಿತ್ರಿಪುಲೆ ಅವರ ಗಮನ ಹರಿಯಿತು. ವಿಧವೆಯರನ್ನು ಅಮಾನವೀಯವಾಗಿ ನಡೆಸಿಕೊಳ್ಳುವುದು, ವಿಕಲರೂಪರಾಗಿಸುವುದು, ಅವರ ಮಕ್ಕಳ ಅನಾಥಸ್ಥಿತಿ, ಧಾರ್ಮಿಕ, ಸಾಮಾಜಿಕ ಕಾರ್ಯಗಳ ಭಾಗಿತ್ವ ನಿಷೇಧ, ಆಹಾರ ಆಶ್ರಯದ ಸಂಕಷ್ಟಗಳನ್ನು ಕಣ್ಣಾರೆ ಕಂಡ ಪುಲೆ ದಂಪತಿಗಳು, ಅದರ ನಿವಾರಣೆಗೆ ಕಾರ್ಯೋನ್ಮುಖರಾದರು. ಗರ್ಭಿಣಿಯರಾದ ವಿಧವೆಯರಿಗಾಗಿ ಅಬಲಾಶ್ರಮವನ್ನು ಸ್ಥಾಪಿಸಿದರು. ವಿಧವೆಯರ ಮಕ್ಕಳನ್ನು ದತ್ತು ಸ್ವೀಕಾರ, ಅವರ ಶಿಕ್ಷಣಕ್ಕೆ ನೆರವು ನೀಡಿದರು. ಅವರ ಮಕ್ಕಳಿಗಾಗಿ ಅನಾಥಾಶ್ರಮವನ್ನು ಸ್ಥಾಪಿಸಿದರು. ಬಾಲ್ಯ ವಿವಾಹ ನಿಷೇಧದ ಕ್ರಮ ಒಂದೆಡೆಯಾದರೆ, ವಿಧವೆಯರ ಮರು ವಿವಾಹಕ್ಕೆ ಜನರ ಮನಸ್ಸನ್ನು ತಿದ್ದುವುದು ಮತ್ತೊಂದೆಡೆ ಪೂನಾದಲ್ಲಿ 1860ರಲ್ಲಿ ಪ್ರಥಮವಾಗಿ ವಿಧವಾ ವಿವಾಹವನ್ನು ಏರ್ಪಡಿಸಿದ್ದರು. ಬ್ರಾಹ್ಮಣ ವಿಧವೆಯ ಪುತ್ರನನ್ನು ದಂಪತಿಗಳು ದತ್ತು ಸ್ವೀಕಾರ ಮಾಡಿ ಯಶವಂತನೆಂದು ಹೆಸರಿಸಿ ಅವನಿಗೆ ವೈದ್ಯಕೀಯ ಶಿಕ್ಷಣ ಕೊಡಿಸಿದರು.

ಮುಂದುವರಿಯುವುದು...

ಜ್ಯೋತಿ ಬಾ ಪುಲೆ ಅವರ ಕಿರು ಪರಿಚಯ

– ಅಖಿಲಾ ವಿದ್ಯಾಸಂದ್ರ

ಜನನ	: ದಿ.11.4.1827
ತಾಯಿಯ ನಿಧನ	: 1828
ಶಾಲೆ ಬಿಡಿಸಿದ್ದು	: 1832
ಮದುವೆ	: 1839
ಪುನಃ ಶಾಲೆಗೆ ಸೇರ್ಪಡೆ	: 1841
ಶಿಕ್ಷಣ ಪೂರ್ಣಗೊಳಿಸಿದ್ದು	: 1847
ಗೆಳೆಯನ ವಿವಾಹದಲ್ಲಿ ಅವಮಾನ, ಅಸ್ಪೃಶ್ಯ ಮಕ್ಕಳಿಗಾಗಿ ಶಾಲೆ ಸ್ಥಾಪನೆ, ಪತ್ನಿಗೆ ಶಿಕ್ಷಣ ಮತ್ತು ಶಿಕ್ಷಕಿ ನೇಮಕಾತಿ	: 1848
ಹೆಣ್ಣು ಮಕ್ಕಳಿಗೆ ಶಾಲೆ ಪ್ರಾರಂಭ	: 1851
ಮತ್ತೆರಡು ಹೆಣ್ಣು ಮಕ್ಕಳ ಶಾಲೆ ಆರಂಭ	: 1852
ಸಾರ್ವಜನಿಕ ಗ್ರಂಥಾಲಯ ಸ್ಥಾಪನೆ	: 1852
ವಿಧವಾ ವಿವಾಹ ನಡೆಸಿದ್ದು	: 1860
ಅಬಲಾಶ್ರಮ ಸ್ಥಾಪನೆ	: 1864
ಜಾತಿಭೇಧ ವಿವೇಕಸಾರ	: 1865
ತುಕಾರಾಂ ತಾತ್ಯಾ ಪಡವಲ್ ಅವರ ಕೃತಿಯ ಮರು ಮುದ್ರಣ	: 1865
ಛತ್ರಪತಿ ಶಿವಾಜಿ ಮಾಹಾರಾಜರ ರಾಯಗಡ ಸಮಾಧಿ ಶೋಧನೆ ಉಪೇಕ್ಷೆಗೆ ಧ್ವನಿ ಎತ್ತಿದರು	: 1869
ಬ್ರಾಹ್ಮಣಚಿ ಕಸಬೆ ಕೃತಿ ಪ್ರಕಟಣೆ	: 1869
ಬಾಂಬೆಯಲ್ಲಿ ಕಾರ್ಮಿಕರ ಮುಷ್ಕರಕ್ಕೆ ಬೆಂಬಲ	: 1869
ಗುಲಾಮಗಿರಿ ವಿರುದ್ಧ ಹೋರಾಟ	: 1873
ಪೂನಾ ಮುನಿಸಿಪಾಲಿಟಿ ಸದಸ್ಯ	: 1876
ಸತ್ಯಶೋಧಕ ಸಮಾಜ ಸ್ಥಾಪನೆ	: 1873
ಮುನಿಸಿಪಾಲಿಟಿ ಕ್ರಮಕ್ಕೆ ವಿರೋಧ	: 1880
ಹಂಟರ್ ಆಯೋಗಕ್ಕೆ ವರದಿ	: 1882
'ತೃತೀಯ ರತ್ನ' ನಾಟಕ ಕೃತಿ	: 1885
ಸತ್ಯಸಾರಾ (ಕೃತಿ), ಶೇಲ್ ಕಾರ್ಯಚಿ ಅಸುಡಾ (ಮರಾಠಿ ಕೃತಿ), ಇಷಾರಾ (ಕೃತಿ)	1885
ಅಸ್ಪೃಶ್ಯರ ವ್ಯಾಜ್ಯ (ಕೃತಿ)	: 1885
ಮಂಗಲ ಸ್ಪರ್ಶ (ಕೃತಿ)	: 1887
ಮಹಾತ್ಮ ಗೌರವ ಪುರಸ್ಕಾರ	: 1888
ಉಳುವವನೇ ಭೂ ಒಡೆಯ ಸಿದ್ಧಾಂತಿ ಕಾಂಗ್ರೆಸ್ ಅಧಿವೇಶನ ಪ್ರವೇಶ ದ್ವಾರದ ಮುಂದೆ ರೈತನ ಬೃಹದಾಕಾರದ ಪ್ರತಿಮೆ ಸ್ಥಾಪನೆ	: 1889
ನಿಧನ	: 1890

2021 ಅಂತರರಾಷ್ಟ್ರೀಯ ಹಣ್ಣು ತರಕಾರಿಗಳ ವರ್ಷ

– ಹರಿಪ್ರಸಾದ್

ವಿಶ್ವಸಂಸ್ಥೆಯ ಸರ್ವಸದಸ್ಯ ಸಭೆಯಲ್ಲಿ 2021 ವರ್ಷವನ್ನು ಹಣ್ಣು ಮತ್ತು ತರಕಾರಿಗಳ ವರ್ಷವೆಂದು ಘೋಷಿಸಿ, ಅದರ ಅಂಗಸಂಸ್ಥೆ ಆಹಾರ ಮತ್ತು ಕೃಷಿ ಸಂಸ್ಥೆಯು (ಎಫ್.ಎ.ಒ.) ಈ ಕಾರ್ಯಕ್ರಮವನ್ನು ನಿರ್ವಹಿಸಬೇಕೆಂದು 2021 ವರ್ಷದಾದ್ಯಂತ ಸಂಬಂಧಿತ ಸಂಸ್ಥೆಗಳು ಮತ್ತು ಸಂಘಗಳೊಡನೆ ಇದು ನಡೆಯಬೇಕೆಂದೂ ಸೂಚಿಸಿದೆ. ಹಣ್ಣು ತರಕಾರಿಗಳಿಗೆ ಮಾನವ ಪೌಷ್ಠಿಕತೆಯಲ್ಲಿ ಇರುವ ಮಹತ್ವದ ಪಾತ್ರ, ಆಹಾರ ಸುರಕ್ಷತೆ, ಆರೋಗ್ಯ ಹಾಗೂ ವಿಶ್ವಸಂಸ್ಥೆಯ ಒಂದು ಮುಖ್ಯ ಧ್ಯೇಯವಾದ ಸುಸ್ಥಿರ ಅಭಿವೃದ್ಧಿ ಇವುಗಳೆಡೆಗೆ ಸಾಗುವಲ್ಲಿ ಈ ವಿಶಿಷ್ಟ ಆಹಾರಗಳ ಬಗೆಗೆ ಜಾಗೃತಿ ಮೂಡಿಸುವ ವಿಶೇಷ ಅವಕಾಶ ಇದಾಗಿರಬೇಕೆಂಬುದು (ಎಫ್.ಎ.ಒ.) ಆಶಯ. ಈ ಕಾರ್ಯಕ್ರಮಕ್ಕೆ ಎಫ್.ಎ.ಒ. ಮುಖ್ಯಸ್ಥರು ಡಿಸೆಂಬರ್ 2021ರಲ್ಲೆ ಚಾಲನೆ ನೀಡಿದರು. ನವೀನ ವಿಧಾನಗಳು, ತಂತ್ರಜ್ಞಾನಗಳ ಮೂಲಕ ಆರೋಗ್ಯದಾಯಕ ಹಾಗೂ ಸುಸ್ಥಿರ ಗುಣವುಳ್ಳ ಆಹಾರ ಉತ್ಪಾದನೆಗೆ ಈ ಮೂಲಕ ಕರೆ ನೀಡಲಾಯಿತು.

ಈ ಅಂತರರಾಷ್ಟ್ರೀಯ ವರ್ಷದ ಮುಖ್ಯ ಉದ್ದೇಶಗಳು :

1. ಪೌಷ್ಠಿಕತೆ ಮತ್ತು ಆರೋಗ್ಯದ ದೃಷ್ಟಿಯಿಂದ ಹಣ್ಣು ತರಕಾರಿಗಳ ಸೇವನೆಯ ಬಗೆಗೆ ಜಾಗೃತಿ ಮೂಡಿಸುವುದು.
2. ಸಮತೋಲಿತ ಹಾಗೂ ಆರೋಗ್ಯದಾಯಕ ಆಹಾರ ಕ್ರಮವನ್ನು ವಿವಿಧ ಹಣ್ಣು ತರಕಾರಿಗಳ ಸೇವನೆಯಿಂದ ರೂಢಿಸಿಕೊಳ್ಳುವುದು.
3. ಆಹಾರ ಪದ್ಧತಿಯಲ್ಲಿ ಹಣ್ಣು ತರಕಾರಿಗಳ ನಷ್ಟವನ್ನು ಕಡಿಮೆ ಮಾಡುವುದು.
4. ಉತ್ತಮ ಕಾರ್ಯಾಚರಣೆಗಳ ಅನುಷ್ಠಾನ

ಅ) ಸುಸ್ಥಿರ ಪದ್ಧತಿಗೆ ಅನುವಾಗುವಂತಹ ಹಣ್ಣು ತರಕಾರಿಗಳ ಸೇವನೆಗೆ ಪ್ರೋತ್ಸಾಹ

ಆ) ಈ ಪದಾರ್ಥಗಳ ಉತ್ತಮ ದಾಸ್ತಾನು, ಸಾಗಾಣಿಕೆ, ವ್ಯಾಪಾರ, ಸಂಸ್ಕರಣೆ, ವ್ಯರ್ಥ ತಡೆಯುವಂತಹ ಪದ್ಧತಿಗಳನ್ನು ಅನುಸರಿಸುವುದು.

ಇ) ಈ ಪದಾರ್ಥಗಳನ್ನು ಬೆಳೆಯುವ ರೈತ, ಬಳಸುವ ಕುಟುಂಬ ವ್ಯವಸ್ಥೆ, ಸ್ಥಳಿಕ, ಪ್ರಾದೇಶಿಕ, ಅಂತರಾಷ್ಟ್ರೀಯ ಮುಂತಾದ ವಿವಿಧ ಸ್ತರಗಳ ನಡುವೆ ಯುಕ್ತ ಸಂಬಂಧ ಕಲ್ಪಿಸುವುದು. ಇದರಿಂದ ಪೌಷ್ಠಿಕತೆ, ಜೀವನೋಪಾಯ, ಅದಾಯಗಳೆಲ್ಲ ಉತ್ತಮಗೊಳ್ಳುವುದು.

ತರಕಾರಿಗಳಲ್ಲಿ ಹಸಿರು ಸೊಪ್ಪು ತರಕಾರಿಗಳು ಅತ್ಯಮೂಲ್ಯವೂ ಹೌದು. ನಮಗೆ ನಿಲುಕುವ ಖರ್ಚಿಗೆ ದೊರೆಯುವಂತಹವೂ ಹೌದು. ಹಸಿರಲ್ಲದೆ ಸ್ವಲ್ಪ ಬೇರೆ ಬಣ್ಣಗಳಿರುವ ಸೊಪ್ಪುಗಳೂ ಇವೆ. ನಾರನಾಂಶ, ಕಡಿಮೆ ಕ್ಯಾಲೊರಿ, ಸ್ವಲ್ಪ ಮಟ್ಟಿನ ಪ್ರೋಟೀನ್, ಸಾಕಷ್ಟು ಖನಿಜಾಂಶಗಳು (ಕ್ಯಾಲ್ಸಿಯಂ, ಕಬ್ಬಿಣ, ಸೋಡಿಯಂ, ಪೊಟಾಸಿಯಂ, ತಾಮ್ರ, ಸತು), ವಿಟಮಿನ್ ಎ ಕಾರಕ ಬೀಟ ಕೆರೋಟಿನ್, ಫೋಲಿಕ್ ಆಮ್ಲ, ವಿಟಮಿನ್ ಸಿ ಇಂತಹ ಪೌಷ್ಠಿಕಾಂಶಗಳ ಸಂಪನ್ಮೂಲಕ ಸೊಪ್ಪು ತರಕಾರಿಗಳು. ಇದು ಕೇವಲ 2021ರ ಎಫ್.ಎ.ಒ. ಘೋಷಣೆಯೆಂದು ಅಸಡ್ಡೆ ಮಾಡಬೇಡಿ. ಎಲ್ಲರ ಜೀವನಪರ್ಯಂತ ಹಣ್ಣು ತರಕಾರಿಗಳು ಎಂದಿಗೂ ರಕ್ಷಕ ಆಹಾರಗಳು.

ಸೌಜನ್ಯ : ಬಾಲವಿಜ್ಞಾನ ಕನ್ನಡ ಮಾಸ ಪತ್ರಿಕೆ

ವರ್ತಮಾನದ ತಲ್ಲಣಗಳಿಗೆ ಬಾಪುವಿನಲ್ಲಿ ಉತ್ತರ

– ಪ್ರಸನ್ನಕುಮಾರ್ ಕೆರಗೋಡು

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಪುಸ್ತಕಗಳಲ್ಲಿ ಆತ್ಮ ಸಾಂಗತ್ಯ ಕಂಡುಕೊಂಡಿದ್ದ ಬಾಪು...

ಯಾರೇ ಆಗಲಿ ತಮ್ಮ ಜೀವಿತಾವಧಿಯಲ್ಲಿ ಭೂಮಿಯ ಎಲ್ಲಾ ಪ್ರದೇಶಗಳ ಮತ್ತು ಎಲ್ಲಾ ಜನ, ಸಂಸ್ಕೃತಿ, ಜ್ಞಾನಗಳನ್ನು ಆಯಾ ಪ್ರದೇಶಗಳಿಗೆ ತೆರಳಿ, ಅವರನ್ನು ಭೇಟಿ ಮಾಡಿ ಅವರನ್ನೂ, ಹಾಗೂ ಅವರ ಸಂಸ್ಕೃತಿಗಳನ್ನು ಅನುಭವಿಸಿ ಜ್ಞಾನ ಹೊಂದುವುದು ಸಾಧ್ಯವಾಗದ ವಿಚಾರ. ಅಂಥಾದ್ದೆಲ್ಲವನ್ನೂ ಪುಸ್ತಕಗಳ ಮುಖಾಂತರ ಪಡೆದುಕೊಳ್ಳಬಹುದಾಗಿದೆ ಪುಸ್ತಕ ಓದಿನ ಹವ್ಯಾಸ ಹೊಂದಿರುವವನು ಒಂದೇ ಜನ್ಮದಲ್ಲಿ ಸಾವಿರ ಜೀವನ ಕಾಣಬಲ್ಲ, ಆದರೆ ಪುಸ್ತಕ ಓದುವ ಹವ್ಯಾಸ ಇಲ್ಲದವನು ಒಂದು ಹುಟ್ಟಿನಲ್ಲಿ ಕೇವಲ ಒಂದೇ ಜೀವನವನ್ನು ಮಾತ್ರ ಅನುಭವಿಸಬಲ್ಲ' ಎಂಬ ಪುಸ್ತಕದ ಮಹತ್ವ ಸಾರುವ ಅನುಭವದ ಮಾತಿನ ಹಿನ್ನೆಲೆಯಲ್ಲಿಯೆ ಹೇಳುವುದಾದರೆ ಪುಸ್ತಕ ಮನುಷ್ಯನ ನಿಜವಾದ ಆತ್ಮ ಸಂಗಾತಿ. ಹೌದು, ಎಲ್ಲರ ಆತ್ಮ ಸಂಗಾತಿಯಾಗುವ ಎಲ್ಲ ಅರ್ಹತೆಗಳೂ ಪುಸ್ತಕಗಳಿವೆ. ಪುಸ್ತಕ ಎಂದರೆ ಅದು ಅಂಗೈ ಮೇಲಿನ ವಿಶ್ವ. ವಿಶ್ವದ ಎಲ್ಲಾ ಬಗೆಯ ಮಾಹಿತಿಯನ್ನು ತನ್ನೊಡಲಲ್ಲಿ ಇಟ್ಟುಕೊಂಡು ಜ್ಞಾನದ ಮಹಾ ಉತ್ತುಂಗಕ್ಕೆ ಓದುಗರನ್ನು ಕೊಂಡೊಯ್ಯುವ ಈ ಪುಸ್ತಕ ಒಂದು ಬಗೆಯಲ್ಲಿ ಮನುಷ್ಯರಿಗೆ ಅನಿವಾರ್ಯವಾದುದು. ಬಾಲ್ಯದಲ್ಲಿ ಯಾವುದಾದರೂ ಒಂದು ಹೊಸ ಪುಸ್ತಕ ಖರೀದಿಸಿದೆವೆಂದರೆ ಅದನ್ನು ಪದೇಪದೆ ಮುಟ್ಟಿ ತಿರುಗಿಸಿ ಆಸ್ವಾದವಾದಿಸುವುದೆ ಒಂದು ಆನಂದ. ಅದೊಂದು ಭಾವಾತಿರೇಕದ ಅದ್ಭುತ ಅನುಭೂತಿ. ಹೊಸ ಪತ್ರಗಳು ಬಂತೆಂದರೆ ಸಾಕು ಶಾಲೆಯಲ್ಲಿ ಇರುವಾಗ ಅಥವಾ ಮನೆಗೆ ಬಂದಾಗ ಅವುಗಳನ್ನು ತಿರುತಿರುಗಿ ಸ್ಪರ್ಶಿಸುತ್ತಿದ್ದುದ್ದು ಅಥವಾ ಪುಟಗಳನ್ನು ಓದುವುದರಲ್ಲಿ ಯಾವುದೊ ಸಂತೋಷ ಅನುಭವಿಸುತ್ತಿದ್ದೆವು. ಪುಸ್ತಕ ಓದುವ ಹವ್ಯಾಸ ರೂಡಿಸಿಕೊಂಡ ಯಾರನ್ನೆ ಆಗಲಿ ಅತ್ಯಂತ ಗೌರವಯುತವಾಗಿ ಕಾಣಲಾಗುತ್ತಿತ್ತು. ಅಂತವರ ಬಳಿ ಅದೂ ಇದೂ ಕೇಳಿಕೊಂಡು ಹೋಗುವ ದೃಶ್ಯಗಳು ಹಳ್ಳಿಗಳಲ್ಲಿ ಸರ್ವೆ ಸಾಮಾನ್ಯವಾಗಿತ್ತು. ಓದಿಗೆ ಮತ್ತು ಜ್ಞಾನಕ್ಕೆ ಅಂತಹ ಮಹತ್ವವಿತ್ತು. ಬಾಪುವಿಗೆ ಓದು ಎನ್ನುವುದು ಮಾನಸಿಕ ನೆಮ್ಮದಿ ಮತ್ತು ಜ್ಞಾನ ಪರಿದಿಯನ್ನು ಹೆಚ್ಚಿಸಿಕೊಳ್ಳುವ ಒಂದು ಸಾಧನವಾಗಿತ್ತು. ಬುದ್ಧ, ಸಾಕ್ರೆಟಿಸ್ ಮುಂತಾದವರ ತತ್ವಗಳನ್ನು ಗ್ರಹಿಸಲು ಮಾತ್ರವೆ ಅಲ್ಲದೆ ಜಗತ್ತಿನ ಶ್ರೇಷ್ಠ ದಾರ್ಶನಿಕರು ಮತ್ತು ವಿಜ್ಞಾನಿಗಳ ಜೀವನ–ಸಾಧನೆಗಳನ್ನು ಅರ್ಥೈಸಿಕೊಳ್ಳಲು ಅವರು ಪುಸ್ತಕಗಳ ಮೇಲೆ ಅವಲಂಬನೆಯಾಗಿದ್ದರು. ಓದು ಎನ್ನುವುದು ಅವರಿಗೆ ಜೀವನ ಪ್ರಯೋಗದ ಮುಖ್ಯ ಭಾಗವೂ ಆಗಿದ್ದುದ್ದರಿಂದಲೆ ಅವರ ಜ್ಞಾನದ ಹಸಿವು ತಣಿಯುತ್ತಿರಲೆ ಇಲ್ಲ. ಅವರ ಇಂತಹ ಒಂದು ಜೀವನ ಮಾರ್ಗ ಎಲ್ಲರದೂ ಆದರೆ ಓದು ಅಭ್ಯಾಸವಾಗಿ ಆ ಮೂಲಕ ಜಗತ್ತಿನ ಕುರಿತಾದ ಅರಿವು ವಿಶಾಲವಾಗುತ್ತದೆ.

ಮುಂದುವರಿಯುವುದು..

ವಿಶ್ವದ ವಿಚಾರವಂತ ಹಿರಿಯಜ್ಜ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಡಾ. ಎಚ್.ಎಸ್. ದೊರೆಸ್ವಾಮಿ ಅವರ 104ನೇ ಜನುಮ ದಿನಾಚರಣೆಯಂದು ಕಿರುಪರಿಚಯದೊಂದಿಗೆ ಶುಭಾಶಯಗಳು



ವಿಶ್ವದ ವಿಚಾರವಂತ ಹಿರಿಯಜ್ಜ ದೊರೆಸ್ವಾಮಿ ಅವರು ಏಪ್ರಿಲ್ 10, 1918ರಲ್ಲಿ ಹಾರೋಹಳ್ಳಿಯಲ್ಲಿ ಜನಿಸಿದವರಾಗಿದ್ದಾರೆ. ಮಹಾತ್ಮ ಗಾಂಧಿ ಅವರ "ಮೈ ಅರ್ಲಿ ಲೈಫ್" ಕೃತಿಯಿಂದ ಪ್ರೇರಿತರಾಗಿ ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಅವರ ಪ್ರೌಢ ಶಿಕ್ಷಣದ ಸಮಯದಲ್ಲಿ, ಬೆಂಗಳೂರಿನಲ್ಲಿ ಸ್ವಾತಂತ್ರ್ಯ ಜಾಗೃತಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ಎಲ್ಲ ನಾಯಕರ ಜೊತೆ ಇವರನ್ನೂ ಬಂಧಿಸಲಾಯಿತು. ಆನಂತರ ವಿದ್ಯಾರ್ಥಿಗಳನ್ನು ಸಂಘಟಿಸಿ ಅನೇಕ ಹೋರಾಟಗಳನ್ನು ನಡೆಸಿದರು. ಇದರಿಂದಾಗಿ ಬೆಂಗಳೂರಿಗೆ ಆಗಮಿಸುತ್ತಿದ್ದ ಅನೇಕ ನಾಯಕರುಗಳ ಒಡನಾಟ ಹೆಚ್ಚಾಯಿತು. ಇವರು ಬಿ.ಎಸ್.ಸಿ ಪದವಿ ಪೂರ್ಣಗೊಳಿಸಿ, ಉಪನ್ಯಾಸಕರಾಗಿ ವೃತ್ತಿಯನ್ನು ಆರಂಭಿಸಿದರು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಪಾಲ್ಗೊಂಡರು. ಸರ್ಕಾರಿ ದಾಖಲೆಗಳನ್ನು ಹಾನಿ ಮಾಡಲು ಬಳಸಲು ಟೈಮ್ ಬಾಂಬ್‌ನ್ನು ತಯಾರಿಸಿದ ಆರೋಪದಲ್ಲಿ ಹೆಚ್.ಎಸ್.ಡಿ. ಅವರು 14 ತಿಂಗಳ ಕಾಲ ಸೆರೆವಾಸ ಅನುಭವಿಸಬೇಕಾಯಿತು. ಅನಂತರ ಗಾಂಧಿ ಅವರ ತತ್ವ ಸಿದ್ಧಾಂತಗಳಿಂದ ಪ್ರೇರಿತರಾಗಿ ಅಹಿಂಸೆ ಮತ್ತು ಸತ್ಯಾಗ್ರಹದ ಆದರ್ಶಗಳನ್ನು ಅನುಸರಿಸಲು ನಿರ್ಧರಿಸಿದರು. ಇವರು ಸಾಹಿತ್ಯ ಮಂದಿರವೆಂಬ ಪುಸ್ತಕ ಮಳಿಗೆ ಮತ್ತು ಪ್ರಕಾಶನ ಡಿಪೋವನ್ನು ಸ್ಥಾಪಿಸಿದರು. ಅಲ್ಲಿ ಆರ್.ಕೆ. ನಾರಾಯಣ್ ಮತ್ತು ಕೆ.ಎಸ್. ನರಸಿಂಹಸ್ವಾಮಿ ಇನ್ನೂ ಮುಂತಾದವರು ಇವರ ಆತ್ಮೀಯ ಬಳಗದಲ್ಲಿದ್ದರು. ಇವರ ಸಾರಥ್ಯದಲ್ಲಿ ಸ್ವಾತಂತ್ರ್ಯಾ ನಂತರ 1953ರಲ್ಲಿ ಪತ್ರಕರ್ತರ ಸಂಘದ ಅಧ್ಯಕ್ಷತೆ ವಹಿಸಿಕೊಂಡರು. ಮತ್ತು ಪತ್ರಕರ್ತರ ಸಹಕಾರ ಸಂಘದ ಸ್ಥಾಪನೆ ಮಾಡಿದರು. ಏಕೀಕರಣ ಚಳವಳಿಯಲ್ಲಿ ಬಳ್ಳಾರಿ ಸಿದ್ದಮ್ಮ, ಬಿ.ಎನ್. ಬೋರೇಗೌಡ, ನರಸಿಂಹಯ್ಯನವರೊಡಗೂಡಿ, ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಮಾಡಿ, ಜನ ಜಾಗೃತಿಗೊಳಿಸಿದ್ದರು. ನಂತರ ಏಕೀಕರಣವನ್ನು ಒತ್ತಾಯಿಸಲು, ದೆಹಲಿಗೆ ತೆರಳುವ ನಿಯೋಗದೊಂದಿಗೆ ತೆರಳಿ, ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ್, ಪ್ರಧಾನಿ ನೆಹರು, ವಲ್ಲಭಬಾಯ್ ಪಟೇಲ್ ಅವರನ್ನು ಭೇಟಿ ಮಾಡಿ, ನಿವೇದನೆ ಸಲ್ಲಿಸಿದ್ದರು. ಇವರು ಭೂದಾನ ಚಳುವಳಿಯಲ್ಲಿ, ಹನುಮಂತನಗರ ಸಹಕಾರ ಬ್ಯಾಂಕ್ ಸ್ಥಾಪನೆ, ಭಾರತಮಾತಾ ವಿದ್ಯಾಮಂದಿರ ಸ್ಥಾಪನೆ, ಮೈಸೂರು ವಿ.ವಿ.ಯ ಸೆನೆಟ್ ಸದಸ್ಯರಾಗಿದ್ದು ಬೆಳ್ಳೂರಿನಲ್ಲಿ ಕೋಮು ಸೌಹಾರ್ದತೆಗೆ ಶ್ರಮಿಸಿದ್ದು, ತುರ್ತು ಪರಿಸ್ಥಿತಿಯಲ್ಲಿ ಪ್ರಧಾನಿ ಇಂದಿರಾ ಗಾಂಧಿ ಅವರಿಗೆ ಪತ್ರ, ಜನಜಾಗೃತಿ ಮೂಡಿಸಲು ಕರ್ನಾಟಕದಾದ್ಯಂತ ಪ್ರವಾಸ, ಕೈಗಾ ಅಣುಶಕ್ತಿ ಸ್ಥಾವರ ಸ್ಥಾಪನೆ ವಿರುದ್ಧ ಹೋರಾಟ, ಗೋಹತ್ಯಾ ನಿಷೇಧ ಚಳುವಳಿ, ಹರಿಹರ ಪಾಲಿಫೈಬರ್ಸ್ ವಿರುದ್ಧ ಹೋರಾಟ– ರೈತ ಚಳುವಳಿಯಲ್ಲಿ ರೈತ ನಾಯಕರೊಂದಿಗೆ ನೈಸ್ ಕಂಪನಿಯ ಭೂ ಕಬಳಿಕೆ ವಿರುದ್ಧ ಹೋರಾಟ, ಮಂಡೂರು ಕಸ ಸಂಗ್ರಹಗಾರ ಜನಾರೋಗ್ಯ ನೈರ್ಮಲ್ಯಕ್ಕಾಗಿ ಚಳವಳಿ, ಎ.ಟಿ. ರಾಮಸ್ವಾಮಿ ಅವರೊಂದಿಗೆ ಭೂಕಬಳಿಕೆ ವಿರುದ್ಧ 2014ರಲ್ಲಿ ಆಂದೋಲನ, ಕಾವೇರಿ ನದಿ ನೀರು ಹಂಚಿಕೆ, ನಕ್ಸಲರ ಬಿಡುಗಡೆಯ ಮಾನವೀಯ ಹೋರಾಟ, ಭೂಮಿ ಮತ್ತು ವಸತಿ ಹಕ್ಕು ವಂಚಿತರ ಪರವಾಗಿ ಇಂದಿಗೂ ಹೋರಾಟದ ಬದುಕನ್ನು ಮುಂದುವರಿಸುತ್ತಿರುವ ಸ್ಫೂರ್ತಿಯ ಚಿಲುಮೆ ಡಾ. ಹೆಚ್. ಎಸ್. ದೊರೆಸ್ವಾಮಿ ಅವರಿಗೆ ಸದಾಭಿಮಾನದ ಅಭಿನಂದನೆಗಳು.

ಬೆಳಗಾಂ ಅಧಿವೇಶನದಲ್ಲಿ ಕಲಾತಪಸ್ವಿ ವೆಂಕಟಪ್ಪ ಅವರು

– ವೇಮಗಲ್ ಸೋಮಶೇಖರ್.

ಬೆಳಗಾಂನಲ್ಲಿ ಅಖಿಲಭಾರತ 43ನೇ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ 1924ರ ಡಿಸೆಂಬರ್ 26,27,28ರಂದು ಮಹಾತ್ಮ ಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಕಾರಣದಿಂದಾಗಿ ಗಾಂಧೀಜಿ ಡಿಸೆಂಬರ್ 20ರಂದೇ ಬೆಳಗಾಂಗೆ ಹೋಗಿ 30ರವರೆಗೆ ತಂಗಿದ್ದರು. ಈ ಅಧಿವೇಶನವನ್ನು ಅದ್ಧೂರಿಯಿಂದ ನಡೆಸಬೇಕೆಂದು ಕರ್ನಾಟಕದ ಮುಂದಾಳುಗಳು ಬಯಸಿ, ಅಧಿವೇಶನದ ಸಮಯದಲ್ಲಿ ಸ್ವದೇಶಿ ಪ್ರದರ್ಶನದ ಅಂಗವಾಗಿ ಒಂದು ಚಿತ್ರಕಲಾ ಪ್ರದರ್ಶನವನ್ನೂ, ಒಂದು ಸಂಗೀತ ಸಮ್ಮೇಳನವನ್ನೂ ಏರ್ಪಡಿಸಿದ್ದರು. ಸಂಗೀತ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಮೈಸೂರು ಸಂಸ್ಥಾನದ ಪ್ರಸಿದ್ಧ ವಿದ್ವಾಂಸರಾಗಿದ್ದ ವೈಣಿಕ ಶಿಖಾಮಣಿ ಶೇಷಣ್ಣನವರಿಗೆ ಇನ್ನೂ ಮುಂತಾದವರಿಗೆ ಕರೆ ಬಂದಿದ್ದಿತು. ಕಾರ್ಯಕರ್ತರಾದ ಮುದುವೀಡು ಕೃಷ್ಣರಾಯರು ಇದಕ್ಕಾಗಿ ಮೈಸೂರಿಗೆ ಬಂದಿದ್ದವರು ವೆಂಕಟಪ್ಪ ಅವರ ಸ್ಟುಡಿಯೋಗೂ ಡಿಸೆಂಬರ್ 11ರಂದು ಬಂದು ಅವರನ್ನೂ ಆಹ್ವಾನಿಸಿದರು. ವೆಂಕಟಪ್ಪನವರು ಬರಲಾರೆನೆಂದಾಗ ತಮ್ಮ ಚಿತ್ರಗಳನ್ನಾದರೂ ಅಧಿವೇಶನದ ಪ್ರದರ್ಶನಕ್ಕೆ ಕಳುಹಿಸಿಕೊಡಬೇಕೆಂದು ಕೇಳಿಕೊಂಡರು. ಸದರೀ ಪ್ರದರ್ಶನದ ಕಾರ್ಯದರ್ಶಿಯಾಗಿದ್ದ ಎಚ್.ಎಸ್.ಕೌಜಲಗಿ ಬೆಳಗಾಂನಿಂದ ಪತ್ರ ಬರೆದು ಡಿಸೆಂಬರ್ ತಿಂಗಳ 15ರ ಒಳಗಾಗಿ ಚಿತ್ರಗಳು ತಲುಪಬೇಕೆಂದು ತಿಳಿಸಿದರು. ಈ ಪತ್ರ ಮುಟ್ಟಿದ್ದು 13ರಂದು. ಕಾಲಾವಕಾಶ ತೀರ ಅಲ್ಪವೆಂದು ವೆಂಕಟಪ್ಪನವರು ಚಿತ್ರಗಳನ್ನು ಕಳುಹಿಸುವುದೋ ಬೇಡವೋ ಎಂದು ಅನುಮಾನಿಸಿದರು. 14ರಂದು ಒಡನೆಯೇ ಚಿತ್ರಗಳನ್ನು ಕಳುಹಿಸಬೇಕೆಂದು ಕೌಜಲಗಿಯವರಿಂದ ತಂತಿ ಬಂದಿತು. ಮರುದಿನ ಸ್ಥಳೀಯ ಕಾಂಗ್ರೆಸ್ ಕಚೇರಿಯಿಂದ ಯಾರೋ ಬಂದು ಚಿತ್ರಗಳನ್ನು ಬೆಳಗಾವಿಗೆ ಕಳುಹಿಸುವ ಹೊಣೆಯನ್ನು ತಾವು ಹೊರುವೆವೆಂದರು. ಆದರೆ ವೆಂಕಟಪ್ಪನವರು ತಾವೇ ಚಿತ್ರಗಳನ್ನು ಪ್ಯಾಕ್‌ಮಾಡಿ ರೈಲು ನಿಲ್ದಾಣಕ್ಕೆ ಹೋಗಿ ಕಳುಹಿಸಿ ಬಂದರು. ವೆಂಕಟಪ್ಪನವರು ಬೆಳಗಾಮ್‌ಗೆ ಹೋಗುವುದು ಇನ್ನೂ ನಿಶ್ಚಿತವಿರಲಿಲ್ಲ. ಡಿಸೆಂಬರ್ ಒಂಬತ್ತರ ಮುಂಚೆಯೇ ವೀಣೆ ವೆಂಕಟಗಿರಿಯಪ್ಪ ಮೊದಲಾದವರು ವೆಂಕಟಪ್ಪ ಅವರು ತಮ್ಮೊಡನೆ, ಶೇಷಣ್ಣನವರ ಶಿಷ್ಯರಲ್ಲಿ ಒಬ್ಬರಾಗಿ, ಬೆಳಗಾಂಗೆ ಬರಬೇಕೆಂದು ಒತ್ತಾಯ ಮಾಡುತ್ತಿದ್ದರು. ಅಧಿವೇಶನದಲ್ಲಿ ಮಹಾತ್ಮಗಾಂಧಿ ಅವರ ಮುಂದೆ ಶೇಷಣ್ಣನವರ ವೀಣಾವಾದನ ಏರ್ಪಟ್ಟಿತ್ತು. ಉಳಿದ ಮೈಸೂರು ವಿದ್ವಾಂಸರಿಗೂ ಮಹಾತ್ಮರೆದುರು ತಮ್ಮ ಕೌಶಲವನ್ನು ತೋರಿಸುವ ಅವಕಾಶವನ್ನು ಕಲ್ಪಿಸುವುದೆಂದು ಗೊತ್ತಾಗಿದ್ದಿತು. ಆದರೆ ವೆಂಕಟಪ್ಪನವರು ಒಪ್ಪಿರಲಿಲ್ಲ. 16ನೆಯ ತಾರೀಖಿನಂದು ಶೇಷಣ್ಣ ಅವರ ಮನೆಯಲ್ಲಿ ಶೇಷಣ್ಣ ಅವರ ಒಡನಾಡಿಗಳೂ ವೆಂಕಟಪ್ಪನವರ ಮಿತ್ರರೂ ಆಗಿದ್ದ ಸಿ.ನರಸಿಂಹಯ್ಯ ಎಂಬುವರು ವೆಂಕಟಪ್ಪನವರನ್ನು ತಾವು ಬಂದೇ ಬರಬೇಕೆಂದು ಕೇಳಿಕೊಂಡಿದ್ದರು. ಪ್ರಯಾಣದ ವ್ಯವಸ್ಥೆಯೆಲ್ಲ ಈತನದೇ ಆಗಿದ್ದಿತು, 22ನೆಯ ತಾರೀಖಿನಂದು ಅವರು ಮತ್ತೆ ವೆಂಕಟಪ್ಪ ಅವರ ಸ್ಟುಡಿಯೋಗೆ ಬಂದು ವೆಂಕಟಪ್ಪ ಅವರನ್ನು ಅಗತ್ಯವಾಗಿ ಬರಲೇಬೇಕೆಂದು ನಿರ್ಬಂಧಮಾಡಿದರು. ಪ್ರಯಾಣದ ಎಲ್ಲ ಸಿದ್ಧತೆಗಳನ್ನೂ ತಾವು ಮಾಡಿ ಅಲ್ಲಿ ವೆಂಕಟಪ್ಪ ಅವರ ವಸತಿ ಊಟೋಪಚಾರಗಳನ್ನು ತಾವೇ ಏರ್ಪಡಿಸುವುದಾಗಿ ಭರವಸೆಯಿತ್ತರು. ಆದರೆ ಆಗಲೇ ಅಪರಿಗ್ರಹವ್ರತವನ್ನು ತೊಟ್ಟಿದ್ದ ವೆಂಕಟಪ್ಪ ಅವರು "ನನ್ನ ಸ್ವಭಾವ ಬೇರೆಯವರನ್ನು ಯಾವ ವಿಚಾರಕ್ಕಾಗಿಯೂ ಅವಲಂಬಿಸುವುದಲ್ಲವೆಂದು ನಿಮಗೆ ತಿಳಿದಿದೆ. ನನ್ನ ಕೆಲಸದಿಂದ ಬಿಡುವು ದೊರೆತು ಹಣದ ಅನುಕೂಲವಾದರೆ ನಾನೇ ಬರುತ್ತೇನೆ" ಎಂದುಬಿಟ್ಟರು.

ಮುಂದುವರಿಯುವುದು....

ಸಾದರ ಸ್ವೀಕಾರ

ಶೀರ್ಷಿಕೆ	ಪ್ರಕಾಶಕರು	ಲೇಖಕರು
1. ಮಕ್ಕಳ ಮೇಷ್ಟ್ರು	ಕುವೆಂಪು ಗ್ರಂಥಾಲಯ ಬಳಗ	ಹುರುಕಡ್ಲಿ ಶಿವಕುಮಾರ
2. ಸಾಹಿತ್ಯ ಸುರಭಿ	ಬಸವ ಪಬ್ಲಿಕೇಶನ್ಸ್	ಡಾ. ತಿಪ್ಪೇರುದ್ರಪ್ಪ ಸಂಡೂರು
3. ತಿಳಿದಷ್ಟೇ ಬಯಲು	ಶ್ರೀ ಮರಡಿಲಿಂಗೇಶ್ವರ ಮೈಸೂರು	ಡಾ. ಜಾಜಿ ದೇವೇಂದ್ರಪ್ಪ
4. ದಲಿತ ಚಿಂತನ : ವೈಚಾರಿಕ ಲೇಖನಗಳು	ಪಿತಾಮಹ ಪ್ರಕಾಶನ, ಬೆಂಗಳೂರು	ಡಿ. ಎಸ್. ವೀರಯ್ಯ
5. ಮಹಾತ್ಮ ವರ್ಸಸ್ ಗಾಂಧಿ	ವಂಶಿ ಪಬ್ಲಿಕೇಶನ್ಸ್	ಅನು : ಡಿ.ಎನ್. ಶ್ರೀನಾಥ್
6. ಬಸವಣ್ಣ ಹಾಗೂ ಮಾರ್ಟಿನ್ ಲೂಥರ್	ವಚನ ಅಧ್ಯಯನ ಕೇಂದ್ರ	ಡಾ. ಅಲ್ಲಮಪ್ರಭು ಸ್ವಾಮಿಗಳು
5. ಹೋರಾಟದ ಹೆಜ್ಜೆಗಳು	ಪಿತಾಮಹ ಪ್ರಕಾಶನ, ಬೆಂಗಳೂರು	ಸಂ: ಡಿ ಬಿ ಮಲ್ಲಿಕಾರ್ಜುನಸ್ವಾಮಿ
6. ಹೆಡ್ಮಾಸ್ಟರ್ ಕೆಂಗರಾಮಯ್ಯ	ಪೂರ್ಣಚಂದ್ರ ತೇಜಸ್ವಿ ಪ್ರಕಾಶನ	ಡಾ. ಎನ್. ನಂದೀಶ್ವರ್
7. A Forgotten Ambassador in Cairo	Simon & Schuster India	N.S. Vinodh

Collection by Naveenkumar



ದ ಮಹಾತ್ಮ ರಿಟರ್ನ್ಸ್ : ಯುವ ಶಕ್ತಿಗೆ ಗಾಂಧಿಯನ್ನು ಪರಿಚಯಿಸುವ ಶ್ರೇಷ್ಠ ಕಿರುಚಿತ್ರ

– ಪ್ರೊ. ಎಂ. ಚಂದ್ರಶೇಖರಯ್ಯ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನೀವು ನನ್ನನ್ನು ಅರ್ಥೈಸಿಕೊಳ್ಳುವಲ್ಲಿ ದೋಷಗಳಿವೆ ಎಂದು ಹೇಳಿ ಉಪವಾಸ, ಹರತಾಳ, ಸತ್ಯಾಗ್ರಹ, ಸಕಾರ–ನಕಾರ ಎರಡನ್ನೂ ಸೃಷ್ಟಿಸಬಲ್ಲದೆಂದು ಹೇಳಿದಾಗ ಯುವಕರು ಮತ್ತಷ್ಟು ಕುಪಿತರಾಗಿ 1928ರ ಸೈಮನ್ ಕಮಿಷನ್ ಆಯೋಗ ತಡೆಯಲಿಲ್ಲ. ಭಗತ್‌ಸಿಂಗ್ ಮತ್ತು ಮಿತ್ರ ಪಡೆ ಗಲ್ಲಿಗೇರಿಸಿದ್ದನ್ನು ನೀವು ತಡೆಯಲಿಲ್ಲ ಎಂದು ತೀವ್ರ ತರಾಟೆ ತೆಗೆದುಕೊಳ್ಳುತ್ತಾರೆ. ಗಾಂಧೀಜಿ ಯುವಕರನ್ನು ಕರೆದು ಹತ್ತಿರ ಕೂರಿಸಿಕೊಂಡು ವಿವರಿಸುತ್ತಾ ಹೋಗುತ್ತಾರೆ. ಈಗ ನಿರೂಪಕ ಆಗಮಿಸಿ ಗಾಂಧಿಗೆ ಶಾಲು ಹೊದಿಸಿ, ಗಾಂಧಿಯ ನೈಜ ವಿಚಾರಧಾರೆ ವಿವರಿಸುತ್ತಾನೆ. ರಕ್ತ ಚೆಲ್ಲಿದರಷ್ಟೆ ಸ್ವಾತಂತ್ರ ಎನ್ನುವುದು ಗಾಂಧಿಯ ನಿಲುವಲ್ಲ. ದೇಶವನ್ನು ಸುಲಿಗೆ ಮಾಡಲೆಂದೇ ಬಂದಿರುವ ಬ್ರಿಟಿಷರನ್ನು ಆಯುಧವೇ ಇಲ್ಲದೆ ಓಡಿಸುವುದು ಗಾಂಧಿಯ ನಿಲುವಾಗಿತ್ತು. ಇದನ್ನು ಇಡೀ ಜಗತ್ತು ಒಪ್ಪಿರುವಾಗ ಯುವಕರ ಅಸಹನೆ ಏಕೆ ಎಂಬ ಕಥೆ ವಿವರಿಸುತ್ತಾನೆ.

ಯುವಕರ ಕೋಪ ತಣ್ಣಗಾಗಿಸುವ ಅವರನ್ನು ಚಾರಿತ್ರಿಕ ಸತ್ಯಗಳಿಂದ ನಂಬಿಸುವ ಬಗೆಯನ್ನು ರಶ್ಮಿಚೇತಾ ಅರ್ಥಪೂರ್ಣವಾಗಿ ಅಳವಡಿಸಿಕೊಂಡಿದ್ದಾರೆ. ಗಾಂಧಿ ಚರಕದೊಂದಿಗೆ ಕುಳಿತ ಕೋಣೆಯಲ್ಲಿ ಟಾಲ್‌ಸ್ಟಾಯ್, ಜಾನ್ ರಸ್ಕಿನ್‌ರ ಭಾವಚಿತ್ರಗಳಿವೆ. ಗಾಂಧಿ ಒಂದು ಲೋಟ ನೀರು ಕುಡಿದು, ಯುವಕರಿಗೆ "ಈ ನೀರು ಒಂದು ಸಸಿಯನ್ನು ಮರವಾಗಿ ಬೆಳೆಯಲು ಹೇಗೆ ಪ್ರೇರಣೆಯೋ ಹಾಗೆಯೇ ನಾವು ಆ ಮರವನ್ನು ಅಂದರೆ ಗಳಿಸಿದ ಸ್ವಾತಂತ್ರ್ಯವನ್ನು ಹರಣಗೊಳಿಸಬಾರದು" ಎಂಬ ಸಂದೇಶ ನೀಡುತ್ತಾರೆ. ಹಾಗೆಯೇ ಮಾತಾಡುತ್ತಾ ಒಬ್ಬ ರಾಮ ನನಗೆ ಜನ್ಮ ನೀಡಿದ ಮತ್ತೊಬ್ಬ ರಾಮ ನನ್ನ ಜೀವ ಕಸಿದುಕೊಂಡ. ನಾನು ಆ ಇಬ್ಬರು ರಾಮರಿಗೂ ಕೃತಜ್ಞನಾಗಿದ್ದೇನೆ. ಎಂಬ ಶಾಕಿಂಗ್ ಸಂದೇಶ ನೀಡುತ್ತಾನೆ. ದೇಶದ ನಾಡಿ ಮಿಡಿತವೇ ಆಗಿದ್ದ ಗಾಂಧಿಯನ್ನು ಹಿಂದೂ ಶಕ್ತಿಯೇ ಕೊಲೆ ಮಾಡಿತೆಂಬ ಗಾಢ ವಿಷಾದ ಧುತ್ತನೆ ನಮ್ಮನ್ನು ಗಾಬರಿಗೊಳಿಸುತ್ತದೆ. ಯುವಪಡೆ ಆರಂಭದ ಉದ್ರೇಕ, ಕೋಪ ಕಳೆದುಕೊಂಡಿರುತ್ತಾರೆ. ಗಾಂಧಿಯ ಉತ್ತರಕ್ಕೆ ಮೌನ ತಾಳುತ್ತಾರೆ. ನಿರೂಪಕನ ಮತ್ತು ಗಾಂಧಿಯ ವಿವರಗಳಿಂದ ತಣ್ಣಗಾಗುತ್ತಾರೆ. ಇನ್ನೇನು ಮುಗಿಯಿತು ಎನ್ನುವ ಹೊತ್ತಿಗೆ ಬಾಲಕನೊಬ್ಬ ಅವರ ಹಿಂದೆ ಬಂದು ಪಂಚೆಯನ್ನು ಜಗ್ಗುತ್ತಾನೆ. ನಿಂತು ತಿರುಗಿ ನೋಡಿದ ಗಾಂಧಿ ತಮ್ಮ ಸತ್ಯದ ಶೋಧನೆಯ ಶಕ್ತಿಯೇ ಎಂಬಂತಿದ್ದ ತಮ್ಮ ಕನ್ನಡಕವನ್ನು ಆ ಹುಡಗನಿಗೆ ತೊಡಿಸಿ ಮುಗುಳ್ನಗುತ್ತಾರೆ. ಈ ಚಿತ್ರ 19 ನಿಮಿಷ 56 ಸೆಕೆಂಡುಗಳಲ್ಲಿ ಮುಗಿಯುತ್ತದೆ. ಆದರೆ ಚಿತ್ರ ಇಲ್ಲಿಂದಲೇ ಯುವ ಜನಾಂಗವನ್ನು ಯೋಚನೆಗೆ ಹಚ್ಚುವಂತೆ ಮಾಡುತ್ತದೆ ಎಂಬ ಧ್ವನಿ ಗಟ್ಟಿಗೊಳ್ಳುತ್ತದೆ. ಪ್ರಶಾಂತ್ ಜಡಿಯ ಗಾಂಧಿ ಪಾತ್ರವನ್ನು ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಮನಿಷ್ ಸೋನಿ ನಿರೂಪಕರಾಗಿ ಜೀವ ತುಂಬಿದ್ದಾರೆ.

ಚರಿತ್ರೆಯಲ್ಲಿ ಮರೆಯಾದ ಮಹಾತ್ಮರ ಅಕ್ಷರ ಮಾಧ್ಯಮ ಕಾಯಕ

– ಯ.ರು. ಪಾಟೀಲ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಈಗಾಗಲೇ ಹೇಳಿದಂತೆ ಯಂಗ್ ಇಂಡಿಯಾ ಪತ್ರಿಕೆಗೂ ಒಂದು ಇತಿಹಾಸವಿದೆ. ದಿ. 08.10.1919 ರಂದು ಆರಂಭವಾದ ಈ ಪತ್ರಿಕೆಗೆ ಸ್ಫೂರ್ತಿ ಹೋಂರೂಲ್ ಚಳುವಳಿ. ಅಹಮ್ಮದಾಬಾದ್‌ನ ಜಮನಾದಾಸ್ ದ್ವಾರಕಾನಾಥ್ ಈ ಪತ್ರಿಕೆಯ ಪ್ರಥಮ ಸಂಪಾದಕರಾಗಿದ್ದರು. ತದನಂತರ ಸಿ. ರಾಜಗೋಪಾಲಾಚಾರಿ ಅವರು ನಾಲ್ಕು ವರ್ಷಗಳ ಕಾಲ, ಜಾರ್ಜ್ ಜೋಸೆಫ್ ಅವರು ಒಂದೂವರೆ ವರ್ಷಗಳ ಕಾಲ ಸಂಪಾದಕತ್ವದ ಚುಕ್ಕಾಣಿ ಹಿಡಿದರೆ, ಗಾಂಧೀಜಿ ಅವರು ಸೆರೆಮನೆಯಿಂದ ಬಿಡುಗಡೆಯಾಗಿ ಬಂದ ತಕ್ಷಣ ದಿನಾಂಕ 03.04.1924ರಿಂದ 08.05.1930ರ ವರೆಗೆ ಸುದೀರ್ಘ ಕಾಲದ ಸಂಪಾದಕರಾಗಿ ಪತ್ರಿಕೆಯನ್ನು ನಡೆಸಿದರು. ತದನಂತರ ಜೆ.ಸಿ. ಕುಮಾರಪ್ಪಾ ಅವರು ಎಂಟು ತಿಂಗಳ ಕಾಲ ಸೈಕ್ಲೋಸ್ಟೈಲ ಪ್ರತಿ ರೂಪದಲ್ಲಿ ಪ್ರಕಟವಾದರೆ, ಗಾಂಧೀಜಿಯವರು ದಿನಾಂಕ 31.12.1931ರಂದು ಪತ್ರಿಕೆಯ ಪ್ರಕಟಣೆಯನ್ನು ಸ್ಥಗಿತಗೊಳಿಸಿದರು. ಪ್ರಾಮಾಣಿಕತೆಯ ಇನ್ನೊಂದು ಹೆಸರೇ ಮಹಾತ್ಮಾ ಗಾಂಧೀಜಿ. ಅವರು ಪರ್ತಕರ್ತರಾಗಿದ್ದರು ಎನ್ನುವ ಕಾರಣದಿಂದ ತಾವೊಬ್ಬ ಪತ್ರಕರ್ತರಾಗಿ ಹಾಗೂ ದೇಶದ ಪತ್ರಕರ್ತರ ಕುರಿತು ಮುಚ್ಚುಮರೆ ಇಟ್ಟುಕೊಂಡಿರಲಿಲ್ಲ. ದಿನಾಂಕ 21.04.1946ರಂದು ಹರಿಜನ ಪತ್ರಿಕೆಯಲ್ಲಿ ಬರೆದ ಒಂದು ಲೇಖನದಲ್ಲಿ ಗಾಂಧೀಜಿ ಅವರು ತಮ್ಮನ್ನು ಪತ್ರಕರ್ತ ಎಂದು ಸಂತೋಷದಿಂದ ಕರೆದುಕೊಂಡಿದ್ದಾರೆ. ಭಾರತೀಯ ಪತ್ರಕರ್ತರೊಬ್ಬರು ಗಾಂಧೀಜಿ ಅವರಿಗೆ ಒಂದು ಪತ್ರ ಬರೆದು 'ನಮ್ಮ ದೇಶದ ನಾಯಕರಿಗೆ ನಮ್ಮ ದೇಶದ ಪತ್ರಕರ್ತರಿಗಿಂತ ವಿದೇಶಿ ಪತ್ರಕರ್ತರ ಕುರಿತೇ ಅಧಿಕ ಗೌರವವಿದೆ, ಇದಕ್ಕೆ ನೀವೇನು ಹೇಳುತ್ತೀರಿ?' ಎಂದು ಪ್ರಶ್ನಿಸಿದ್ದರು. ಆಗ ಗಾಂಧೀಜಿ ಅವರ ಪ್ರಾಮಾಣಿಕ ಉತ್ತರವೆಂದರೆ 'ಹೌದು ಪರಿಸ್ಥಿತಿ ಹಾಗೆಯೇ ಇದೆ. ಈ ದೌರ್ಬಲ್ಯ ನನ್ನನ್ನೂ ಬಿಟ್ಟಿಲ್ಲ. ವಿದೇಶಿ ಪತ್ರಕರ್ತರಿಗೆ ನಮ್ಮ ನಾಯಕರು ವಿಶೇಷ ಸಂದರ್ಶನ ಹಾಗೂ ಭೇಟಿ ನೀಡುವ ಹಿಂದಿನ ಉದ್ದೇಶವೆಂದರೆ ನಮ್ಮ ವಿಚಾರಗಳು ಹೊರದೇಶಗಳಿಗೂ ಪಸರಿಸಲಿ' ಎಂಬುದು ಅಷ್ಟೆ. ನಮ್ಮ ದೇಶದ ಪತ್ರಕರ್ತರೂ ತಮ್ಮ ಪತ್ರಿಕೆಯ ಇತಿಮಿತಿಗಳನ್ನು ತಿಳಿದು ಕೆಲಸ ಮಾಡಲಿ 'ಕೇವಲ ವ್ಯಕ್ತಿಗಳನ್ನು ನೋಡಿ ಹೋಗಬೇಡಿ ಎಂದು ಒತ್ತಾಯಿಸುತ್ತೇನೆ' ಎಂದಿದ್ದರು. "ವೇಳೆಯ ಪ್ರಜ್ಞೆ" ಪತ್ರಿಕೋದ್ಯಮದ ಬೆನ್ನೆಲುಬು ಎನ್ನುವುದನ್ನು ಗಾಂಧೀಜಿ ಅವರು ಅರಿತಿದ್ದರು. ಅಭಿಮಾನಿಗಳು ಗಾಂಧೀಜಿ ಅವರನ್ನು ಭೇಟಿಯಾಗಲು ಹಿಂಡು ಹಿಂಡಾಗಿ ಬರುತ್ತಿದ್ದರು. ಹೋದಲ್ಲಿ ಬಂದಲ್ಲಿ ಜನಸಾಗರವೇ ತೇಲಿ ಬಂದಂತಾಗುತ್ತಿತ್ತು. ಆದರೆ ಸಮಯಬದ್ಧತೆಯ ಗಾಂಧೀಜಿ ಅವರು ತಮ್ಮ ಕೆಲಸಗಳನ್ನು ನಿಯಮಿತವಾಗಿ ಮಾಡುತ್ತಿದ್ದರು, ಹಿಡಿದ ಕೆಲಸಗಳನ್ನು ಮುಗಿಸಿದಾಗಲೇ ಅವರಿಗೆ ತೃಪ್ತಿ ಮತ್ತು ಊಟ ರುಚಿಸುತ್ತಿತ್ತು.

ಮುಂದುವರಿಯುವುದು....


ಡಾ. ಬಾಬು ಜಗಜೀವನರಾಮ್

(05.04.1908 – 06.07.1986)

ರುದ್ರಪ್ಪ ಹನಗವಾಡಿ

ಖ್ಯಾತ ವಿಜ್ಞಾನಿ ಸ್ವಾಮಿನಾಥನ್ ಅವರು "ಬಾಬು ಜಗಜೀವನರಾಮ್ ಅವರು ಭಾರತದ ಕೃಷಿ ಕ್ರಾಂತಿಯ ಮೂಲಪುರುಷ" ಎಂದು ಉಲ್ಲೇಖಿಸಿದ್ದಾರೆ. ಹಸಿರು ಕ್ರಾಂತಿಯ ಹರಿಕಾರ, ಯಶಸ್ವಿ ರಕ್ಷಣಾ ಸಚಿವರು, ಕಾರ್ಮಿಕ ಸಚಿವರು, ಕೃತಿ ಮತ್ತು ನೀರಾವರಿ ಸಚಿವರು, ರಾಜಕೀಯ ಮುತ್ಸದಿ, ಪ್ರಬುದ್ಧ ವಾಗ್ಮಿ ಜಗಜೀವನ ರಾಂ ಅವರು 1908ರ ಏಪ್ರಿಲ್ 5 ರಂದು ಸಂತ, ಸದೃಶ, ಶೋಭಿರಾಮ್ ಮತ್ತು ವಾಸಂತಿದೇವಿ ಅವರ ಮಗನಾಗಿ ಜನಿಸಿದರು. ಅವರ ಹುಟ್ಟೂರಾದ ಬಿಹಾರದ ಭೋಜಪುರ ಜಿಲ್ಲೆಯ ಚಂದವಾ ಹಳ್ಳಿಯಲ್ಲಿಯೇ ಪ್ರಾಥಮಿಕ ಶಿಕ್ಷಣಕ್ಕೆ 1914ರಲ್ಲಿ ಸೇರಿದರು. ಆದರೆ ಅದೇ ವರ್ಷವೇ ತಂದೆಯ ನಿಧನ ಬಾಲಕ ರಾಮನನ್ನು ದುಃಖಿತನನ್ನಾಗಿಸಿತ್ತು. ಬಡ ಕೃಷಿಕರಾಗಿದ್ದ ಶೋಭಿರಾಮರದು 6 ಮಕ್ಕಳ ದೊಡ್ಡ ಕುಟುಂಬದ ಜೊತೆಗೆ ಸ್ವಯಂ ಅನಾರೋಗ್ಯ ಪೀಡಿತರಾಗಿದ್ದರು. ಆದಾಗ್ಯೂ ಅವರು ಶಿವನಾರಾಯಣ ಪಂಥಾನುಯಾಯಿಯಾಗಿದ್ದರು. ಈ ಪಂಥವು, ಏಕದೇವೋಪಾಸನೆ, ಭಜನೆ, ಹೋಮ, ಹವನ, ಸತ್ಸಂಗ, ಭಕ್ತಿಯೇ ಮೋಕ್ಷಮಾರ್ಗ, ಮೂರ್ತಿಪೂಜೆ ವಿರೋಧಿಸುವ ಧರ್ಮಾಚರಣೆಯಾಗಿತ್ತು. ಬಿಹಾರ ರಾಜ್ಯದ ಪ್ರಮುಖ ಪಂಥವಾದ ಈ ಧರ್ಮಾಚರಣೆಯ ಸಂತರಿಗೆ ಶೋಭಿರಾಮರು ಮುಖ್ಯಸ್ಥರಾಗಿದ್ದರು.

ಬಾಲಕ ಜಗಜೀವನನನ್ನು 1914ರಲ್ಲಿ ಶಾಲೆಗೆ ಸೇರಿಸುವಂದು, ಶಿವನಾರಾಯಣ ಪಂಥಾನುಸಾರ ರೇಷ್ಮೆ ಜುಬ್ಬಾ, ಮಖಮಲ್ ಟೋಪಿ, ಹಳದಿ ಬಣ್ಣದ ಪಂಚೆ ಉಡುಪುಧಾರಿಯಾಗಿಸಿ, ಹಿರಿಯರಿಗೆ ನಮಸ್ಕರಿಸಿ, ಶಿಕ್ಷಣಕ್ಕೆ ಪಾದಾರ್ಪಣೆ ಮಾಡಿಸಲಾಗಿತ್ತು. ಅಲ್ಲಿನ ಮೂವರು ಶಿಕ್ಷಕರು, ಬಡ ದಲಿತ ಜೀವನರಾಮನ ಶಿಕ್ಷಣದಲ್ಲಿ ಅತ್ಯಂತ ಪ್ರಭಾವ ಬೀರಿದವರಾಗಿದ್ದಾರೆ.




ತಾರತಮ್ಯವಿಲ್ಲದೆ, ನಿರ್ವಾಜ್ಯ ಪ್ರೇಮದಿಂದ, ಅವನಿಗೆ ವಿದ್ಯೆ ಕಲಿಸಿದ್ದರು. ತಂದೆಯ ಅಕಾಲಿಕ ಮರಣ, ರಾಮನ ಶಿಕ್ಷಣಕ್ಕೆ ಅಡಚಣೆಯನ್ನೇ ಉಂಟು ಮಾಡಿತು. ಬಾಲಕನ ಓದುವ ಆಸಕ್ತಿ, ಹಿರಿಯಣ್ಣ ಸಂತಲಾಲ ಮತ್ತು ತಾಯಿಗೆ ಅವನನ್ನು ಹೇಗಾದರೂ ಮಾಡಿ ಓದಿಸಲೇಬೇಕೆಂಬ ಛಲಕ್ಕೆ ಮತ್ತು ವ್ರತಕ್ಕೆ ಒಗ್ಗಿಸಿತ್ತು.


ಅಂದಿನ ಸಾಂಪ್ರದಾಯಿಕ ಸಮಾಜ ವ್ಯವಸ್ಥೆಯಂತೆ ಬಾಲಕ ಜಗಜೀವನ್‌ಗೆ ಎಂಟು ವರ್ಷವಿದ್ಯಾಗಲೇ ಇಂದ್ರಾಣಿ ದೇವಿಯೊಂದಿಗೆ ವಿವಾಹ ಮಾಡಿದ್ದರು. ಆದರೆ ಇದು ಅವರ ವಿದ್ಯಾಭ್ಯಾಸಕ್ಕೆ ಅಡಚಣೆಯಾಗಿರಲಿಲ್ಲ. 1930ರಲ್ಲಿ ಅಗರ್‌ವಾಲ್ ಮಾಧ್ಯಮಿಕ ಶಾಲೆಗೆ ಸೇರ್ಪಡೆಯಾದ ರಾಮ್, ಶಾಲೆಯ ಎರಡನೇ ಪ್ರತಿಭಾನ್ವಿತ ವಿದ್ಯಾರ್ಥಿಯಾಗಿ ಹೊರಹೊಮ್ಮಿದ್ದರು. ಶಾಲೆಯಲ್ಲಿ ಅಂದಿನ ಪ್ರಸಿದ್ಧ ಪುಸ್ತಕಗಳಾದ ಚಂದ್ರಕಾಂತ್ ಸಂತಾಲೀಸ, ಪ್ರೇಮಸಾಗರ್, ಭೈತಾಲ್, ಸುಖಸಾಗರ್, ರಾಮಾಯಣ ಕೃತಿಗಳನ್ನು ಓದಲಾರಂಭಿಸಿದ್ದರು. ಅದಾಗಲೇ ಭಾರತದಲ್ಲಿ ಸ್ವಾತಂತ್ರ್ಯ ಹೋರಾಟ ತೀವ್ರತೆಯನ್ನು ಪಡೆಯುತ್ತಿತ್ತು. ಮಹಾತ್ಮಾಜೀ ಅವರ ಅಸಹಕಾರ ಚಳುವಳಿ, ಉಪವಾಸ ಸತ್ಯಾಗ್ರಹಗಳು ವ್ಯಾಪಕವಾಗಿ ಜನರನ್ನು ತಲುಪುತ್ತಿತ್ತು. ಗಾಂಧೀಜಿ ಅವರ ಹರಿಜನ, ಯಂಗ್ ಇಂಡಿಯಾ ಪತ್ರಿಕೆಗಳನ್ನು ಓದುತ್ತಿದ್ದ ಜಗಜೀವನನಿಗೆ ಗಾಂಧಿ ಹಾಕುತ್ತಿದ್ದ ಟೋಪಿಯು ಆಕರ್ಷಿಸಿತ್ತು. ಇದರಿಂದಾಗಿ ಗಾಂಧಿ ಟೋಪಿ ಧರಿಸಿ ಶಾಲೆಗೆ ಹೋಗಲಾರಂಭಿಸಿದರು.



ಕರ್ನಾಟಕ ರಾಜ್ಯದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾದ ಶ್ರೀ ಸುರೇಶ್ ಕುಮಾರ್ ಅವರು ಗಾಂಧೀ ಭವನಕ್ಕೆ ದಿ.11–04–2021 ರಂದು ಆಗಮಿಸಿ ಶಾಲೆಗಳಿಗೆ ಡಿಟಟಲ್ ತಂತ್ರಜ್ಞಾನದ ಮೂಲಕ ಪಠ್ಯ ಚಟುವಟಿಕೆಯನ್ನು ತಲುಪಿಸುವ ಕುರಿತು ಚರ್ಚಿಸಿದ್ದರು ಈ ಸಂಧರ್ಭದಲ್ಲಿ ಸಕಾಲ ಮಿಷನ್‌ನ ನಿರ್ದೇಶಕರಾದ ಡಾ: ಬಿ.ಆರ್ ಮಮತಾ, ಕ.ಗಾಂ.ಸ್ಮಾ.ನಿಧಿ ಅಧ್ಯಕ್ಷರಾದ ನಾಡೋಜ ಡಾ: ವೂಡೇ. ಪಿ ಕೃಷ್ಣ ಅವರಿದ್ದರು.



ಡಾ. ಹೆಚ್.ಕೆ ಪಾಟೀಲ್, ವಿಧಾನಸಭಾ ಸದಸ್ಯರು, ಮಾಜಿ ಪಂಚಾಯುತ್ ರಾಜ್ ಮತ್ತು ನೀರಾವರಿ ಸಚಿವರು, ಇವರಿಗೆ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ಕಾನೂನು, ಸಾರ್ವಜನಿಕ ನೀತಿ ಹಾಗೂ ಸಮಾಜಸೇವೆಯನ್ನು ಪರಿಗಣಿಸಿ ದಿ. 10.04.2021ರಂದು ಡಾಕ್ಟರ್ ಆಫ್ ಲಾಸ್ ಗೌರವ ಡಾಕ್ಟೋರೆಟ್ ಪ್ರಶಸ್ತಿ ಪ್ರಧಾನ ಮಾಡಿರುವ ಬಗ್ಗೆ ಗಾಂಧಿ ಭವನವು ಅಭಿನಂದನೆಗಳನ್ನು ಸಲ್ಲಿಸುತ್ತದೆ.



ಕನ್ನಡ... ಕನ್ನಡಿಗ... ಕರ್ನಾಟಕ : ಎಂ. ಗೋಪಾಲಕೃಷ್ಣ ಅಡಿಗ

(18.02.1918 – 04.11.1992)

ಡಾ. ರಾಮಲಿಂಗೇಶ್ವರ (ಸಿಸಿರಾ)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಕರ್ನಾಟಕ ಏಕೀಕರಣವಾಗಿ 2020ನೇ ನವೆಂಬರ್ 1ನೆಯ ತಾರೀಖಿಗೆ ಅರವತ್ತನಾಲ್ಕು ವರ್ಷಗಳಾಗುತ್ತದೆ. ಕರ್ನಾಟಕದ ಏಕೀಕರಣ ಹೋರಾಟವು ಕಹಿ-ಸಿಹಿ ಘಟನೆಗಳ ಸ್ಮರಣಲೋಕವನ್ನೇ ತೆರೆದಿಡುತ್ತವೆ. ಈ ಸ್ತರದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಸಾಹಿತ್ಯ, ಸಂಸ್ಕೃತಿ, ಸಮಾಜ, ಶಿಕ್ಷಣ, ರಾಜಕಾರಣದ ಮೂಲಕ ಕನ್ನಡ ನಾಡು ನುಡಿ ಕಟ್ಟಿದ ಮಹಾನ್ ಚೇತನಗಳನ್ನು ಗಾಂಧಿ ಭವನ ಸ್ಮರಿಸುತ್ತದೆ.

ಕನ್ನಡ ಸಾಹಿತ್ಯದಲ್ಲಿ ನವ್ಯತೆಗೆ ನಾಂದಿ ಹಾಡಿದ ಗೋಪಾಲಕೃಷ್ಣ ಅಡಿಗರು ಉಡುಪಿ ಜಿಲ್ಲೆಯ ಕುಂದಾಪುರ ಮೊಗೇರಿ ಎಂಬ ಗ್ರಾಮದಲ್ಲಿ ಜನಿಸಿದರು. ಅಡಿಗರ ತಂದೆ ಸಂಸ್ಕೃತದಲ್ಲಿ ಶ್ಲೋಕಗಳನ್ನೂ, ಕನ್ನಡದಲ್ಲಿ ದೇಶಭಕ್ತಿಯ ಗೀತೆಗಳನ್ನೂ ರಚಿಸುತ್ತಿದ್ದರು. ಇವರ ಸೋದರತ್ತೆ ಪ್ರತಿ ರಾತ್ರಿಯೂ ಗದುಗಿನ ಭಾರತ, ಜೈಮಿನಿ ಭಾರತಗಳನ್ನು ರಾಗವಾಗಿ ಹಾಡುತ್ತಿದ್ದರು. ದಕ್ಷಿಣಕನ್ನಡ ಜಿಲ್ಲೆ ಯಕ್ಷಗಾನದ ತವರೂರು. ಚಿಕ್ಕಂದಿನಲ್ಲಿ ಯಕ್ಷಗಾನ ಪ್ರಸಂಗಗಳು ಸುತ್ತಮುತ್ತ ಎಲ್ಲಿ ನಡೆದರೂ ಅಡಿಗರು ತಪ್ಪಿಸಿಕೊಳ್ಳದೆ ನೋಡುತ್ತಿದ್ದರಂತೆ. "ಹದಿಮೂರನೇ ವಯಸ್ಸಿನಲ್ಲೇ ಪದ್ಯ, ಭಾಮಿನಿ ಷಟ್ಪದಿ, ವಾರ್ಧಕ ಷಟ್ಪದಿ, ಕಂದ ಪದ್ಯಗಳನ್ನು ರಚಿಸುತ್ತಿದ್ದೆ" ಎಂದು ಅವರೇ ಹೇಳಿದ್ದಾರೆ. ಕುಂದಾಪುರದ ವಾತಾವರಣ ಇವರಿಗೆ ಸಾಹಿತ್ಯ ರಚಿಸಲು ಪ್ರೇರಣೆ ನೀಡಿತು. ಆಗ ಇಡೀ ದೇಶವೇ ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯ ಹೋರಾಟದ ಹಾದಿಯಲ್ಲಿ ಸಾಗಿತ್ತು. ಅಡಿಗರೂ ಹುಮ್ಮಸ್ಸಿನಿಂದ ಹೋರಾಟದಲ್ಲಿ ಭಾಗಿಯಾಗಿದ್ದರು. ಹೆಂಡದಂಗಡಿಯ ಮುಂದೆ 'ಪಿಕೆಟಿಂಗ್' ಮಾಡಿದ್ದರು. ದೇಶಭಕ್ತಿಯ ಉತ್ಸಾಹ, ಉದ್ರೇಕಗಳು ಅವರ ಕಾವ್ಯ ರಚನೆಗೆ ಪೂರಕವಾದವು. ಅವರ ಕೆಲವು ಕವನಗಳು ಬೆಂಗಳೂರಿನ 'ಸುಬೋಧ', ಮಂಗಳೂರಿನ 'ಬಡವರ ಬಂಧು', ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾದವು. ಎಸ್.ಎಸ್.ಎಲ್.ಸಿ ನಂತರ ಅಡಿಗರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್‌ಗೆ ಸೇರಿದರು. ಈ ಅವಧಿಯಲ್ಲಿ ಅವರಿಗೆ ಬಿ.ಎಚ್. ಶ್ರೀಧರ್, ಹೆಚ್ ವೈ. ಶಾರದಾಪ್ರಸಾದ್, ಚದುರಂಗ, ಟಿ.ಎಸ್.ಸಂಜೀವ ರಾವ್. ಎಂ.ಶಂಕರ್, ಕೆ.ನರಸಿಂಹಮೂರ್ತಿ ಮುಂತಾದವರ ಒಡನಾಟ ಲಭ್ಯವಾಯಿತು. ಅವರ 'ಭಾವತರಂಗ' ಸಂಕಲನದ ಹೆಚ್ಚಿನ ಕವನಗಳು ಈ ಅವಧಿಯಲ್ಲಿ ರಚಿತವಾದವು. ಅವುಗಳಲ್ಲೊಂದಾದ 'ಒಳತೋಟಿ' ಎಂಬ ಕವನಕ್ಕೆ ಬಿ.ಎಂ.ಶ್ರೀ ರಜತ ಮಹೋತ್ಸವ ಸ್ಪರ್ಧೆಯ ಪ್ರಥಮ ಬಹುಮಾನದ ಸುವರ್ಣ ಪದಕ ದೊರಕಿತ್ತು. ಅಡಿಗರು ಮೈಸೂರು ಶಾರದಾವಿಲಾಸ ಕಾಲೇಜು, ಸೆಂಟ್ ಫಿಲೋಮಿನಾ ಕಾಲೇಜು ಹಾಗೂ ಕುಮಟಾದ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದರು. ನಂತರ ಉಡುಪಿಯ ಪೂರ್ಣಪ್ರಜ್ಞ ಕಾಲೇಜು, ಸಾಗರದ ಲಾಲ್ ಬಹದ್ದೂರ್ ಶಾಸ್ತ್ರಿ ಕಾಲೇಜುಗಳಲ್ಲಿ ಪ್ರಾಂಶುಪಾಲರಾಗಿ ಕೆಲಸ ಮಾಡಿದರು. ಹಾಗೂ ನ್ಯಾಷನಲ್ ಬುಕ್ ಟ್ರಸ್ಟ್‌ನ ನಿರ್ದೇಶಕರಾಗಿ, ಸಿಮ್ಲಾದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡೀಸ್‌ನ ರಿಸರ್ಚ್ ಫೆಲೋ ಆಗಿ ಕೆಲಸ ಮಾಡಿದರು. ಅಡಿಗರು ಸಾಗರದಲ್ಲಿದ್ದಾಗ ಸಾಹಿತಿಗಳನ್ನು ಕಾಲೇಜಿಗೆ ಆಹ್ವಾನಿಸಿ ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಸುತ್ತಿದ್ದರು. ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಓದಲು ಪ್ರೇರೇಪಿಸುತ್ತಿದ್ದರು. ಅವರು ಕಾಲೇಜಿನ ಉಪನ್ಯಾಸಕರನ್ನು ಗೆಳೆಯರಂತೆಯೇ ಸ್ವೀಕರಿಸಿದ್ದರು. ಕನ್ನಡ ಕಾವ್ಯಕ್ಕೆ ನವ್ಯತೆಯ ಹೊಸ ಆಯಾಮ ನೀಡಿದರು. ನವ್ಯ ಕಾವ್ಯದ ಪ್ರವರ್ತಕರಾದ ಇವರು ಕಥೆ, ಕಾದಂಬರಿ, ನಾಟಕ, ವಿಮರ್ಶೆ ಮುಂತಾದ ಇತರ ಸಾಹಿತ್ಯ ಪ್ರಕಾರಗಳಲ್ಲೂ ನಾವಿನ್ಯತೆಗೆ ನಾಂದಿ ಹಾಡಿದರು. ಆವಿಷ್ಕರಿಸಿದರು. ಅಡಿಗರು ಕನ್ನಡ ವಿಮರ್ಶೆಗೆ ಪ್ರಬುದ್ಧತೆಯನ್ನು ತಂದರು. 'ಸಾಕ್ಷಿ' ಎಂಬ ಮಾಸಿಕ ಸಂಚಿಕೆಯನ್ನು ಸುಮಾರು ಇಪ್ಪತ್ತು ವರ್ಷ ಕಾಲ ನಡೆಸಿ, ಹೊಸ ಲೇಖಕರನ್ನು ಪ್ರೋತ್ಸಾಹಿಸಿದರು. ಅವರ ಎಲ್ಲಾ ವೈಚಾರಿಕ ಲೇಖನಗಳೂ 'ಸಮಗ್ರ ಗದ್ಯ'(ಸಾಕ್ಷಿಪ್ರಕಾಶನ, 1977) ಸಂಪುಟವೊಂದರಲ್ಲಿ ಪ್ರಕಟವಾಗಿದೆ. ಇವರ ಹೊಸ ಮಾರ್ಗದಿಂದ ಪ್ರಭಾವಿತರಾದ ಹೊಸ ಪೀಳಿಗೆಯ ಯು.ಆರ್.ಅನಂತಮೂರ್ತಿ, ಎ.ಕೆ. ರಾಮಾನುಜನ್, ರಾಮಚಂದ್ರ ಶರ್ಮಾ, ನಿಸಾರ್‌ಅಹಮದ್, ಲಂಕೇಶ್, ತೇಜಸ್ವಿ, ಲಕ್ಷ್ಮೀನಾರಾಯಣ ಭಟ್ಟ, ಕೆ.ವಿ.ತಿರುಮಲೇಶ್, ಎಚ್.ಎಂ. ಚೆನ್ನಯ್ಯ, ಗಿರಡ್ಡಿ ಗೋವಿಂದರಾಜ, ಸಿದ್ಧಲಿಂಗ ಪಟ್ಟಣಶೆಟ್ಟಿ ಚಂದ್ರಶೇಖರ ಪಾಟೀಲ ಎಂ.ಎನ್. ವ್ಯಾಸರಾವ್, ಜಯಂತ ಕಾಯ್ಕಿಣಿ, ಕ.ವೆಂ.ರಾಜಗೋಪಾಲ್, ಮಾಧವ ಕುಲಕರ್ಣಿ, ಜಿ.ಎಚ್.ನಾಯಕ್, ಶ್ರೀಕೃಷ್ಣ ಆಲನಹಳ್ಳಿ ನಾ.ಮೊಗಸಾಲೆ ಇನ್ನೂ ಮುಂತಾದ ಲೇಖಕರು ನವ್ಯಪ್ರಜ್ಞೆಯ ಸಾಹಿತ್ಯವನ್ನು ರಚಿಸಿದರು. 'ಭಾವತರಂಗ', 'ಕಟ್ಟುವೆವು ನಾವು', 'ನಡೆದು ಬಂದ ದಾರಿ', 'ಚಂಡೆಮದ್ದಳೆ', 'ಭೂಮಿಗೀತ', 'ವರ್ಧಮಾನ', 'ಇದನ್ನು ಬಯಸಿರಲಿಲ್ಲ', 'ಮೂಲಕ ಮಹಾಶಯರು', 'ಬತ್ತಲಾರದ ಗಂಗೆ', 'ಚಿಂತಾಮಣಿಯಲ್ಲಿ ಕಂಡ ಮುಖ', 'ಸುವರ್ಣ ಪುತ್ಥಳಿ' ಇವರ ಕವನ ಸಂಕಲನಗಳಾಗಿವೆ. 'ಅನಾಥೆ', 'ಆಕಾಶದೀಪ' ಎಂಬ ಎರಡು ಕಾದಂಬರಿಗಳನ್ನೂ ರಚಿಸಿದ್ದಾರೆ.



ಇವರ ಸಾಹಿತ್ಯಸೇವೆಗೆ ರಾಜ್ಯ ಸಾಹಿತ್ಯ ಅಕಾಡೆಮಿ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇರಳದ ಪ್ರತಿಷ್ಠಿತ 'ಕುಮಾರ್ ಸಮ್ಮಾನ್' ಪ್ರಶಸ್ತಿ, 'ಕಬೀರ್ ಸನ್ಮಾನ್' ಬ್ಯಾಂಕಾಕ್ ನಗರದ ಜಾಗತಿಕ ಕವಿ ಸಮ್ಮೇಳನದಲ್ಲಿ ವರ್ಲ್ಡ್ ಅಕಾಡೆಮಿ ಆಫ್ ಆರ್ಟ್ ಅಂಡ್ ಕಲ್ಚರ್' ಸಂಸ್ಥೆಯಿಂದ ಡಾಕ್ಟರ್ ಆಫ್ ಲಿಟರೇಚರ್' ಪ್ರಶಸ್ತಿ ಗೌರವಗಳು ಸಂದಿವೆ. ಕರ್ನಾಟಕ ಸರ್ಕಾರ ಇವರ ಜನ್ಮ ಶತಮಾನೋತ್ಸವವನ್ನು ಮಾರ್ಚ್ 12–13, 2021ರಲ್ಲಿ ಆಚರಿಸಿದೆ.

ಪಂಡಿತ್ ರವಿಶಂಕರ್ (07.04.1920 – 11.12.2012)

– ಡಾ. ಗಣನಾಥಶೆಟ್ಟಿ ಎಕ್ಕಾರು

ಭಾರತದ ಸುಪ್ರಸಿದ್ಧ ಸಿತಾರ್ ವಾದಕ ಪಂಡಿತ್ ರವಿಶಂಕರ್ ಅವರು ವಾರಣಾಸಿಯಲ್ಲಿ ಜನಿಸಿದರು. ಮೈಹರ್ ಘರಾಣದ ಸೃಜನಕಾರ ಬಾಬಾ ಅಲ್ಲಾವುದ್ದೀನ್ ಖಾನ್ ಅವರ ಪರಮ ಶಿಷ್ಯರಾಗಿದ್ದರು. ಪೂರ್ವ ಪಶ್ಚಿಮಗಳೆರಡನ್ನೂ ಸಂಗೀತದಲ್ಲಿ ಸಮ್ಮಿಲನಗೊಳಿಸಿದ ಪಂಡಿತ್ ರವಿಶಂಕರ್ ಅವರು ಸಂಗೀತ ಸಂಯೋಜಕರಾಗಿ, ಶಿಕ್ಷಕರಾಗಿ ಮತ್ತು ಬರಹಗಾರರಾಗಿ ಸಂಗೀತದ ರಾಯಭಾರಿಯಾಗಿ ವಿಶ್ವವ್ಯಾಪಿಯಾದರು. ಹಿಂದಾಸ್ಥಾನಿ ಸಂಗೀತವನ್ನು ಪಾಶ್ಚಾತ್ಯರಿಗೆ ಪ್ರಿಯವಾಗಿಸುವಲ್ಲಿ ಅವರ ಪ್ರಯತ್ನ ಮಹತ್ವದ್ದಾಗಿದೆ. ರವಿಶಂಕರ್ ಅವರು ಜಗತ್ಪ್ರಸಿದ್ಧ ವಾದ್ಯಗೋಷ್ಠಿಗಳಲ್ಲಿ ಯೆಹೂದಿ ಮೆನನ್‌ರ ವಯೊಲಿನ್ ನಾದದೊಂದಿಗೆ ಸಿತಾರ್ ನಾದಸಂಯೋಜನೆ, ಪ್ರಸಿದ್ಧ ವೇಣುವಾದಕ ಜೀನ್ ಪಯರ್ ರಾಮ್‌ಪಾಲ್‌ಗಾಗಿ ನೀಡಿದ ಸಂಗೀತ, ಶಾಕುಚಿ ಮತ್ತು ಮುಸುಮಿ ಮಿಯಾಷಿತ ಸಂಗೀತ ಪ್ರಕಾರಗಳ ಗುರುವರ್ಯರೆನಿಸಿರುವ ಹಾಸನ್ ಯಮಮೊಟೋಗಾಗಿ ಸಂಗೀತ ಸಂಯೋಜನೆ ಮತ್ತು ಫಿಲಿಪ್ ಗ್ಲಾಸ್‌ಗಾಗಿ ಪ್ಯಾಸ್ಸೇಜಸ್ ಸೃಜನೆಗಳು ಸೇರಿವೆ. ಜಗತ್ಪ್ರಸಿದ್ಧ ಜಾರ್ಜ್ ಹ್ಯಾರಿಸನ್ ಅವರು ರವಿಶಂಕರ್ ಕುಟುಂಬದ ಗೆಳೆಯರು. ಮತ್ತು ಭಾರತೀಯ ಹಬ್ಬಗಳು ಎಂಬ ಎರಡು ಜನಪ್ರಿಯ ಆಲ್ಬಂಗಳನ್ನು ರವಿಶಂಕರ್ ಅವರ ನಿರ್ದೇಶನದಲ್ಲಿ ನಿರ್ಮಿಸಿ ತಾವೂ ಪಾಲ್ಗೊಂಡಿದ್ದರು. ಅರವತ್ತರ ದಶಕದಲ್ಲಿಯೇ ರವಿಶಂಕರ್ ಅವರು 'ಮೋಂಟೆರೀ ಪಾಪ್ ಫೆಸ್ಟಿವಲ್', 'ಕನ್ಸರ್ಟ್ ಫಾರ್ ಬಾಂಗ್ಲಾದೇಶ್' ಮತ್ತು 'ದಿ ವುಡ್ ಸ್ಟಾಕ್ ಫೆಸ್ಟಿವಲ್' ಎಂಬ ಮೂರು ಪ್ರಸಿದ್ಧ ಕಾರ್ಯಕ್ರಮಗಳನ್ನು ನೀಡಿದ್ದರು.

ರವಿಶಂಕರ್ ಅವರು ಭಾರತ, ಕೆನಡಾ, ಯೂರೋಪ್ ಮತ್ತು ಅಮೆರಿಕಾ ದೇಶಗಳಲ್ಲಿನ ಬ್ಯಾಲೆಟ್, ಪ್ರಸಿದ್ಧ ರಂಗ ಪ್ರದರ್ಶನಗಳು ಮತ್ತು ಚಲನಚಿತ್ರಗಳಿಗೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಇವರು ಚಿತ್ರಸಂಗೀತ ಸಂಯೋಜನೆ ಮಾಡಿದ ಪ್ರಮುಖ ಚಲನಚಿತ್ರಗಳಲ್ಲಿ ಚಾರ್ಲಿ, ಗಾಂಧೀ, ಅಪು ಟ್ರಿಯಾಲಜಿ ಸೇರಿವೆ. ರವಿಶಂಕರ್ ಅವರು ಅಮೇರಿಕನ್ ಆರ್ಟ್ಸ್ ಅಂಡ್ ಲೆಟರ್ಸ್ ಅಕಾಡೆಮಿಯ ಗೌರವಾನ್ವಿತ ಸದಸ್ಯರಾಗಿದ್ದು, ಯುನೈಟೆಡ್ ನೇಷನ್ಸ್ ಇಂಟರ್ ನ್ಯಾಷನಲ್ ರೋಸ್ಟರಮ್ ಕಂಪೋಸರ್ಸ್ ಗಣ್ಯರ ಪಟ್ಟಿಯಲ್ಲಿ ಪ್ರಮುಖರಾಗಿದ್ದಾರೆ. ಭಾರತದ ಪದ್ಮಭೂಷಣ, ಪದ್ಮವಿಭೂಷಣ, ಭಾರತರತ್ನ, ಕಾಳಿದಾಸ ಸಮ್ಮಾನ್, ದೇಶಿಕೋತ್ತಮ ಪ್ರಶಸ್ತಿಗಳಲ್ಲದೆ, ಅಂತರರಾಷ್ಟ್ರೀಯವಾಗಿ ಮ್ಯೂಸಿಕ್ ಕೌನ್ಸಿಲ್ ಯುನೆಸ್ಕೋ ಪ್ರಶಸ್ತಿ, ಮ್ಯಾಗ್ಸೆಸೆ ಪ್ರಶಸ್ತಿ, ಮೂರು ಗ್ರಾಮ್ಮೀ ಪ್ರಶಸ್ತಿ, ಫುಕೋಕಾ ಪ್ರಶಸ್ತಿ, ಪೋಲಾರ್ ಮ್ಯೂಸಿಕ್ ಪ್ರಶಸ್ತಿ, ಕ್ರಿಸ್ಟಲ್ ಪ್ರಶಸ್ತಿ ಮತ್ತು ಇವೆಲ್ಲವುಗಳನ್ನೂ ಮೀರಿದ 'ವಿಶ್ವ ರಾಯಭಾರಿ' ಪ್ರಶಸ್ತಿಗಳಿಂದ ಪುರಸ್ಕೃತರಾಗಿದ್ದಾರೆ. ಪಾಕಿಸ್ತಾನದೊಂದಿಗೆ ನಡೆದ ಬಾಂಗ್ಲವಿಮೋಚನಾ ಹೋರಾಟದ ಸಂದರ್ಭದಲ್ಲಿ ಬಾಂಗ್ಲಾದೇಶದ ನಿರಾಶ್ರಿತರಿಗಾಗಿ ಜಾರ್ಜ್ ಹ್ಯಾರಿಸನ್‌ರೊಂದಿಗೆ ವಿಶ್ವಮಟ್ಟದ ಸಂಗೀತ ಕಾರ್ಯಕ್ರಮ ನೀಡಿ ಹಣ ಸಂಗ್ರಹಿಸಿಕೊಟ್ಟಿದ್ದಾರೆ. ಇವರ ಈ ನಡೆ ಮುಂದೆ ವಿಶ್ವದೆಲ್ಲೆಡೆಯ ಹಲವು ರೀತಿಯ ಸಹಾಯಾರ್ಥ ಪ್ರದರ್ಶನಗಳಿಗೆ ನಾಂದಿ ಹಾಡಿತು. 1987ರಲ್ಲಿನ "ತನುಮನ" ವೈಯಕ್ತಿಕ ಸಂಗೀತಮುದ್ರಿಕೆ, ರವಿಶಂಕರ್ ಅವರನ್ನು "ನ್ಯೂ ಏಜ್" ಸಂಗೀತಗಾರರೆಂಬ ವಿಶಿಷ್ಟ ಸಂಗೀತ ಪರಂಪರೆಗೆ ಸೇರ್ಪಡೆಗೊಳಿಸಿತ್ತು. ಈ ಮುದ್ರಿಕೆಗಾಗಿ ಶಾಸ್ತ್ರೀಯ ವಾದ್ಯಗಳು ಮತ್ತು ಆಧುನಿಕ ಎಲೆಕ್ಟ್ರಾನಿಕ್ಸ್ ತಂತ್ರಜ್ಞಾನವನ್ನು ರವಿಶಂಕರ್ ಸಂಗೀತದಲ್ಲಿ ಅಳವಡಿಸಿಕೊಂಡರು. ವಿಶ್ವದೆಲ್ಲೆಡೆ ಪಂಡಿತ್ ರವಿಶಂಕರ್ ಅವರು ಗಳಿಸಿರುವ ಕೀರ್ತಿ, ಗೌರವ ಮತ್ತು ಶಿಷ್ಯವೃಂದ ಅಪಾರವಾದದ್ದು. ಯೆಹೂದಿ ಮೆನನ್ ಅವರು "ರವಿಶಂಕರ್ ನನಗೆ ಅತ್ಯಂತ ಮಹತ್ವದ ಬಳುವಳಿ ನೀಡಿದ್ದು, ಅದು ನನ್ನ ಸಂಗೀತಕ್ಕೆ ಹೊಸ ಆಯಾಮ ನೀಡಿದೆ. ಅವರೊಬ್ಬ ಜೀನಿಯಸ್, ಮಾನವತಾವಾದಿ. ಅವರನ್ನು ಮೊಸಾರ್ಟ್ಸ್ ಅಂತಹವರಿಗೆ ಮಾತ್ರ ಹೋಲಿಸಲು ಸಾಧ್ಯ" ಎಂದಿದ್ದಾರೆ. ಜಾರ್ಜ್ ಹ್ಯಾರಿಸನ್ "ರವಿಶಂಕರ್ ಅವರು ವಿಶ್ವ ಸಂಗೀತದ ಗಾಡ್ ಫಾದರ್" ಎಂದಿದ್ದಾರೆ. ಇವರು ಜಗತ್ತಿನ ವಿವಿಧ ವಿಶ್ವವಿದ್ಯಾಲಯಗಳ 14 ಗೌರವ ಡಾಕ್ಟರೇಟ್‌ಗಳಿಗೆ ಭಾಜನರಾಗಿದ್ದಾರೆ.



ಇತಿಹಾಸದಲ್ಲಿ ಈ ದಿನ ಮಂಗಲ ಪಾಂಡೇಗೆ ಗಲ್ಲು

ಬ್ರಿಟಿಷ್ ಭಾರತದ ಯೋಧನಾಗಿದ್ದ ಮಂಗಲ ಪಾಂಡೆಯನ್ನು ಏಪ್ರಿಲ್ 8 1857ರಲ್ಲಿ ಗಲ್ಲಿಗೇರಿಸಲಾಗಿತ್ತು.. ಈತ 1849ರಲ್ಲಿ ಬೆಂಗಾಲ ಸೈನ್ಯ ಸೇರಿದ್ದನು. ಸಿಪಾಯಿ ದಂಗೆಯ ಪ್ರಮುಖ ವ್ಯಕ್ತಿಯಾಗಿದ್ದ ಈತ ಇಬ್ಬರು ಬ್ರಿಟಿಷ್ ಸೈನಿಕರ ವಿರುದ್ಧ ಹೋರಾಟ ನಡೆಸಿದ್ದನು. ಪರಿಣಾಮ ಮಂಗಲ ಪಾಂಡೆಯನ್ನು ಗಲ್ಲಿಗೇರಿಸಲಾಗಿತ್ತು. ಮಂಗಲ ಪಾಂಡೆ ಉತ್ತರ ಪ್ರದೇಶದಲ್ಲಿ ಜುಲೈ 19, 1827ರಲ್ಲಿ ಜನಿಸಿದ್ದನು. ಇವನು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಸೇನೆ ಸೇರಿದ್ದನು. ಏಪ್ರಿಲ್ 8 ರಂದು ಈತನ ಶೌರ್ಯ, ತ್ಯಾಗ ಸಾಹಸವನ್ನು ಮತ್ತು ದೇಶಪ್ರೇಮವನ್ನು ಸ್ಮರಿಸಲಾಗುತ್ತದೆ.

ಸೌಜನ್ಯ : ಕನ್ನಡ ಪ್ರಭ ದಿ.08.04.2021

ಸಂಗ್ರಹ : ಎಸ್.ಎಂ. ಶ್ಯಾಮಲ, ಅಧ್ಯಾಪಕರು (ನಿ)



ಹೆಮ್ಮೆಯ ಕನ್ನಡಿಗ : ವರನಟ ಡಾ. ರಾಜ್‌ಕುಮಾರ್

(ಏಪ್ರಿಲ್ 24, 1929 – ಏಪ್ರಿಲ್ 12, 2006)

ಮಹೇಶ್

ಕನ್ನಡ ನಾಡು ನುಡಿಯನ್ನು ವಿಶ್ವವಿಖ್ಯಾತಗೊಳಿಸಿದ ದಿಗ್ಗಜರುಗಳ ಕಿರು ಪರಿಚಯವೇ ಈ ಅಂಕಣ

ಕನ್ನಡಕ್ಕೊಬ್ಬನೇ ರಾಜಕುಮಾರ

ಭಾರತೀಯ ಚಿತ್ರರಂಗದ ಸರಳ–ಸಜ್ಜನ, ಮೇರು ಕಲಾವಿದ, ಕನ್ನಡಮ್ಮನ ವರಪುತ್ರ ಡಾ. ರಾಜಕುಮಾರ ಅವರಾಗಿದ್ದಾರೆ. ಕನ್ನಡ ರಂಗಭೂಮಿಯ ಈ ಅದ್ಭುತ ಪ್ರತಿಭೆ ಸಿಂಗನಲ್ಲೂರು ಪುಟ್ಟಸ್ವಾಮಯ್ಯ ಮತ್ತು ಲಕ್ಷ್ಮಮ್ಮ ದಂಪತಿಗಳ ಹಿರಿಯ ಮಗನಾಗಿ, ಚಾಮರಾಜನಗರ ಜಿಲ್ಲೆಯ ದೊಡ್ಡ ಗಾಜನೂರಿನಲ್ಲಿ ಜನಿಸಿದರು.

ಕರ್ನಾಟಕದ ಜನಪ್ರಿಯ ಕಲಾವಿದರಾದ ರಾಜಕುಮಾರ್ ಅವರು ಕೇವಲ ನಟರಾಗಿ ಉಳಿಯದೆ ಹಿನ್ನೆಲೆ ಗಾಯನ, ರಂಗಭೂಮಿ, ಸಾಮಾಜಿಕ ಪರಿವರ್ತಕರಾಗಿ ಸಹೃದಯಿಯಾಗಿ ಕನ್ನಡ ನಾಡಿನ ಕಲಾಸೇವೆಯಲ್ಲಿ ತೊಡಗಿದವರಾಗಿದ್ದಾರೆ. ಸುಮಾರು ಐದು ದಶಕಗಳಲ್ಲಿ ಡಾ.ರಾಜ್‌ಕುಮಾರ್ 200ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿರುವ ಏಕೈಕ ಕಲಾವಿದರಾಗಿದ್ದಾರೆ. ಬೇಡರ ಕಣ್ಣಪ್ಪ ಚಿತ್ರದಲ್ಲಿ ನಾಯಕನಾಗಿ ನಟಿಸುವ ಮುನ್ನ ಡಾ. ರಾಜ್ ಅವರ ಹೆಸರು ಮುತ್ತುರಾಜ ಎಂದಿತ್ತು. ತಂದೆ ಸಿಂಗಾನಲ್ಲೂರು ಪುಟ್ಟಸ್ವಾಮಯ್ಯ ಅವರು (1930–1950) ಆ ಕಾಲದ ಕನ್ನಡ ರಂಗಭೂಮಿಯ ಪ್ರಖ್ಯಾತ ಕಲಾವಿದರು, ರೌದ್ರಪಾತ್ರಗಳಿಗೆ ಹೆಸರಾಗಿದ್ದ ಪುಟ್ಟಸ್ವಾಮಯ್ಯ ಅವರು ಗುಬ್ಬಿ ಕಂಪನಿಯ ಕಲಾವಿದರಾಗಿದ್ದರು. ಬಡತನದಿಂದಾಗಿ ಮುತ್ತುರಾಜ್ ಅವರ ವಿದ್ಯಾಭ್ಯಾಸ ನಾಲ್ಕನೆ ತರಗತಿಗೇ ನಿಂತಿತ್ತು. ಗುಬ್ಬಿ ಕಂಪನಿಯೇ ವಿಶ್ವವಿದ್ಯಾಲಯವಾಯಿತು. ತಂದೆಯೇ ಗುರುವಾದರು. ನಾಟಕಗಳಲ್ಲಿ ಸಣ್ಣ ಪುಟ್ಟ ಪಾತ್ರ ನಿರ್ವಹಿಸುತ್ತಿದ್ದ ಮುತ್ತುಗೆ ತಂದೆಯ ಪ್ರಭಾವವೇ ಅಪಾರ. ಫಾಲ್ಕೆ ಪ್ರಶಸ್ತಿ ಪ್ರಕಟವಾದಾಗ ಅವರು ತಂದೆ ಹೇಳಿದ ಮಾತುಗಳನ್ನೇ ಮೊದಲು ನೆನಪಿಸಿಕೊಂಡಿದ್ದರು. “ಇಂತಹ ಸಾಧನೆ ನಿನ್ನಿಂದ ಸಾಧ್ಯ” ಎಂದು ಪುಟ್ಟಸ್ವಾಮಯ್ಯ ಮಗನ ಭವಿಷ್ಯ ಕುರಿತು ನುಡಿದ ಮಾತು ನಿಜವಾಗಿತ್ತು. ಪುಟ್ಟಸ್ವಾಮಯ್ಯ ಅವರು ಹುರಿಮೀಸೆ ತಿರುಗಿಸುತ್ತಾ, ಆರ್ಭಟಿಸುತ್ತಾ ರಂಗ ಪ್ರವೇಶಿಸಿದರೆಂದರೆ ಎಂತಹವರಿಗೂ ನಡುಕ ಬರುತ್ತಿತ್ತು”. ತಂದೆ ಅವರ ಅಭಿನಯವನ್ನು ಬಣ್ಣಿಸುವಲ್ಲಿ ರಾಜ್‌ಕುಮಾರ್ ಅವರಿಗೆ ಎಲ್ಲಿಲ್ಲದ ಸಂತೋಷ. “ನಾನೂ ಅದೇ ರೀತಿ ಮಾಡಬೇಕೆಂದು ಭಕ್ತಪ್ರಹ್ಲಾದ ಚಿತ್ರದ ಹಿರಣ್ಯಕಶಿಪು ಪಾತ್ರದಲ್ಲಿ ಅವರಂತೆ ಅಭಿನಯಿಸಲು ಸಾಧ್ಯವೇ ಎಂದು ಪ್ರಯತ್ನಿಸಿದೆ; ಆದರೆ ಅದು ಸಾಧ್ಯವಾಗಲಿಲ್ಲ” ಎಂದು ಹೇಳುತ್ತಿದ್ದರು. ಗುಬ್ಬಿ ಕಂಪನಿಯಲ್ಲಿ ಪುಟ್ಟಸ್ವಾಮಯ್ಯ ಅವರು ಅಭಿನಯಿಸುವ ಸಂದರ್ಭದಲ್ಲಿ ಮುತ್ತುರಾಜನಿಗೆ “ಕೃಷ್ಣಲೀಲಾ” ನಾಟಕದಲ್ಲಿ ಸಣ್ಣಪಾತ್ರ ದೊರಕಿತ್ತು. ನಂತರ ಪುಟ್ಟಸ್ವಾಮಯ್ಯ ಅವರು ಗುಬ್ಬಿ ಕಂಪನಿ ತೊರೆದು ಎಂ.ವಿ.ಸುಬ್ಬಯ್ಯ ನಾಯ್ಡು ಅವರ ‘ಶ್ರೀ ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ’ಗೆ ಸೇರಿದಾಗ ಅಕಸ್ಮಾತ್ತಾಗಿ ಮುತ್ತುರಾಜ್‌ಗೆ “ಭಕ್ತ ಅಂಬರೀಷ” ನಾಟಕದಲ್ಲಿ ರಮಾಕಾಂತನ ಪಾತ್ರ ದೊರಕಿತ್ತು. “ಕುರುಕ್ಷೇತ್ರ” ನಾಟಕದಲ್ಲಿ ತಂದೆ ಭೀಮನ ಪಾತ್ರಧಾರಿಯಾದರೆ, ಮಗ ಅರ್ಜುನನ ಪಾತ್ರಧಾರಿ. ಹೀಗಿತ್ತು ಅವರ ರಂಗ ತಾಲೀಮು. 1951ರಲ್ಲಿ ತಂದೆಯ ನಿಧನದ ಅಘಾತದಿಂದ ತತ್ತರಿಸಿದ ಮುತ್ತುರಾಜ್, ಮತ್ತೆ ಜೀವನೋಪಾಯಕ್ಕಾಗಿ ಗುಬ್ಬಿಕಂಪನಿ ಸೇರಿ “ಭೂ ಕೈಲಾಸ” ನಾಟಕದಲ್ಲಿ ಅಭಿನಯಿಸಿದರು. ಗುಬ್ಬಿ ಕಂಪನಿ, ಶ್ರೀ ಸಾಹಿತ್ಯ ಮಂಡಲಿ ಅಲ್ಲದೆ ಶೇಷಾಚಾರ್ಯರ ಶೇಷಕಮಲ ನಾಟಕ ಮಂಡಳಿಯಲ್ಲಿಯೂ, ಒಂದು ವರ್ಷ ಸೇವೆ ಸಲ್ಲಿಸಿದ್ದಾರೆ. ಮುತ್ತುರಾಜ್ 1942ರ ಭಕ್ತ ಪ್ರಹ್ಲಾದ ಚಿತ್ರದಲ್ಲಿ ನಟನಾಗಿ, 1952ರ ಶಂಕರ್‌ಸಿಂಗ್ ನಿರ್ದೇಶನದ ಶ್ರೀನಿವಾಸಕಲ್ಯಾಣ ಚಿತ್ರದಲ್ಲಿ ಸಪ್ತರ್ಷಿಗಳಲ್ಲಿ ಒಬ್ಬರಾಗಿ ಅಭಿನಯಿಸುತ್ತಲೇ ರಂಗಭೂಮಿಯಲ್ಲಿಯೂ ಸಕ್ರಿಯರಾಗಿದ್ದರು. ಒಮ್ಮೆ 1953ರಲ್ಲಿ ಹೆಚ್.ಎಲ್.ಎನ್.ಸಿಂಹ ಅವರು ಮೈಸೂರಿಗೆ ಹೋಗಲು ನಂಜನಗೂಡಿಗೆ ಬಂದಿದ್ದರು. ರೈಲ್ವೇ ಸ್ಟೇಷನ್‌ನಲ್ಲಿ ಭೇಟಿಯಾದ ಆಗಷ್ಟೆ ಮದುವೆಯಾಗಿದ್ದ ಮುತ್ತುರಾಜ್ ದಂಪತಿಗಳನ್ನು ಪ್ರೀತಿಯಿಂದ ಯೋಗಕ್ಷೇಮ ವಿಚಾರಿಸಿದ್ದರು. ಕಣ್ಣಪ್ಪನ ಪಾತ್ರಕ್ಕೆ ಹೊಸನಟನ ಹುಡುಕಾಟದಲ್ಲಿದ್ದ ಸಿಂಹ ಅವರಿಗೆ ಕಟ್ಟುಮಸ್ತಾದ ಮುತ್ತರಾಜ್‌ನನ್ನು ಕಂಡಾಕ್ಷಣ “ಇವನನ್ನೇ ಕಣ್ಣಪ್ಪನಾಗಿ ಏಕೆ ಮಾಡಬಾರದು” ಎಂಬ ಮಿಂಚು ಹೊಮ್ಮಿತ್ತು. ಅವರಿಂದ ವಿಳಾಸವನ್ನು ಪಡೆದು, ದಂಪತಿಗಳಿಗೆ ಶುಭ ಕೋರಿ ಬೀಳ್ಕೊಟ್ಟಿದ್ದರು. ಈ ಘಟನೆ ನಡೆದ ಕೆಲದಿನಗಳಲ್ಲಿ ಮೈಸೂರಿನ ಟೌನ್‌ಹಾಲ್‌ನಲ್ಲಿ ಬೇಡರ ಕಣ್ಣಪ್ಪ ನಾಟಕ ಪ್ರದರ್ಶನವಿತ್ತು. ಅದರಲ್ಲಿ ಮುತ್ತುರಾಜ್ ಕಣ್ಣಪ್ಪನ ಪಾತ್ರದಲ್ಲಿ ನಟಿಸುತ್ತಾರೆ ಎಂಬ ವಿಷಯ ಸಿಂಹ ಅವರಿಗೆ ತಿಳಿದು ಅವರು ನಾಟಕ ನೋಡಲು ತೆರಳಿದ್ದರು. ಆ ದಿನ ನಾಟಕದಲ್ಲಿ ಮುತ್ತುರಾಜ್ ಅವರ ತನ್ಮಯತೆಯ ಅಭಿನಯವನ್ನು ಕಂಡು, ಸಿಂಹ ಸಂತೋಷಪಟ್ಟು, “ಗುಬ್ಬಿ ಫಿಲಂಸ್ ನಿರ್ಮಿಸುತ್ತಿದ್ದ ಬೇಡರಕಣ್ಣಪ್ಪ ಚಿತ್ರದಲ್ಲಿನ ಕಣ್ಣಪ್ಪನ ಪಾತ್ರಕ್ಕೆ ಈತನೇ ಸರಿಯಾದ ಕಲಾವಿದ” ಎಂದು ನಿರ್ಧರಿಸಿದ್ದರು.



ಮುಂದುವರಿಯುವುದು...

ಕಸ್ತೂರ್‌ಬಾ ಗಾಂಧಿ

ಮಿಸ್ ಹೆಲಿಮನ್ – ಸರಳಾದೇವಿ

ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿಯು ಹಿಂದಿಯಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಕೃತಿಯನ್ನು ಹೊದಿಕೆ ಮಾಸ್ತರರಿಂದ ಕನ್ನಡಕ್ಕೆ ಅನುವಾದ ಮಾಡಿಸಿ ಅಂದಿನ ಅಧ್ಯಕ್ಷರಾದ ಕೆ.ಎಸ್. ನಾರಾಯಣಸ್ವಾಮಿ ಅವರು 1974ರಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಗಾಂಧಿ ಕೃತಿಯ ಭಾಗ ನಿಯಮಿತವಾಗಿ ಬರಲಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಅದರಿಂದ ಅವರ ಪಾದಗಳಿಗೆ ಎಷ್ಟೊಂದು ಕಷ್ಟವಾಯಿತೆಂಬುದನ್ನು ಗಾಂಧಿ ಅವರು ಲೆಕ್ಕಿಸಲೇ ಇಲ್ಲ. ಮೇಲಾಗಿ ಗಾಂಧಿ ಅವರು ದಕ್ಷಿಣ ಆಫ್ರಿಕೆಗೆ ಮುಟ್ಟುತ್ತಲೇ ಅಲ್ಲಿಯ ಬಿಳಿಯರು ಕಲ್ಲುಗಳ ಸುರಿಮಳೆ ಮಾಡಿ ಅವರನ್ನು ಸ್ವಾಗತಿಸಿದ್ದರು. ಆದರೆ ಅದರ ಮೊದಲೇ ಕಸ್ತೂರ್‌ಬಾರನ್ನು ಮಕ್ಕಳನ್ನೂ ಮನೆಗೆ ಒಯ್ದು ಮುಟ್ಟಿಸಿ ಆಗಿತ್ತು. ಆದರೂ ಗಾಂಧಿ ಅವರಿಗೆ ಈ ಪ್ರಕಾರದ ಸ್ವಾಗತವಾದದ್ದು ಕೇಳಿ ಕಸ್ತೂರ್‌ಬಾರ ಕೋಮಲ ಹೃದಯಕ್ಕೆ ಎಷ್ಟೊಂದು ಅಘಾತವಾಗಿರಬಹುದು! ತಮ್ಮ ಮುಂದಿನ ಜೀವನವು ಅವರಿಗೆ ಎಷ್ಟೊಂದು ಅಂಧಕಾರಮಯವಾಗಿ ಕಂಡಿರಬಹುದು ದಕ್ಷಿಣ ಆಫ್ರಿಕೆಯಲ್ಲಿ ಗಾಂಧಿ ಅವರು ತಮ್ಮ ಕಾರ್ಯಾಲಯದಲ್ಲಿಯ ನೌಕರರನ್ನೆಲ್ಲ ತಮ್ಮ ಕುಟುಂಬದ ಜನರಂತೆಯೇ ನೋಡುತ್ತಿದ್ದರು. ಕಸ್ತೂರ್‌ಬಾ ಕೂಡ ಅವರನ್ನು ಪ್ರೇಮದಿಂದ ಸ್ವಾಗತಿಸುತ್ತಿದ್ದರು. ಅವರು ಸ್ಪೃಶ್ಯಾಸ್ಪೃಶ್ಯತೆಯ ರೂಢಿಯಲ್ಲೇ ಬೆಳೆದವರಿದ್ದರೂ ಸಹ ಗಾಂಧಿ ಅವರ ಮಾನವೋಚಿತ ಯುಕ್ತಿವಾದಗಳನ್ನು ತಿಳಿದುಕೊಂಡು ಹರಿಜನರನ್ನು ಕ್ರಿಶ್ಚಿಯನ್ನರನ್ನು ಸಹ ಆತ್ಮೀಯರಂತೆ ಸ್ವೀಕರಿಸುತ್ತಿದ್ದರು.

'ಅನ್ ಟು ದಿ ಲಾಸ್ಟ್' ಪುಸ್ತಕ ಓದಿ ಶ್ರಮಿಕರು ಬೆವರು ಸುರಿಸಿ ಉತ್ಪಾದಿಸಿದ ವಸ್ತುಗಳನ್ನು ಅನುತ್ಪಾದಕ ಜನರು ದುಡ್ಡಿನ ಬಲದಿಂದಲೇ ಉಪಭೋಗಿಸಿಕೊಂಡು ಮಾನವ ಕುಲವನ್ನು ದುಡ್ಡಿನ ದಾಸರನ್ನಾಗಿ ಮಾಡುತ್ತಲಿದ್ದಾರೆ ಮತ್ತು ಇದೇ ಜಗತ್ತಿನಲ್ಲಿಯ ಶೋಷಣ ವೃತ್ತಿಗೆ ತಳಪಾಯವಾಗಿದೆ. ಎಂಬುದು ಗಾಂಧಿ ಅವರಿಗೆ ಮನದಟ್ಟಾಯಿತು. ಇದರಿಂದಲೇ ಅವರಿಗೆ ಸ್ವತಃ ನಗರದ ಜೀವನವನ್ನು ಮತ್ತು ವಕೀಲಿ ಉದ್ಯೋಗವನ್ನು ಬಿಟ್ಟುಬಿಡಬೇಕೆಂಬ ಪ್ರೇರಣೆ ಹುಟ್ಟಿತು. ಕಸ್ತೂರ್‌ಬಾ ಅವರು ಇದನ್ನು ತಿಳಿದುಕೊಂಡರು. ನಗರದಲ್ಲಿಯ ಅನುಕೂಲಪೂರ್ಣವಾದ ಬಂಗಲೆ ಬಿಟ್ಟು ಗುಡಿಸಿಲಿನಲ್ಲಿ ಉಳಿದು ಉತ್ಪಾದಕರಾದ ಶ್ರಮಿಕರ ರೀತಿಯ ಜೀವನ ನಡೆಸಲಿಕ್ಕೆ ತಯಾರಾದರು. ಅಲ್ಲಿಯೂ ಗಾಂಧಿ ಅವರ ಜತೆಗಾರರು ಅವರ ಆಶ್ರಮ ಜೀವನದಲ್ಲಿ ಕೂಡಿಕೊಳ್ಳುತ್ತ ಹೋದ ಹಾಗೆ ಕಸ್ತೂರ್‌ಬಾ ಅವರ ಕುಟುಂಬವು ಬೆಳೆಯುತ್ತ ಹೋಯಿತು. ಅವರ ಮಾತೃತ್ವದ ಜವಾಬ್ದಾರಿಯೂ ಹೆಚ್ಚುತ್ತಾ ಹೋಯಿತು.



ದಕ್ಷಿಣ ಆಫ್ರಿಕೆಯಲ್ಲಿ ಪ್ರಥಮ ಸಲವೇ ಭಾರತೀಯ ಮಹಿಳೆಯರಿಗೆ ತಮ್ಮ ಗೌರವ ಕಾಯ್ದುಕೊಳ್ಳಲು ಸತ್ಯಾಗ್ರಹ ಮಾಡಿ ಜೈಲಿಗೆ ಹೋಗಬೇಕಾಗಿ ಬಂತು. ಅದರಲ್ಲಿ ಕಸ್ತೂರ್‌ಬಾ ಅವರು ಕೂಡಿಕೊಂಡರು. ಆದರೆ ಜೈಲಿನಲ್ಲಿಯ ಅಮಾನುಷ ಪರಿಸ್ಥಿತಿಯಿಂದಾಗಿ ಅವರಿಗೆ ಗಂಭೀರ ಸ್ವರೂಪದ ಖಾಯಿಲೆಯಾಯಿತು. ಮತ್ತು ಅದರಲ್ಲಿ ಅವರಲ್ಲಿಯ ಜಿಗುಟುತನದ ಪ್ರದರ್ಶನವೂ ಆಯಿತು. ದಕ್ಷಿಣ ಆಫ್ರಿಕೆಯಲ್ಲಿ ಗಾಂಧಿ ಅವರು ಇನ್ನು ಮುಂದೆ ಬ್ರಹ್ಮಚರ್ಯ ಜೀವನವನ್ನೇ ನಡೆಸಬೇಕೆಂದು ಸಂಕಲ್ಪ ಮಾಡಿದ ಆರಂಭದಿಂದಲೂ ಅವರಿಗೆ ಪ್ರೋತ್ಸಾಹವನ್ನೇ ಕೊಟ್ಟು ಅವರ ಸಂಕಲ್ಪವನ್ನು ಬಲಪಡಿಸಿದರು.

ಮುಂದುವರಿಯುವುದು....

ಸಂಗ್ರಹ : ವಿ.ಎನ್. ತಿಪ್ಪನಗೌಡ
ಉಪಾಧ್ಯಕ್ಷರು, ಗಾಂಧಿ ಭವನ



ನುಡಿ ನಮನ : ಪ್ರತಿಮಾದೇವಿ (ಏಪ್ರಿಲ್ 9, 1932 – ಏಪ್ರಿಲ್ 6, 2021)

ಕನ್ನಡ ರಂಗಭೂಮಿ ಮತ್ತು ಚಿತ್ರರಂಗದಲ್ಲಿ ನಾಲ್ಕು ದಶಕಗಳ ಸೇವೆಸಲ್ಲಿಸಿದ್ದ ಹಿರಿಯ ಹಾಗೂ ಅದ್ಭುತ ಕಲಾವಿದರಲ್ಲಿ ಪ್ರತಿಮಾ ದೇವಿ ಅವರು ಒಬ್ಬರಾಗಿದ್ದಾರೆ. ಪ್ರತಿಮಾದೇವಿ ಅವರು ಕನ್ನಡ ಚಿತ್ರರಂಗ ಕಂಡ ಅತ್ಯಂತ ಸುಂದರ ನಾಯಕಿಯರಲ್ಲಿ ಒಬ್ಬರಾಗಿದ್ದರು. ಇವರು 1947ರಲ್ಲಿ 'ಕೃಷ್ಣಲೀಲಾ' ಚಿತ್ರದ ಮೂಲಕ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ್ದರು. ಈ ಚಿತ್ರವು 100 ದಿನಗಳನ್ನು ಪೂರೈಸಿದ ಮೊದಲ ಕನ್ನಡ ಚಿತ್ರವಾಗಿತ್ತು. 1951ರಲ್ಲಿ ಬಿಡುಗಡೆಯಾದ 'ಜಗನ್ಮೋಹಿನಿ'ಯಲ್ಲಿ ಅವರು ಮುಖ್ಯ ಪಾತ್ರದಲ್ಲಿ ನಟಿಸಿದರು. ದೇವಿ ಅವರ ಹುಟ್ಟುಹೆಸರು ಮೋಹಿನಿ. ಹುಟ್ಟಿದ್ದು ಏಪ್ರಿಲ್ 9, 1932ರಲ್ಲಿ. ಪ್ರತಿಮಾದೇವಿ ಅವರು ಕನ್ನಡ ಚಿತ್ರರಂಗದ ನಿರ್ಮಾಪಕ–ನಿರ್ದೇಶಕ, ಮಹಾತ್ಮ ಪಿಕ್ಚರ್ಸ್ ಸಂಸ್ಥೆಯ ಸ್ಥಾಪಕರಾದ ಶಂಕರ್‌ಸಿಂಗ್ ಅವರ ಪತ್ನಿ. ಕನ್ನಡದ ನಿರ್ಮಾಪಕ – ನಿರ್ದೇಶಕ ಎಸ್. ವಿ. ರಾಜೇಂದ್ರಸಿಂಗ್‌ಬಾಬು, ನಟಿ ನಿರ್ಮಾಪಕಿ, ನಿರ್ದೇಶಕಿ ವಿಜಯಲಕ್ಷ್ಮಿ ಸಿಂಗ್, ಸಂಗ್ರಾಮ್ ಸಿಂಗ್, ಜೈರಾಜ್ ಸಿಂಗ್ ಅವರುಗಳು ಪ್ರತಿಮಾದೇವಿ ಅವರ ಮಕ್ಕಳು. ಕೃಷ್ಣಲೀಲಾ, ನಾಗಕನ್ಯೆ, ಜಗನ್ಮೋಹಿನಿ, ಶ್ರೀನಿವಾಸ ಕಲ್ಯಾಣ, ಮುಟ್ಟಿದ್ದೆಲ್ಲಾ ಚಿನ್ನ, ಚಂಚಲಕುಮಾರಿ, ಧರ್ಮಸ್ಥಳ ಮಹಾತ್ಮೆ, ಪ್ರಭುಲಿಂಗ ಲೀಲೆ, ಮಂಗಳಸೂತ್ರ, ಧರಣಿ ಮಂಡಲ ಮಧ್ಯದೊಳಗೆ, ರಾಮಾ ಶಾಮಾ ಭಾಮಾ ಮುಂತಾದ ಸುಮಾರು ಅರವತ್ತೈದು ಚಿತ್ರಗಳಲ್ಲಿ ಪ್ರತಿಮಾದೇವಿ ನಟಿಸಿದ್ದಾರೆ. ಜಗನ್ಮೋಹಿನಿ, ವರದಕ್ಷಿಣೆ, ಧರ್ಮಸ್ಥಳ ಮಹಾತ್ಮೆಯಲ್ಲಿನ ಅವರ ಅಭಿನಯ ಅವಿಸ್ಮರಣೀಯವಾದುದು. ಇಡೀ ಕುಟುಂಬವೇ ಕಲಾಸೇವೆಯಲ್ಲಿ ತೊಡಗಿತ್ತು. ಮಹಾತ್ಮ ಪಿಕ್ಚರ್ಸ್ ಮೂಲಕ ಉತ್ತಮ ಹಾಗೂ ಸದಭಿರುಚಿಯ ಅನೇಕ ಚಿತ್ರಗಳನ್ನು ನಿರ್ಮಿಸಿದ್ದರು. ಚಿತ್ರರಂಗದ ಎಲ್ಲ ವಿಭಾಗಗಳಲ್ಲಿಯೂ ಪ್ರತಿಮಾದೇವಿ ಅವರು ಕೆಲಸ ಮಾಡಿದ್ದರು. ಇಂಥಹ ಅಪೂರ್ವ ಕಲಾವಿದೆಗೆ ಗಾಂಧಿ ಭವನ ಗೌರವಪೂರ್ವಕ ಶ್ರದ್ಧಾಂಜಲಿ ಅರ್ಪಿಸುತ್ತದೆ.


ಜಲಿಯನ್‌ವಾಲ್ ಬಾಗ್ ಹತ್ಯಾಕಾಂಡ

ಡಾ. ವೂಡೇ ಪಿ. ಕೃಷ್ಣ

ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಜಲಿಯಾನ್‌ವಾಲ್ ಬಾಗ್ ಹತ್ಯಾಕಾಂಡ ಕರಾಳ ಅಧ್ಯಾಯವೂ ಆಗಿದೆ. ಸ್ವಾತಂತ್ರ್ಯ ಹೋರಾಟದ ತೀವ್ರತೆ ಹೆಚ್ಚಿಸಿದ ದುರಂತ ಘಟ್ಟವೂ ಆಗಿದೆ.

ಭಾರತದಲ್ಲಿ ಬ್ರಿಟಿಷರು 1919, ಏಪ್ರಿಲ್ 13ರಂದು ಜಾರಿಗೆ ತಂದ ರೌಲಟ್ ಆಕ್ಟನ್ನು ವಿರೋಧಿಸಿ ಪಂಜಾಬ್‌ನ ಧಾರ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಲ್ಲೊಂದಾದ ಅಮೃತಸರದಲ್ಲಿನ ಜಲಿಯನ್‌ವಾಲ್ ಬಾಗ್ ಉದ್ಯಾನದಲ್ಲಿ ಸಹಸ್ರಾರು ಮಂದಿ ಸಮಾವೇಶಗೊಂಡಿದ್ದರು. ಸಿಖ್ಖರು ಪವಿತ್ರ ದಿನ ಬೈಸಾಖಿ ಹಬ್ಬವನ್ನು ಆಚರಿಸಲು ಪಾರಂಪರಿಕವಾಗಿ ಅಮೃತಸರದಲ್ಲಿ ಸಮಾವೇಶಗೊಳ್ಳುತ್ತಿದ್ದರು. ಅಮೃತಸರದಲ್ಲಿ ಐದಕ್ಕಿಂತ ಹೆಚ್ಚಿನ ಜನ ಆ ದಿನಗಳಲ್ಲಿ ಗುಂಪುಗೂಡದಂತೆ ನಿಷೇದಾಜ್ಞೆ ಜಾರಿಯಲ್ಲಿತ್ತು. ಗ್ರಾಮೀಣ ಪ್ರದೇಶದಿಂದ ಅಮೃತಸರಕ್ಕೆ ಬರುತ್ತಿದ್ದ ಜನರಿಗೆ ಈ ಮಾಹಿತಿಯು ಲಭ್ಯವಾಗಿರಲಿಲ್ಲ. ಬಂದೂಕುಗಳನ್ನಿಡಿದ ಶಸ್ತ್ರಸಜ್ಜಿತವಾದ 90 ಸೈನಿಕರು ತುಕಡಿಯೊಂದು ಉದ್ಯಾನವನಕ್ಕೆ ಬಂದಿತ್ತು. ಮೆಷಿನ್ಗನ್‌ಗಳನ್ನು ಅಳವಡಿಸಲಾಗಿದ್ದ ವಾಹನಗಳು, ಆ ತುಕಡಿಯ ನಿಯಂತ್ರಕರಾದ ಬ್ರಿಗೇಡಿಯರ್ ಜನರಲ್ ರೆಜಿನಾಲ್ಡ್ ಡಯರ್ ಅವರು ಉದ್ಯಾನದೊಳಗೆ ಕಾಲಿಟ್ಟಿದ್ದರು. ಆತ ನೆರೆದಿದ್ದವರಿಗೆ ಎಚ್ಚರಿಕೆಯನ್ನೂ ಕೊಡದೆ, ಗುಂಪು ಚದುರುವಂತೆ ಆದೇಶವನ್ನೀಯದೇ, ಹಠಾತ್ತಾಗಿ ಜನಸಾಂದ್ರತೆ ಹೆಚ್ಚಾಗಿರುವ ಕಡೆ ಗುಂಡಿನ ಮಳೆಗರೆವಂತೆ ತಮ್ಮ ತುಕಡಿಗೆ ಆದೇಶವನ್ನಿತ್ತಿದ್ದನು. ಅಲ್ಲಿ ನೆರೆದಿದ್ದ ಗಂಡಸರು, ಹೆಂಗಸರು, ಮಕ್ಕಳೆಲ್ಲರ ಮೇಲೆ ಸುಮಾರು ಹತ್ತರಿಂದ ಹದಿನೈದು ನಿಮಿಷಗಳ ಕಾಲ, ಸತತವಾಗಿ ನಡೆಸಿದ ಗುಂಡಿನ ದಾಳಿಯಲ್ಲಿ ಸಾವಿಗೀಡಾದವರ ಸಂಖ್ಯೆ ಸಾವಿರಕ್ಕೂ ಹೆಚ್ಚು ಹಾಗು ಗಾಯಗೊಂಡವರ ಸಂಖ್ಯೆ 1200ಕ್ಕೂ ಹೆಚ್ಚಾಗಿತ್ತು. ಶಸ್ತ್ರಚಿಕಿತ್ಸಾ ತಜ್ಞ ಡಾ.ಸ್ಮಿತ್ ನೀಡಿದ ಮಾಹಿತಿಯ ಪ್ರಕಾರ, ಸಾವಿಗೀಡಾದವರು 1800ಕ್ಕೂ ಹೆಚ್ಚು. ರಾಜಕೀಯ ಪ್ರೇರಿತವಾದ ಈ ಅಂಕಿ ಅಂಶಗಳು ಇಂದಿಗೂ ಧೃಢಪಟ್ಟಿಲ್ಲ. ಸುತ್ತಲೂ ಇಟ್ಟಿಗೆ ಗೋಡೆಗಳಿಂದ ಆವೃತವಾಗಿದ್ದ ಉದ್ಯಾನವನಕ್ಕೆ ಇದ್ದ ಐದು ಕಡಿದಾದ ದ್ವಾರಗಳು ಮುಚ್ಚಲ್ಪಟ್ಟಿದ್ದವು. ತುಕಡಿಯಿದ್ದ ದ್ವಾರದ ಹೊರತಾಗಿ ಯಾವುದೇ ಮಾರ್ಗಗಳು ಉಳಿಯದಿದ್ದರಿಂದ, ಕಂಗಾಲಾದ ಜನರು ಗೋಡೆಯನ್ನು ಹತ್ತಿ ಹಾರಲು ಪ್ರಯತ್ನಿಸಿದರು. ಬಹಳಷ್ಟು ಜನರು ಗುಂಡಿನ ದಾಳಿಯಿಂದ ತಪ್ಪಿಸಿಕೊಳ್ಳಲು ಉದ್ಯಾನದಲ್ಲಿದ್ದ ಬಾವಿಯೊಳಗೆ ಹಾರಿದರು. ಬಾವಿಯೊಂದರಿಂದಲೇ ಸುಮಾರು 120 ಶವಗಳನ್ನು ಹೊರತೆಗೆಯಲಾಗಿತ್ತು. ನಿಜವಾದ ಸಾವಿನ ಸಂಖ್ಯೆಗಳ ಬಗ್ಗೆ ಇಂದಿಗೂ ಚರ್ಚೆ ನಡೆಯುತ್ತಲೇ ಇದೆ. ಹತ್ಯಾಕಾಂಡದ ಕುರಿತು ತನಿಖೆ ನಡೆಸಲು ಹಂಟರ್ ಆಯೋಗವನ್ನು ಸ್ಥಾಪಿಸುವಂತೆ ರಾಜ್ಯಾಂಗ ಕಾರ್ಯದರ್ಶಿಯಾಗಿದ್ದ ಎಡ್ವಿನ್ ಮೊಂಟಾಗೊ ನಿರ್ಧರಿಸಿದನು. ಈ ಆಯೋಗದೆದುರು ಡಯರ್‌ನನ್ನು ಕರೆತರಲಾಯಿತು. ವಿಚಾರಣೆಯ ವೇಳೆ ತಾನು ಜಲಿಯನ್‌ವಾಲ ಬಾಗ್‌ನಲ್ಲಿ ಗುಂಡು ಹಾರಿಸುವ ಉದ್ದೇಶದಿಂದಲೇ ತೆರಳಿದ್ದಾಗಿ ಯಾವ ಭೀತಿಯಿಲ್ಲದೆ ತಿಳಿಸಿದ್ದನು. 1920ರಲ್ಲಿ ಹಂಟರ್ ವರದಿಯು ಜನರ ಆಕ್ರೋಶದ ಮಧ್ಯೆ ಡಯರ್‌ನನ್ನು ನಿಷ್ಕ್ರಿಯ ಅಧಿಕಾರಿಗಳ ಪಟ್ಟಿಗೆ ಸೇರಿಸಿ ಭಾರತದಲ್ಲಿ ಮುಂದೆ ಯಾವ ಕೆಲಸವನ್ನೂ ಕೊಡಬಾರದೆಂದು ತಿಳಿಸಿತು. ಇದರಿಂದಾಗಿ ಆತನನ್ನು ಮರಳಿ ಇಂಗ್ಲೆಂಡಿಗೆ ಕಳುಹಿಸಲಾಯಿತು. ಹೌಸ್ ಆಫ್ ಕಾಮನ್ಸ್ ಅವನನ್ನು ಖಂಡಿಸಿತು; ಆ ಚರ್ಚೆಯಲ್ಲಿ ವಿನ್‌ಸ್ಟನ್ ಚರ್ಚಿಲ್ ಪ್ರತಿಪಾದಿಸಿದ್ದು: "ಜಲಿಯನ್‌ವಾಲಾ ಬಾಗ್‌ನಲ್ಲಿ ನಡೆದಿರುವ ಈ ಘಟನೆಯು ಅಮಾನುಷ ದುಷ್ಕೃತ್ಯವಾಗಿದೆ ಡಯರ್‌ನ ಕ್ರಮವನ್ನು ಜಗತ್ತಿನಾದ್ಯಂತ ಖಂಡಿಸಲಾಗಿತ್ತು. ಬ್ರಿಟೀಷ್ ಸರಕಾರವು ಅವನನ್ನು ಅಧಿಕೃತವಾಗಿ ಅಮಾನತುಗೊಳಿಸಿತು. ಈ ಹತ್ಯಾಕಾಂಡವು ಭಾರತದ ಸ್ವಾತಂತ್ರ್ಯ ಚಳುವಳಿಗೆ ವೇಗೋತ್ಕರ್ಷಕವಾಯಿತು. ಮಹಾತ್ಮ ಗಾಂಧಿಯವರು ಬ್ರಿಟೀಷರ ವಿರುದ್ಧ ಅಸಹಕಾರ ಸತ್ಯಾಗ್ರಹವನ್ನು ಆರಂಭಿಸಿದರು. ರವೀಂದ್ರನಾಥ ಠಾಗೋರ್ ಅವರು ಪ್ರತಿಭಟನೆಯೆಂದು ತಮ್ಮ ನೈಟ್ ಪದವಿಯನ್ನು ಮತ್ತು ನೊಬೆಲ್ ಪ್ರಶಸ್ತಿಯನ್ನು ಚಕ್ರವರ್ತಿಗೆ ಹಿಂತಿರುಗಿಸಿದ್ದರು. ಹತ್ಯಾಕಾಂಡದ ಪ್ರತ್ಯಕ್ಷದರ್ಶಿ ಹಾಗು ಸ್ವತಃ ಗಾಯಗೊಂಡ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಉದಾಮ್‌ಸಿಂಗ್, ಹತ್ಯಾಕಾಂಡದ ಸಂದರ್ಭದಲ್ಲಿ ಪಂಜಾಬಿನ ಲೆಫ್ಟಿನೆಂಟ್ ಗವರ್ನರ್ ಆಗಿದ್ದ ಮೈಕೇಲ್ ಡಯರ್‌ನನ್ನು ಲಂಡನ್ನಿನ ಕ್ಯಾಕ್‌ಸ್ಟನ್ ಹಾಲ್‌ನಲ್ಲಿ ಹತ್ಯೆಮಾಡಿದ. ನಂತರ ನ್ಯಾಯಾಲಯದಲ್ಲಿ "ಕೊನೆಗೂ ನಾನು ಯಶಸ್ವಿಯಾದುದ್ದಕ್ಕೆ ನನಗೆ ಆನಂದವಾಗಿದೆ. ನಾನು ನನ್ನ ದೇಶಕ್ಕಾಗಿ ಸಾಯುತ್ತಿದ್ದೇನೆ. ನನ್ನ ಜನರು ಬ್ರಿಟೀಷರ ಆಳ್ವಿಕೆಗೆ ತುತ್ತಾಗಿ ಭಾರತದಲ್ಲಿ ಸಾಯುತ್ತಿರುವುದನ್ನು ನೋಡಿದ್ದೇನೆ. ಇದನ್ನು ವಿರೋಧಿಸಿದ್ದೇನೆ, ಅದು ನನ್ನ ಕರ್ತವ್ಯ. ತಾಯ್ನಾಡಿಗಾಗಿ ಪ್ರಾಣತ್ಯಾಗ ಮಾಡುವುದಕ್ಕಿಂತಲೂ ಹೆಚ್ಚಿನ ಗೌರವ ಇನ್ನೇನು ಸಿಗಲು ಸಾಧ್ಯ" ಎಂಬ ಉದಾಮ್ ಸಿಂಗ್ ಹೇಳಿಕೆ ಮನಮಿಡಿಯುವಂತಿದೆ. ಹತ್ಯಾಕಾಂಡದ ಸ್ಥಳದಲ್ಲಿ ಸ್ಮಾರಕವನ್ನು ನಿರ್ಮಿಸಲಾಗಿದೆ. ಇದನ್ನು 1961, ಏಪ್ರಿಲ್ 13ರಂದು, ಅಂದಿನ ಪ್ರಧಾನಿ ಜವಹರಲಾಲ್ ನೆಹರು ಮತ್ತು ರಾಷ್ಟ್ರಪತಿ ಡಾ.ರಾಜೇಂದ್ರ ಪ್ರಸಾದ್ ಅವರು ಉದ್ಘಾಟಿಸಿದರು. ಅಲ್ಲಿ ಜ್ಯೋತಿಯೊಂದನ್ನು ಇಡಲಾಗಿದೆ. ಗುಂಡಿನಿಂದಾದ ರಂಧ್ರಗಳನ್ನು ಇಂದಿಗೂ ಅಲ್ಲಿನ ಗೋಡೆಗಳ ಮೇಲೆ, ಅಕ್ಕಪಕ್ಕದ ಕಟ್ಟಡಗಳ ಮೇಲೆ ನೋಡಬಹುದಾಗಿದೆ. ಬಹಳಷ್ಟು ಜನರು ಧುಮುಕಿದ ಅಲ್ಲಿನ ಬಾವಿಯನ್ನು ಕೂಡ ಸಂರಕ್ಷಿಸಿ, ಸ್ಮಾರಕವನ್ನಾಗಿ ಮಾಡಲಾಗಿದೆ.





ಹುತಾತ್ಮ ಉದಾಮ್ ಸಿಂಗ್



ಹತ್ಯಾಕಾಂಡದ ರೂವಾರಿ
ನಿರ್ದಯಿ ರೆಗಿನಾಲ್ಡ್ ಡಯರ್

ರುಕ್ಮಿಣಿದೇವಿ ಅರುಂಡೇಲ್ : (29.02.1904–24.02.1986)

ಪ್ರೊ. ಲೀಲಾ ವಾಸುದೇವ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಅರ್ಧ ಶತಮಾನಕ್ಕೂ ಹೆಚ್ಚುಕಾಲ ನಿರಂತರವಾಗಿ ಶಿಷ್ಯರನ್ನು ಭರತನಾಟ್ಯ ಕಲಾವಿದರನ್ನಾಗಿ ರೂಪಿಸಿದ ಪಂದನಲ್ಲೂರು ಮೀನಾಕ್ಷಿ ಸುಂದರಂ ಪಿಳ್ಳೈ ಅವರಲ್ಲಿ ಶಿಕ್ಷಣ ಪಡೆದ ಪ್ರಸಿದ್ಧ ನೃತ್ಯ ಕಲಾವಿದರಲ್ಲಿ ಅಡ್ಯಾರಿನ ರುಕ್ಮಿಣಿದೇವಿ ಅವರೂ ಒಬ್ಬರಾಗಿದ್ದಾರೆ. ಅಂತರ ರಾಷ್ಟ್ರೀಯ ಮೆಚ್ಚುಗೆ ಪಡೆದ ಬೆಂಗಳೂರಿನ ಶಾಂತಾರಾವ್ ಮತ್ತು ರಾಮಗೋಪಾಲ್ ಅವರೂ ಸಹ ಇವರ ಶಿಷ್ಯರೇ ಆಗಿದ್ದಾರೆ.

ಭರತನಾಟ್ಯ : ಶಿವ–ನಟರಾಜ ಭಾರತೀಯ ನೃತ್ಯದ ಅಧಿದೇವತೆಯರು. ಪೂರ್ವದಲ್ಲಿ ದೇವಸ್ಥಾನದ ನೃತ್ಯಗಾರ್ತಿಯರು ಇದನ್ನು 'ಸಾಧಿರ್' ಶೈಲಿಯಲ್ಲಿ ನರ್ತಿಸುತ್ತಿದ್ದರು. (ಭರತನಾಟ್ಯದ ಅತ್ಯಂತ ಆದಿ ಅಥವ ಹುಟ್ಟು ಹೆಸರು 'ಸಾಧಿರ್' ಎನ್ನಲಾಗಿದೆ.) ಇದರಲ್ಲಿ ಶೃಂಗಾರರಸ ಅಥವ ಬಾಹ್ಯ ಶೃಂಗಾರಕ್ಕೆ ಪ್ರಾಧಾನ್ಯತೆ ಇರುತ್ತದೆ. ಅರಮನೆಗಳಲ್ಲೂ ನೃತ್ಯ ಕಾರ್ಯಕ್ರಮಗಳು ನಡೆಯುತ್ತಿದ್ದವು. ಆ ಕಾಲದಲ್ಲಿ ಅರಮನೆ ನೃತ್ಯಗಾರ್ತಿ ಅವರನ್ನು ದೇವದಾಸಿಯರೆಂದು ಕೀಳಾಗಿ ಕಾಣಲಾಗುತ್ತಿತ್ತು. ಆ ದಿನಗಳಲ್ಲಿ ನೃತ್ಯ ದೇವದಾಸಿಯರೇ ಮಾಡುವ ಕಲೆಯಾಗಿತ್ತು. ರುಕ್ಮಿಣೀದೇವಿ ಅರುಂಡೇಲ್ ಅವರು ಭರತನಾಟ್ಯವನ್ನು ಮಹತ್ವದ ಕಲೆಯನ್ನಾಗಿ ರೂಪಿಸಿ ಹೊಸ ರೀತಿಯಲ್ಲಿ ಸೃಜಿಸಿದರು. ನೃತ್ಯ ಆಕರ್ಷಣೀಯವಾಗಲು ವೇಷ–ಭೂಷಣಗಳು ಪಕ್ಕವಾದ್ಯಗಳು, ಸಂಗೀತ ಮತ್ತು ಬೆಳಕಿನ ವಿನ್ಯಾಸದೊಂದಿಗೆ ಸಾರ್ವಜನಿಕರಿಗೆ ಪರಿಚಯಿಸಿದರು. ದೇವಸ್ಥಾನದಲ್ಲಿನ ಶಿಲಾಕೃತಿಗಳ ಆಭರಣಗಳನ್ನು ನೃತ್ಯಕಲಾವಿದರು ಧರಿಸಿ, ಪ್ರದರ್ಶಿಸುವ ಮೂಲಕ ನೃತ್ಯದ ಸ್ವರೂಪವನ್ನೇ ಬದಲಾಯಿಸಿದರು. ಇದರೊಂದಿಗೆ ಶಾಸ್ತ್ರೀಯ ಸಂಗೀತಗಾರರು, ಪಕ್ಕವಾದ್ಯ ಕಲಾವಿದರು ಮತ್ತು ನೃತ್ಯ ಕಲಾವಿದರುಗಳ ಸಂಗಮಕ್ಕೆ ನಾಂದಿ ಹಾಡಿದರು. ನೃತ್ಯ ಕಾರ್ಯಕ್ರಮಗಳು ಅನೇಕ ಕಲಾವಿದರುಗಳ ವೇದಿಕೆಯಾಯಿತು.



ಕಲಾಕ್ಷೇತ್ರ : ಅರುಂಡೇಲ್ ದಂಪತಿಗಳು 'ಕಲಾಕ್ಷೇತ್ರ'ವನ್ನು ಗುರುಕುಲ ಪದ್ಧತಿಯಲ್ಲಿ 1936ರಲ್ಲಿ ಅಡ್ಯಾರ್‌ನಲ್ಲಿ ಪ್ರಾರಂಭ ಮಾಡಿದರು, ತಡಿಕೆಗಳಿಂದ ಗುಡಿಸಲುಗಳನ್ನು ಕಟ್ಟಿ ಗುರುಕುಲದ ಪಾರಂಪರಿಕತೆಯನ್ನು ಅನುಸರಿಸಿ, ಗುರುಶಿಷ್ಯರು ಕಲಾಕ್ಷೇತ್ರದಲ್ಲೇ ವಾಸಿಸಲು ಅನುವು ಮಾಡಿದರು. ಕಲಾಕ್ಷೇತ್ರದ ಕೊಡುಗೆ ಎನ್ನಬಹುದಾದ ಪ್ರಖ್ಯಾತ ಕಲಾವಿದರೆಂದರೆ ರಾಧಾ ಬರ್ನಿಯರ್, ಶಾರದಾ ಹಾಫ್‌ಮ್ಯಾನ್, ಕಮಲಾದೇವಿ ಚಟ್ಟೋಪಾಧ್ಯಾಯ, ಸಂಯುಕ್ತ ಪಾಣಿಗ್ರಹಿ, ಸಿ.ವಿ. ಚಂದ್ರಶೇಖರ್, ಯಾಮಿನಿ ಕೃಷ್ಣಮೂರ್ತಿ ಮತ್ತು ಲೀಲಾ ಸ್ಯಾಮ್ ಅವರಾಗಿದ್ದಾರೆ. ಉತ್ತರಾರ್ಧದಲ್ಲಿ ಯಾಮಿನಿ ಕೃಷ್ಣಮೂರ್ತಿ ಹೆಸರಾಂತ ಕೂಚಿಪುಡಿ ನೃತ್ಯಗಾರ್ತಿಯೂ ಆದರು.

ಕಲಾಕ್ಷೇತ್ರ ವಿಶ್ವವಿದ್ಯಾಲಯ (ಸ್ವತಂತ್ರ) :

ಪ್ರಸ್ತುತ ಕಲಾಕ್ಷೇತ್ರವು ಚನ್ನೈನ ತಿರುವಣ್ಮೈಯರ್‌ಗೆ ಸ್ಥಳಾಂತರಗೊಂಡಿದೆ. ಈ ವಿಶ್ವವಿದ್ಯಾಲಯವು ಭಾರತದ ಮೊಟ್ಟಮೊದಲ ಮರಿಯ ಮಾಂಟಸರಿ ಶಾಲೆ, ಬೆಸೆಂಟ್ ಥಿಯೊಸಾಫಿಕಲ್ ಪ್ರೌಢಶಾಲೆ, ಬೆಸೆಂಟ್ ಅರುಂಡೇಲ್ ಹಿರಿಯರ ಪ್ರೌಢಶಾಲೆ, ದಿ ಕಾಲೇಜ್ ಆಫ್ ಫೈನ್ ಆರ್ಟ್ಸ್, ದಿ ಕ್ರಾಫ್ಟ್ ಎಜುಕೇಶನ್ ಮತ್ತು ರಿಸರ್ಚ್ ಸೆಂಟರ್ ಮತ್ತು ಯು.ವಿ. ಸ್ವಾಮಿನಾಥನ್ ಅಯ್ಯರ್ ಅವರ ಗ್ರಂಥಾಲಯವನ್ನು ಒಳಗೊಂಡಿದೆ.

ಮುಂದುವರಿಯುವುದು...–

ವನ್ಯ ಜೀವಿಗಳ ರಕ್ಷಕಿ : ಟ್ರಾಂಗ್

ಸಂಗ್ರಹ : ಡಾ. ವಿ. ಪ್ರಶಾಂತ

ಜಗತ್ತಿನಲ್ಲಿ ವನ್ಯಜೀವಿಗಳ ಕಳ್ಳಬೇಟೆ ಮತ್ತು ಸಾಗಣೆ ಪ್ರತಿವರ್ಷ ನೂರಾರು ಕೋಟಿ ಡಾಲರ್‌ನ ಕಾಳದಂಧೆಯಾಗಿ ಬೆಳೆದಿದೆ. ಈ ಕಳ್ಳ ಬೇಟೆಯನ್ನು ತಡೆಯುವ ಯತ್ನಗಳು ಅಲ್ಲಲ್ಲಿ ನಡೆಯುತ್ತಲೇ ಇವೆ. ವಿಯಟ್ನಾಂನಲ್ಲಿ 'ವೈಲ್ಡ್ ಆಕ್ಟ್' ತಂಡವನ್ನು ಕಟ್ಟಿಕೊಂಡು ಟ್ರಾಂಗ್ ನಡೆಸಿರುವ ಸಾಹಸಕ್ಕಾಗಿ ಬಿ.ಬಿ.ಸಿ. ಆಕೆಯನ್ನು ಜಗತ್ತಿನ ಅತ್ಯಂತ ಪ್ರಭಾವಶಾಲಿ ಮಹಿಳೆ ಎಂದೂ ಗುರುತಿಸಿದೆ. 31ರ ಹರಯದ ಟ್ರಾಂಗ್, ದಕ್ಷಿಣ ಆಫ್ರಿಕಾದ ಕಳ್ಳ ಸಾಗಾಣಿಕೆದಾರರ ಜಾಲವನ್ನು ಭೇದಿಸುವಲ್ಲಿ ಮಹತ್ವದ ಪಾತ್ರ ವಹಿಸಿದಾಕೆ. ವನ್ಯಜೀವಿಗಳ ಮೇಲೆ 'ಸಾಂಪ್ರದಾಯಿಕ ಔಷಧಿ ಪದ್ಧತಿಯ ಪ್ರಭಾವ'ದ ವಿಷಯವಾಗಿ ಪಿಎಚ್.ಡಿ. ಪದವಿಯನ್ನೂ ಪೂರೈಸಿದ್ದಾಳೆ. ವಿಯಟ್ನಾಂನಲ್ಲಿ ವನ್ಯಜೀವಿ ಸಂರಕ್ಷಣೆ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನೂ ಆರಂಭಿಸಿದ ಹೆಗ್ಗಳಿಕೆ ಆಕೆಯದು. ವನ್ಯಜೀವಿ ಕಳ್ಳ ಸಾಗಣೆ ವಿರುದ್ಧ ಜನರೇ ಧ್ವನಿ ಎತ್ತುವಂತೆ ಜಾಗೃತಿ ಮೂಡಿಸುವ ಕೆಲಸದಲ್ಲಿ ಆಕೆಯೀಗ ನಿರತಳಾಗಿದ್ದಾಳೆ. ಕಳ್ಳ ಸಾಗಣೆ ತಡೆಯಲು ಹಲವು ದೇಶಗಳ ಸ್ವಯಂಸೇವಾ ಸಂಸ್ಥೆಗಳ ಜೊತೆ ಕೆಲಸ ಮಾಡುತ್ತಿದ್ದಾಳೆ. ವನ್ಯಜೀವಿ ಸಂರಕ್ಷಣೆಯಲ್ಲಿ ಯುವತಿಯರಿಗೆ ಪ್ರೋತ್ಸಾಹದಾಯಕವಾದ ಕೃತಿಯನ್ನೂ ಆಕೆ ಬರೆದಿದ್ದಾಳೆ. ವನ್ಯಜೀವಿ ಸಂರಕ್ಷಣೆಯಲ್ಲಿ ತಾನು ತುಳಿದ ಹೆಜ್ಜೆ ಗುರುತುಗಳನ್ನು ದಾಖಲಿಸಲು ಟ್ರಾಂಗ್ ಬರೆದಿರುವ ಕೃತಿಯ ಹೆಸರು 'Saving Sorya'. ಬಿಬಿಸಿ ಡಾಕ್ಯುಮೆಂಟರಿಗಳನ್ನು ನೋಡುತ್ತಾ ವನ್ಯಜೀವಿ ಪ್ರೇಮವನ್ನೂ ಬೆಳೆಸಿಕೊಂಡವಳು ಆಕೆ. ಇಂಗ್ಲೆಂಡ್‌ನಲ್ಲಿ ಓದಲು ಸ್ಕಾಲರ್‌ಶಿಪ್ ಪಡೆದ ಆಕೆ, ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ವನ್ಯಜೀವಿ ಸಂರಕ್ಷಣೆ ವಿಷಯದಲ್ಲೇ ಮಾಸ್ಟರ್ಸ್ ಪದವಿ ಗಳಿಸಿದ್ದಾಳೆ. ಟ್ರಾಂಗ್‌ನಿಂದಾಗಿ ಹಲವು ಕಳ್ಳ ಬೇಟೆಗಾರರು ಈಗ ಜೈಲು ಪಾಲಾಗುವಂತಾಗಿದೆ.



ಸೌಜನ್ಯ : ಸುಧಾ, ಏಪ್ರಿಲ್ 2021

ಗಾಂಧಿ ಮತ್ತು ಆಧ್ಯಾತ್ಮಿಕ ಸುಸ್ಥಿರತೆ

ಡಾ. ವೂಡೇ ಪಿ. ಕೃಷ್ಣ

ಸಮಾಜವಾದ : ಗಾಂಧೀ ದೃಷ್ಟಿಕೋನ

ಇಪ್ಪತ್ತನೇ ಶತಮಾನದಲ್ಲಿ ಏಷ್ಯಾ ಖಂಡದ ಮಹಾಪುರುಷರಲ್ಲಿ ಒಬ್ಬರೆಂದು ಪರಿಗಣಿಸಲಾದ ಮಹಾತ್ಮ ಗಾಂಧೀ ಅವರಿಗೆ ಭಾರತದ ಬಗ್ಗೆ ಅನನ್ಯವಾದ ಕನಸಿತ್ತು. ಅವರು ಹೇಳುತ್ತಿದ್ದುದು ಏನೆಂದರೆ ; ನಾನು ಎಂಥಹ ಇಂಡಿಯಾಗಾಗಿ ಶ್ರಮಿಸಬೇಕಾಗಿದೆ ಎಂದರೆ ಯಾವ ಇಂಡಿಯಾದಲ್ಲಿ ಕಡು ಬಡವರೂ, "ಇದು ಅವರ ದೇಶ" ಎಂಬ ಭಾವನೆ ಹೊಂದುವರೋ ಯಾವುದರಿಂದ ಅವರು ಪ್ರಬಲ ಧ್ವನಿಯಾಗಬಲ್ಲರೋ ಅಂಥಹ ಇಂಡಿಯಾದಲ್ಲಿ ಉಚ್ಛ ಮತ್ತು ನೀಚ ವರ್ಗ ಭೇದವಿಲ್ಲದ ಜನರಿರುವರೋ, ಯಾವ ಇಂಡಿಯಾದಲ್ಲಿ ಎಲ್ಲಾ ಜನ ಸಮುದಾಯಗಳು, ಪರಿಪೂರ್ಣ ಸೌಹಾರ್ದತೆಯಿಂದ ಬದುಕಲು ಸಾಧ್ಯವೋ, ಯಾವ ಇಂಡಿಯಾದಲ್ಲಿ, ಅಸ್ಪೃಶ್ಯತೆಯ ಶಾಪವಿರುವುದಿಲ್ಲವೋ, ಮದ್ಯಪಾನ – ಮಾದಕ ವಸ್ತುಗಳ ದುಶ್ಚಟಗಳಿರುವುದಿಲ್ಲವೋ, ಅಂಥಹ ಇಂಡಿಯಾದಲ್ಲಿ ಮಹಿಳೆಯರು, ಪುರುಷರಷ್ಟೇ ಸಮಾನವಾದ ಹಕ್ಕುಗಳನ್ನು ಅನುಭವಿಸುವರು. ಇದರಿಂದಾಗಿ ಉಳಿದ ಎಲ್ಲಾ ವಿಶ್ವದೊಂದಿಗೆ ನಾವು ಶಾಂತಿಯಿಂದ ಇರಬಹುದು. – ಇದು ನನ್ನ ಕನಸಿನ ಭಾರತ" ಎನ್ನುತ್ತಿದ್ದರು.

ಗಾಂಧೀಜಿ ಅವರು ತಮ್ಮ ಮನದಾಳವನ್ನು ಬಿಚ್ಚಿಟ್ಟ ಬಗ್ಗೆ ನಮಗೆ ದೊರೆಯುವ ಬಹಳ ಹಿಂದಿನ ಸಾಹಿತ್ಯ ಎಂದರೆ 1906ರಲ್ಲಿ ಅವರು ಪ್ರಕಟಿಸಿದ 'ಹಿಂದ್ ಸ್ವರಾಜ್'. 'ಹಿಂದ್ ಸ್ವರಾಜ್'ನಲ್ಲಿನ ಪ್ರಮುಖ ವಿಷಯವೆಂದರೆ ಗಾಂಧೀಜಿ ಅವರು ಮೊತ್ತ ಮೊದಲ ಬಾರಿಗೆ, "ನಮ್ಮ ಬೇಕುಗಳನ್ನು ಮಿತಿಯಲ್ಲಿಡುವ" ಬಗ್ಗೆ ಮಾತನಾಡಿದುದಾಗಿದೆ. ಅವರು ದಕ್ಷಿಣ ಆಫ್ರಿಕಾದಿಂದ 1914ರಲ್ಲಿ ಹಿಂತಿರುಗಿದ ಕೂಡಲೇ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರೀಯ ಹೋರಾಟವನ್ನು ಪ್ರಾರಂಭಿಸಿದರು. ಗಾಂಧೀಜಿ ಅವರ ಪ್ರಕಾರ ಸ್ವರಾಜ್ಯವೆಂದರೆ – ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ನೈತಿಕ ಸ್ವಾತಂತ್ರ್ಯವಾಗಿದೆ. 1947ರ ಆಗಸ್ಟ್ 15ರಂದು ನಾವು ಸಂಪೂರ್ಣವಾಗಿ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಿದೆವು. ಆದರೆ ನಾವು ಇನ್ನೂ ಸಮಾಜಿಕ, ಆರ್ಥಿಕ ಮತ್ತು ನೈತಿಕ ಸ್ವಾತಂತ್ರ್ಯವನ್ನು ಪಡೆಯಬೇಕಾಗಿದೆ ಎಂದು ಆಲೋಚಿಸಿದ್ದರು.

ಗಾಂಧೀಜಿ ಅವರ ಜೀವನದ ಕಾರ್ಯಸೂಚಿಯ ಮುಖ್ಯಾಂಶವೆಂದರೆ ಬಡತನದ ವಿರುದ್ಧ ಹೋರಾಟ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಗಾಂಧೀಜಿ ಅವರು ತಮ್ಮ ರಾಜಕೀಯ ಚಟುವಟಿಕೆಯ ಜೊತೆ ಜೊತೆಗೆ ತಮ್ಮ ಆರ್ಥಿಕ ಯೋಜನೆಗಳನ್ನೂ ಮುಂದಿಟ್ಟಿದ್ದರು. ಪ್ರಸಿದ್ಧ ಗಾಂಧೀ ಅರ್ಥಶಾಸ್ತ್ರಜ್ಞರಾದ ಜೆ.ಸಿ. ಕುಮಾರಪ್ಪನವರು ಗಾಂಧೀಜಿ ಅವರ ಸಂಪೂರ್ಣ ಆರ್ಥಿಕ ಯೋಜನೆಗಳನ್ನೊಳಗೊಂಡ "ಗಾಂಧೀ ಅರ್ಥಶಾಸ್ತ್ರ" ಎಂಬ ಹೊಸ ಪರಿಭಾಷೆಯನ್ನು ವಿಶ್ವಕ್ಕೆ ಪರಿಚಯಿಸಿದರು.

ತಮ್ಮ ರಾಜಕೀಯ ಗುರು ಗೋಪಾಲಕೃಷ್ಣ ಗೋಖಲೆ ಅವರ ಸಲಹೆಯ ಮೇರೆಗೆ ಗಾಂಧೀಜಿ ಅವರ ಮೂರನೇ ದರ್ಜೆಯ ರೈಲ್ವೇ ಪ್ರಯಾಣಿಕರಾಗಿ ಭಾರತಯಾತ್ರೆಯನ್ನು ಕೈಗೊಂಡರು. ಗೋಖಲೆ ಅವರು, "ಜನರ ಬಳಿಗೆ ಹೋಗಿ; ಅವರನ್ನು ತಿಳಿದುಕೊಳ್ಳಿ; ಅವರನ್ನು ಪ್ರೀತಿಸಿ, ಅವರೊಡನೆ ದುಡಿಯಿರಿ". ಎಂಬ ಈ ಸಂದೇಶದೊಡನೆ ಗಾಂಧೀಜಿ ಭಾರತಯಾತ್ರೆಯನ್ನು ಪ್ರಾರಂಭಿಸಿದರು. ಇದರಿಂದ ಅವರು ಭಾರತದ ಶರೀರ, ಮನಸ್ಸು ಮತ್ತು ಆತ್ಮಗಳನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿತು. ತನ್ನ ಕಾಲದ ಸಾಮಾಜಿಕ, ಆರ್ಥಿಕ ವಾಸ್ತವತೆಯನ್ನು ಸಮರ್ಥವಾಗಿ ಗ್ರಹಿಸಲು ಅವರಿಗೆ ಸಾಧ್ಯವಾಯಿತು.

ಗಾಂಧೀ ಅರ್ಥಶಾಸ್ತ್ರದ ಜೀವಾಳ ಎಂದರೆ "ಆರ್ಥಿಕ ಸ್ವಾವಲಂಬನೆ". ಸಮಾಜವಾದವು ಗಾಂಧೀಜಿ ಅವರಿಗೆ ಸಹಜವಾಗಿ ಬಂದುದಾಗಿತ್ತು. ಬ್ರಿಟಿಷರ ಶೋಷಣಾತ್ಮಕ ಯೋಜನೆಯನ್ನು ಅವರು ಬಹಳ ಸ್ಪಷ್ಟವಾಗಿ ಗುರುತಿಸಿದ್ದರು. ಸ್ವಾತಂತ್ರ್ಯ ಹೋರಾಟಕ್ಕೆ ಅವರು ಸ್ವದೇಶಿ ಮತ್ತು ಅಸಹಕಾರಗಳನ್ನು ಸಾಧನವಾಗಿ ಬಳಸಿದರು. ಜನಸಮುದಾಯದ ನಿರುದ್ಯೋಗ ಮತ್ತು ಬಡತನಗಳಿಗೆ ಯೂರೋಪಿಯನ್ ಉಡುಪೇ ಮೂಲ ಕಾರಣ ಎಂದು ಗಾಂಧೀಜಿ ಅವರು ಪ್ರತಿಪಾದಿಸಿದರು. ಅವರು ರಾಷ್ಟ್ರೀಯ ಸ್ವಾವಲಂಬನೆಗೆ ಶಾಂತಿಯುತ ನಾಗರಿಕ ಪ್ರತಿರೋಧವಾಗಿ ಖಾದಿಯನ್ನು ಬಳಸಲು ಪ್ರೇರೇಪಿಸಿದರು. ಗಾಂಧಿ ಅವರು ಚಂಪಾರಣ್‌ದಲ್ಲಿ ರೈತ ಸತ್ಯಾಗ್ರಹ ಮತ್ತು ಖೇಡಾದಲ್ಲಿ ಬ್ರಿಟಿಷ್ ಸರ್ಕಾರದ ಬೆಂಬಲಿತ, ಕಾರ್ಖಾನೆ ಮಾಲೀಕರ ವಿರುದ್ಧ ಶೋಷಣಾತ್ಮಕ ತೆರಿಗೆಯನ್ನು ಮುಕ್ತಾಯಗೊಳಿಸಲು ಸತ್ಯಾಗ್ರಹದ ನೇತೃತ್ವ ವಹಿಸಿದ್ದರು. ಗಾಂಧೀಜಿ ಅವರಿಗೆ ನೈತಿಕತೆ ಅತ್ಯಂತ ಮಹತ್ವ ಪೂರ್ಣವಾದುದಾಗಿತ್ತು. ಭಾರತದ ಆಧ್ಯಾತ್ಮಿಕ ಶಕ್ತಿಯನ್ನು ಪರಿಗಣಿಸಿ, ಅವರು ಅದನ್ನು ಅಪಾರವಾಗಿ ನಂಬಿದ್ದರು. ಗಾಂಧೀಜಿ ಅವರ "ಆಶ್ರಮ"ದ ಕಲ್ಪನೆ ಗಮನಿಸಬೇಕಾದಂಥಹದು. ದಕ್ಷಿಣ ಆಫ್ರಿಕಾದಲ್ಲಿ ಅವರು'ಪೋನಿಕ್ಸ್ ಆಶ್ರಮ'ವೆಂಬ ಆಶ್ರಮವಾಸ ಪ್ರಾರಂಭಿಸಿದವರಲ್ಲಿ ಅಗ್ರಗಣ್ಯರಾಗಿದ್ದಾರೆ.

ಮುಂದುವರಿಯುವುದು...

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಮಾದಕ ವಸ್ತುಗಳ ಮಾಯಾಜಾಲ

ಡಾ. ಸಿ.ಆರ್. ಚಂದ್ರಶೇಖರ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಕೆಲವರಿಗೆ ಈ ಔಷಧ ಸೇವನೆಯಿಂದ ಅಹಿತ ಅನುಭವಗಳೂ (ಬ್ಯಾಡ್ ಟ್ರಿಪ್ ಎಂದು ಕರೆಯಲಾಗುತ್ತದೆ) ಉದಾಹರಣೆಗೆ, ಮೂಗಿನ ತುದಿ, ಮೈಕ್ಕೆ ವಿಪರೀತ ನವೆಯಾಗುವುದು, ಭಯ, ವಾಕರಿಕೆ, ವಾಂತಿಯಾಗಬಹುದು. ಕೆಲವು ಸಲ ತೀವ್ರ ಅಲರ್ಜಿ ಪ್ರತಿಕ್ರಿಯೆ ಕಂಡುಬಂದು, ವ್ಯಕ್ತಿ ಪ್ರಜ್ಞೆತಪ್ಪಿ ಬೀಳಬಹುದು, ಸಾಯಲೂಬಹುದು. ಅಫೀಮನ್ನು ಪದೇ ಪದೇ ಉಪಯೋಗಿಸುವವರಲ್ಲಿ ಜಡತ್ವ, ಎಲ್ಲದರಲ್ಲೂ ನಿರಾಸಕ್ತಿ, ಆಲೋಚಿಸಲು ಆಗದಿರುವಿಕೆ, ಮರೆವು ಇತ್ಯಾದಿ ತೊಂದರೆಗಳೂ ಕಾಣಿಸಿಕೊಳ್ಳುತ್ತವೆ. ಅಫೀಮು ನರಮಂಡಲವನ್ನು ಮಂಕಾಗಿಸುವುದರಿಂದ ಶ್ವಾಸಕೋಶಗಳ ಕ್ರಿಯೆಗೆ ಅಡ್ಡಿಯುಂಟಾಗಿ, ಉಸಿರಾಟ ನಿಲ್ಲುವುದೇ ಸಾವಿಗೆ ಕಾರಣವಾಗುತ್ತದೆ.

ಭ್ರಾಮಕ ಸುಖಾನುಭವ : ಹೆರಾಯಿನ್ ಅನ್ನು ನೇರವಾಗಿ ರಕ್ತನಾಳದೊಳಕ್ಕೆ ಚುಚ್ಚಿಕೊಂಡು ತೆಗೆದು ಕೊಂಡಾಗ, ಒಂದು ಬಗೆಯ ಭ್ರಾಮಕ ಸುಖಾನುಭವವಾಗುತ್ತದೆ ಎನ್ನಲಾಗಿದೆ. ಕೆಳಹೊಟ್ಟೆಯಲ್ಲಿ ಸಂಭೋಗದ ಅಂತ್ಯದಲ್ಲಿ ಆಗುವ ಹಾಗೆ ಸುಖದ ಅನುಭವವಾಗಿ ಅದಕ್ಕಾಗಿ ವ್ಯಕ್ತಿ ಹಾತೊರೆಯುವಂತಾಗುತ್ತದೆ. ಆದರೆ ಹೆರಾಯಿನ್ ಲೈಂಗಿಕ ನಿರ್ವಹಣಾ ಶಕ್ತಿಯನ್ನು ಕುಗ್ಗಿಸುತ್ತದೆ. ಕ್ರಮೇಣ ಷಂಡತನವನ್ನು ತರುತ್ತದೆ ಎನ್ನುವುದನ್ನು ಈ ಮಂದಿ ಗಮನಿಸುವುದಿಲ್ಲ. ಗಮನಿಸುವ ವೇಳೆಗೆ ಆಗಬೇಕಾದ ಅನಾಹುತವೆಲ್ಲಾ ನಡೆದೇ ಹೋಗಿರುತ್ತದೆ ಹೆರಾಯಿನ್ ಅನ್ನು ತಾವೇ ಇಂಜೆಕ್ಟ್ ಮಾಡಿಕೊಳ್ಳುವವರು ಅನೇಕ ಬಗೆಯ ಪ್ರಾಣಾಂತಿಕ ರೋಗಗಳಿಗೆ ತುತ್ತಾಗುವುದನ್ನು ನಾವು ಕಾಣುತ್ತೇವೆ. ಸಿರಂಜನ್ನು ಶುದ್ಧೀಕರಿಸದೆ, ಒಂದೇ ಸೂಜಿಯಲ್ಲಿ ಹಲವಾರು ಜನ ಔಷಧವನ್ನು ಚುಚ್ಚಿ ಕೊಳ್ಳುವುದು, ದೇಹದ ಸ್ವಚ್ಛತೆ – ಪೋಷಣೆಗೆ ಗಮನ ಕೊಡದಿರುವುದರಿಂದ ಇವರಲ್ಲಿ ಧನುರ್ವಾಯು (ಟೆಟನಸ್ – ಸಾವು ನಿಶ್ಚಿತ) ಲಿವರ್ ಉರಿಯೂತ, ಹೃದಯದ ಸೋಂಕು, ಕ್ಷಯ, ವಿದುಳ ಪೊರೆ ಉರಿತ (ಮೆನಿಜ್ಞೈಟಿಸ್) ರಕ್ತ ನಂಜೇರುವಿಕೆ, ಫಿಟ್ಸ್ ಶ್ವಾಸಕೋಶಗಳ ಕ್ಯಾನ್ಸರ್ ಹಾಗೂ ಮಾರಣಾಂತಿಕ 'ಏಯ್ಡ್ಸ್' ರೋಗ ಕಂಡುಬರಬಹುದು. ಈ ರೀತಿಯಲ್ಲಿ ಹೆರಾಯಿನ್ ಬ್ರೌನ್ ಶುಗರ್ ವ್ಯಕ್ತಿಯ ಪಾಲಿಗೆ ಸ್ವಂತ ವಿಷವಾಗಬಲ್ಲದು. ಈ ವಸ್ತುವಿಗೆ ನಮ್ಮ ದೇಹ ಅದೆಷ್ಟು ವೇಗವಾಗಿ ಎಷ್ಟು ತೀವ್ರತರವಾದ 'ತಾಳಿಕೆ' (ಟಾಲರೆನ್ಸ್) ಯನ್ನು ಬೆಳೆಸಿಕೊಳ್ಳುತ್ತದೆ ಎಂಬುದು ವಿಜ್ಞಾನಿಗಳಿಗೂ ಅಚ್ಚರಿಯನ್ನುಂಟುಮಾಡಿದೆ. ಈ ದಿನ ಒಂದು ಗ್ರಾಂಗೆ ದೇಹ ಪ್ರತಿಕ್ರಿಯಿಸಿದರೆ, ಕೆಲವೇ ವಾರಗಳಲ್ಲಿ ಅದು ಒಂದು ನೂರು ಗ್ರಾಂ ವಸ್ತುವಿಗೂ ಪ್ರತಿಕ್ರಿಯಿಸುವುದಿಲ್ಲ.

ಮುಂದುವರಿಯುವುದು...

ಪ್ರಾಕೃತಿಕ ಆಹಾರದ ಮಹತ್ವ

ಡಾ. ವಸುಂಧರಾ ಭೂಪತಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಪರಿಸರ ಸ್ನೇಹಿಯಾದ ಆಹಾರ ಸೇವನೆ

"ಅಡಗ ತಿಂಬರು, ಕಣಕದಡಿಗೆ ಇರಲಿಕ್ಕೆ
ಸುರೆಯ ಕುಡಿದವರು, ಹಾಲಿರಲಿಕ್ಕೆ
ಮುಕ್ಕುವರು ಭಂಗಿಯ, ಸಕ್ಕರೆ ಇರಲಿಕ್ಕೆ"

ಎಂದು ಜೇಡರ ದಾಸಿಮಯ್ಯ, ಕಟುವಾಗಿ ಛೇಡಿಸುತ್ತಾರೆ.

ನಾವು ಆಹಾರವನ್ನು ಆಯ್ಕೆ ಮಾಡಿಕೊಳ್ಳುವಾಗ ಸಾಮಾನ್ಯವಾಗಿ ಪರಿಸರದ ಬಗ್ಗೆ ಹೆಚ್ಚು ಗಮನ ಕೊಡುವುದಿಲ್ಲ. ಆದರೆ ಪರಿಸರ ಸ್ನೇಹಿ ಆಹಾರವನ್ನು ಸೇವಿಸುವುದು ಭವಿಷ್ಯದ ತಲೆಮಾರಿಗೂ ಆಹಾರ ಉಳಿಸುವ ನಿಟ್ಟಿನಲ್ಲಿ ಅತೀ ಅಗತ್ಯವಾಗಿದೆ. ಕೆಲವು ಆಹಾರವು ಹೆಚ್ಚು ಪರಿಸರ ಸುಸ್ಥಿರವಾದ ಆಯ್ಕೆ ಎನ್ನುವುದನ್ನು ನೀವು ಕೇಳಿರಬಹುದು. ಆದರೆ ವಾಸ್ತವದಲ್ಲಿ ಅದರ ಅರ್ಥವೇನು? ನಿಮ್ಮ ಆಹಾರದ ಆಯ್ಕೆಗಳು ಪರಿಸರಕ್ಕೆ ಎಷ್ಟು ಪೂರಕವಾಗಿರುತ್ತದೆ ಎನ್ನುವುದರ ಕುರಿತಾಗಿ ತಿಳಿದುಕೊಳ್ಳಲು ನಿಮಗೆ ಆಹಾರದ ಮೂಲ ಪದ್ಧತಿಯ ಅರಿವು ಇರಬೇಕು. ಕೃಷಿ ಭೂಮಿಯಲ್ಲಿ ಆಹಾರ ಹೇಗೆ ತಯಾರಾಗುತ್ತದೆ ಎನ್ನುವ ಬಗ್ಗೆಯು ತಿಳಿದುಕೊಂಡಿರಬೇಕು. ಈ ವಿವರಗಳನ್ನು ತಿಳಿದುಕೊಂಡಲ್ಲಿ ನೀವು ಇಂದಿನ ದಿನಗಳಲ್ಲಿ ಕಾಣುವ ಅತೀ ಕ್ಲಿಷ್ಟವಾದ ಆಹಾರ ಲೇಬಲ್‌ಗಳ ಕುರಿತೂ ಹೆಚ್ಚು ಜ್ಞಾನ ಸಂಪಾದಿಸಿಕೊಳ್ಳಬಹುದು. ನಾವು ಸಾಮಾನ್ಯವಾಗಿ ಮಾರುಕಟ್ಟೆಗಳಲ್ಲಿ ಲಭ್ಯವಾಗುವ ಆಹಾರ ಪದಾರ್ಥಗಳ ಜೊತೆಯಲ್ಲಿ, ಸಾವಯವ, ಜೈವಿಕ, ಕುಲಾಂತರಿ, ಸುಸ್ಥಿರ ಮೊದಲಾದ ಹಣೆಪಟ್ಟಿಗಳನ್ನು ನೋಡುತ್ತೇವೆ. ಆದರೆ ಅವುಗಳ ವಿಶೇಷತೆ ಏನು ಮತ್ತು ಏನನ್ನು ಬಳಸಿದಲ್ಲಿ ಆರೋಗ್ಯಕರ ಎನ್ನುವ ಬಗ್ಗೆ ಯೋಚಿಸಲು ಹೋಗುವುದಿಲ್ಲ.

ಸಾವಯವ : ಸಾವಯವ ಎಂಬ ಹಣೆಪಟ್ಟಿ ಪಡೆದುಕೊಂಡಿರುವ ಆಹಾರ ಪದಾರ್ಥಗಳನ್ನು ಯಾವುದೇ ಕೃತಕ ಕೀಟನಾಶಕಗಳನ್ನು ಅಥವಾ ಕೃತಕ ಗೊಬ್ಬರಗಳನ್ನು ಬಳಸದೆ ಉತ್ಪಾದಿಸಲಾಗುತ್ತದೆ. ಇದಕ್ಕೆ ಪೂರಕವಾಗಿ ಮಣ್ಣಿನ ಸವಕಳಿಯನ್ನು ಕಂಪೋಸ್ಟಿಂಗ್ ಹಾಗೂ ಬೆಳೆ ಆವರ್ತನ ಅಥವಾ ಸರದಿ ಕೃಷಿಯ ಮೂಲಕ ನಿಯಂತ್ರಿಸಲಾಗುತ್ತದೆ. ಕೀಟಗಳು ಅಥವಾ ರೋಗಗಳನ್ನು ಪ್ರಾಕೃತಿಕ ವಿಧಾನಗಳಲ್ಲಿ ಅಥವಾ ಯಾಂತ್ರಿಕವಾಗಿ ನಿಯಂತ್ರಿಸಲಾಗುತ್ತದೆ. ಹೀಗಾಗಿ ಸಾವಯವ ರೂಪದಲ್ಲಿ ಬೆಳೆದ ತರಕಾರಿಗಳು ಅಥವಾ ದವಸ ಧಾನ್ಯಗಳಲ್ಲಿ ಸಿಂಥೆಟಿಕ್ ರಾಸಾಯನಿಕ ಕಶ್ಮಲಗಳ ಪ್ರಭಾವ ಕಡಿಮೆ ಇರುತ್ತದೆ.

ಮುಂದುವರಿಯುವುದು...



ಆರೋಗ್ಯಕ್ಕಾಗಿ ಬ್ರಾಹ್ಮಿ / ಒಂದೆಲಗ.

– ಡಾ. ಸಂದೀಪ್ : 'ಆರೋಗ್ಯ ಧಾಮ" ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರಗಳು

ತೋಟ, ಗದ್ದೆಗಳಲ್ಲಿ ಬಳ್ಳಿಯಂತೆ ನೆಲದಲ್ಲಿ ಹಬ್ಬಿ ಬೆಳೆಯುವುದು. ಈ ಸಸ್ಯ ಎಲೆ ಒಂದಾದರೂ ಗುಣ ಹಲವು ಎಂಬಂತೆ ಆರೋಗ್ಯ ವರ್ಧಕವಂತೂ ಹೌದು. ಸಾಮಾನ್ಯವಾಗಿ ಒಂದೆಲಗವು ಹಚ್ಚಹಸುರಿನಿಂದ ಉರುಟುರುಟಾದ ಎಲೆ ಹೊಂದಿರುತ್ತದೆ. ಏಷ್ಯಾ, ಮತ್ತು ದಕ್ಷಿಣ ಆಫ್ರಿಕಾದಲ್ಲಿ ಸಿಗುತ್ತವೆ. ಸುಶ್ರುತ ಸಂಹಿತೆಯಲ್ಲಿಯೂ ಒಂದೆಲಗದ ಉಲ್ಲೇಖವಿದ್ದು, ಆಹಾರ, ಬ್ರಾಹ್ಮಿ ಔಷಧವಾಗಿಯೂ ಇದನ್ನು ಉಪಯೋಗಿಸಲಾಗುತ್ತದೆ. ವೈಜ್ಞಾನಿಕವಾಗಿ 'ಸೆಂಟಿಲ್ಲಾ ಏಸಿಯಾಟಿಕ್' ಎನ್ನುವರು. ಮತ್ತು ವಿವಿಧ ಭಾಷೆಗಳಲ್ಲಿ ಬೇರೆ ಬೇರೆ ಹೆಸರನ್ನು ಹೊಂದಿದೆ. ಕನ್ನಡದಲ್ಲಿ ಒಂದೆಲಗ, ಸಂಸ್ಕೃತದಲ್ಲಿ ಮಂಡೂಕಪರ್ಣಿ, ಹಿಂದಿಯಲ್ಲಿ ಬ್ರಾಹ್ಮಿ, ತುಳುವಿನಲ್ಲಿ ತಿಮರೆ, ಆಡುಭಾಷೆಯಲ್ಲಿ ಉರಗೆ ಇತ್ಯಾದಿ ಹೆಸರುಗಳಿಂದಲೂ ಕರೆಯಲಾಗುತ್ತದೆ. ಒಂದೆಲಗ ಔಷಧಿಯ ಗುಣಗಳು ವೈಜ್ಞಾನಿಕವಾಗಿಯೂ ಸಾಬೀತಾಗಿದೆ. ಇದರಲ್ಲಿರುವ ಎ ಮತ್ತು ಬಿ ರಾಸಾಯನಿಕವು ಮೆದುಳಿನಲ್ಲಿರುವ ನೆನಪು ಶಕ್ತಿಗೆ ಸಂಬಂಧಿಸಿದ ಜೀವಕೋಶಗಳಿಗೆ ಪುನಶ್ಚೇತನ ನೀಡುವುದು. ಒಂದೆಲಗದ ಬಳ್ಳಿ, ಎಲೆ, ಕಾಂಡ ಇವುಗಳನ್ನು ಚಟ್ನಿ, ತಂಬುಳಿ, ಹಾಗೂ ತಲೆಗೆ ಹಚ್ಚುವ ಎಣ್ಣೆಯ ತಯಾರಿಕೆಗಾಗಿ ಉಪಯೋಗವಾಗುವ ಗಿಡಮೂಲಿಕೆಯಾಗಿದೆ. ಒಂದೆಲಗ ಅಥವಾ ಉರಗದ ಸೊಪ್ಪಿನ ರಸವನ್ನು ಒಂದು ಚಮಚ ಶುದ್ಧ ಜೇನು ತುಪ್ಪ ಬೆರೆಸಿ ನಿತ್ಯವೂ ಮಕ್ಕಳಿಗೆ ನೀಡಿದರೆ ಮಕ್ಕಳ ಸ್ಮರಣಶಕ್ತಿ ವರ್ಧನೆ, ಮನಸ್ಸನ್ನು ಶಾಂತಗೊಳಿಸುವುದು. ಏಕಾಗ್ರತೆ, ಹೆಚ್ಚಿಸಲು ಹಾಗೂ ಸಾತ್ವಿಕತೆ ವರ್ಧಿಸಲು ಒಂದೆಲಗ ಸಹಕಾರಿ ಅಲ್ಲದೆ ಜೀರ್ಣಕ್ರಿಯೆಯನ್ನೂ ಉತ್ತಮಗೊಳಿಸಿ ರಕ್ತಹೀನತೆಯನ್ನೂ ನಿವಾರಿಸುತ್ತದೆ. ಒಂದೆಲಗ ಸೊಪ್ಪುನ್ನು ಅರೆದು ಅದರ ರಸವನ್ನು ಒಂದು ಲೋಟ ಬಿಸಿ ಹಾಲಿಗೆ ಸೇರಿಸಿ ದಿನಕ್ಕೆರಡು ಬಾರಿ ಸೇವಿಸುತ್ತಿದ್ದರೆ ಮಹಿಳೆಯರ ಬಿಳಿ ಸೆರಗಿನ ಸಮಸ್ಯೆ ದೂರವಾಗುತ್ತದೆ. ನೆರಳಿನಲ್ಲಿ ಚೆನ್ನಾಗಿ ಒಣಗಿಸಿದ ಒಂದೆಲಗ ಸೊಪ್ಪುನ್ನು ಚೆನ್ನಾಗಿ ಕುಟ್ಟಿ ಪುಡಿಮಾಡಿ ಇಡಬೇಕು. ಪ್ರತಿದಿನ ಒಂದು ಚಮಚದಷ್ಟು ಚೂರ್ಣವನ್ನು ಸಮಪ್ರಮಾಣದ ಕಲ್ಲುಸಕ್ಕರೆ ಪುಡಿಯೊಂದಿಗೆ ಬರಿ ಹೊಟ್ಟೆಯಲ್ಲಿ ಸೇವಿಸಿದರೆ ದೇಹಕ್ಕೆ ಪುಷ್ಟಿ, ಶಕ್ತಿ ದೊರೆಯುತ್ತದೆ.

ಮೂರು – ನಾಲ್ಕು ಚಮಚದಷ್ಟು ಒಂದೆಲಗ ಸೊಪ್ಪಿನ ರಸಕ್ಕೆ ಒಂದು ಚಮಚ ಜೇನುತುಪ್ಪ ಸೇರಿಸಿ ಮೂರು – ನಾಲ್ಕು ಬಾರಿ ಸೇವಿಸುವುದರಿಂದ ಸ್ವರದ ಸಮಸ್ಯೆ ನಿವಾರಣೆಯಾಗುತ್ತದೆ. ಕೆಮ್ಮು ದಮ್ಮು ನಿವಾರಣೆಗೆ ಒಂದೆಲಗ ಸೊಪ್ಪುನ್ನು ಶುಂಠಿ ಮತ್ತು ಕಾಳುಮೆಣಸನ್ನು ಜಜ್ಜಿ ಹಾಕಿ ಅದಕ್ಕೆ ಸ್ವಲ್ಪ ಬೆಲ್ಲ ಸೇರಿಸಿದ ಕಷಾಯವನ್ನು ಕುಡಿಯಬೇಕು. ಎಳ್ಳೆಣ್ಣೆಯನ್ನು ಒಂದೆಲಗದ ರಸದೊಂದಿಗೆ ಬೆರಸಿ ಕುದಿಸಿದ ತೈಲವನ್ನು ತಣಿಸಿ, ಶೋಧಿಸಿ ತಲೆಗೆ ಹಚ್ಚಿಕೊಳ್ಳತ್ತಿದ್ದರೆ ದೃಷ್ಟಿಶಕ್ತಿ ಹೆಚ್ಚುತ್ತದೆ. ತೀವ್ರವಾದ ತಲೆನೋವು ಕಾಡುತ್ತಿರುವಾಗ ಒಂದೆಲಗ ಸೊಪ್ಪುನ್ನು ಅರೆದು ರಸವನ್ನು ತೆಗೆದು ಹಣೆಗೆ ಲೇಪಿಸಿಕೊಳ್ಳಬೇಕು. ತೆಂಗಿನೆಣ್ಣೆಗೆ ಒಂದೆಲಗದ ರಸವನ್ನು ಮಿಶ್ರಮಾಡಿ ತಲೆಗೆ ಹಚ್ಚಿಕೊಂಡರೆ ತಲೆ ಕೂದಲಿನ ಆರೊಗ್ಯಕ್ಕೆ ಒಳ್ಳೆಯದು. ಮಲಬದ್ಧತೆಯಿಂದ ಬಳಲುವವರು ಒಂದೆಲಗದಿಂದ ತಯಾರಿಸಿದ ಪಲ್ಯ ಅಥವಾ ಚಟ್ನಿ ಸೇವಿಸಿದರೆ ಉತ್ತಮ. ಅಲ್ಲದೆ ಚಾ, ಕಾಫಿಯ ಬದಲಾಗಿ ಒಂದೆಲಗದ ಪುಡಿಯಿಂದ ಕಷಾಯ, ಬೇಸಗೆಯಲ್ಲಿ ಇದರ ಜ್ಯೂಸ್ ಆರೋಗಕ್ಕೆ ಹಿತಕರ. ನಿದ್ರಾಹೀನತೆ ಇರುವವರು ಒಂದೆಲಗ ಮಿಶ್ರಿತ ಎಣ್ಣೆಯನ್ನೂ ತಲೆಗೆ ಹಾಕಿ ಒಂದೆಲಗದ ರಸವನ್ನು ರಾತ್ರಿ ಊಟದ ನಂತರ ಸೇವಿಸಬೇಕು.



ಏಪ್ರಿಲ್ 3, 2021ರಂದು ಛತ್ತಿಸ್‌ಗಡದಲ್ಲಿ ಮಾವೋ ನಕ್ಸಲರ ದಾಳಿಗೆ ತುತ್ತಾಗಿ ಭಾರತದ ವೀರ ಯೋಧರಿಗೆ ಗಾಂಧಿ ಭವನವು ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

FEVER!

Condensed form of 'Fever Book" - 1974 & Published by Hart Davis Macgibbos, P.O. - 9 St Albans, England : by John Fuller

continued from the previous edition...

Today the threat of plague seems unreal. Yet In January 1969 an unknown killer struck in Nigeria virus of such overwhelming power that in this age of jet travel it could trigger global calamity, In a dangerous race against time, a team of researchers risked their lives to track the virus to its source and find a vaccine that would be able to conquer it. This is the story of that quest, one of the most fascinating and Inspiring medical revelations of our time

After convalescing, Casals returned to his job. In New York, John Frame pursued a hunch that Lassa fever antibodies, far from being confined to Nigeria, might well be found in the blood of missionaries who had recovered from "African Fevers in other countries of the vast Sudan. He started following up several cases from his files that sounded suspiciously like Lassa fever. In Africa, the search for a possible carrier continued. But, despite the alert, Lassa fever suddenly seemed to vanish. Throughout that summer of 1969, no were reported. new casesInstead, in October, yellow fever broke out in Jos and surrounding areas. It was a tragic epidemic, lasting several months, with thousands of cases and uncounted deaths. Work on the Lassa virus continued against the chilling prospect of what a virus can do to an unvaccinated population in a short time. Towards the end of November, the Thanksgiving holiday brought a welcome respite from the research at the laboratory. Jordi Casals was glad of the break, for he still tired easily. On his way out, he met Juan Roman, a young lab technician who, with his wife, was working on other projects.

Roman planned to drive to Pennsylvania with his wifefor a family visit, and the two men wished each other a happy holiday. On Monday, the Romans did not return. Sonja Buckley, who had been teaching Roman's wife to be an assistant in tissue cultures, thought this curious. Then, just before lunch, a doctor telephoned to say that Juan had been confined to bed with a mild virus infection. After she had rung off, the possibility of Lassa fever crossed Sonja's mind. She immediately dismissed the thought. chiding herself for over-reacting. Juan's job had nothing to do with the Lassa virus. He worked in an entirely separate laboratory But by the end of the week, Juan Roman and his wife still had not returned to Yale. The following week came another telephone call. Roman was in the hospital. His condition was not critical, but puzzling. JordiCasals decided he had better have a look at his colleague. By the time Casals reached the hospital, Roman was in critical condition with typhuslike symptoms. Casals took a blood sample and hurried back to Yale to get it checked out on tissue cultures and mice. But nothing that came out of the tests would be of any use to Juan Roman. Within two days, he was dead. A few days later, the results of the tests were determined. Roman's system had been riddled with Lassa virus. The news stunned everybody involved. The exact channel of infection was impossible to trace. Juan Roman had never touched anything remotely connected with Lassa virus. He had never entered Casals' special isolation room. The reaction was swift and unequivocal. All research at Yale involving live Lassa virus stopped, and all live Lassa specimens were shifted to the hot laboratory in Atlanta.

To be continued...

ಪುಸ್ತಕ ಪರಿಚಯ : ಹೆಡ್ಮಾಸ್ಟರ್ ಕೆಂಗರಾಮಯ್ಯ



– ಡಾ. ಎಸ್.ರಾಮಲಿಂಗೇಶ್ವರ (ಸಿಸಿರಾ), ಕೃತಿಕಾರರು : ಡಾ. ನಂದಿಶ್ವರ್

ಕರ್ನಾಟಕದ ಜನ ಚಳುವಳಿಯ ಭಾಗಿವಾಗಿದ್ದವರು ಮತ್ತು ಮಾಜಿ ಅಡ್ವಕೇಟ್ ಜನರಲ್ ಆಗಿದ್ದ ಪ್ರೊ. ರವಿವರ್ಮಕುಮಾರ್ ಅವರ ಸದಾಶಯ ಮತ್ತು ಪ್ರಯತ್ನದಿಂದ ಅವರ ತಂದೆ "ಹೆಡ್‌ಮಾಸ್ಟರ್ ಕೆಂಗರಾಮಯ್ಯ" ಕೃತಿ ಪ್ರಕಟಗೊಂಡಿದೆ. ಪ್ರೊ. ಬರಗೂರು ರಾಮಚಂದ್ರಪ್ಪ ಮುನ್ನುಡಿ ಬರೆಯುತ್ತಾ "ತಾವೂ ಒಬ್ಬ ಪ್ರೊಫೆಸರ್ ಆಗಿ ಮೇಷ್ಟ್ರುಗಳಿಗಿದ್ದ ಘನತೆ, ಗೌರವಗಳನ್ನು ಗ್ರಾಮೀಣ ಪ್ರದೇಶದ ಹಿನ್ನೆಲೆಯಲ್ಲಿ ಪ್ರೀತಿಯ ಮೇಷ್ಟ್ರು ಅನ್ನಿಸಿಕೊಳ್ಳುವುದು ಸುಲಭವಲ್ಲದ ಸ್ಥಾನವನ್ನು ಕೆಂಗರಾಮಯ್ಯ ಪಡೆದ ಕಾರ್ಯಕ್ಷಮತೆ ಫಲಿತವಾಗಿದೆ" ಎಂದಿದ್ದಾರೆ. ಕೃತಿಕಾರರಾದ ಡಾ. ನಂದೀಶ್ ಅವರು ಶ್ರೀ ಕೆಂಗರಾಮಯ್ಯ ಅವರ ಆದರ್ಶ ವ್ಯಕ್ತಿತ್ವವನ್ನು ಬಿಡಿಬಿಡಿಯಾಗಿ ಕಟ್ಟಿಕೊಟ್ಟಿರುವ ರೀತಿ ಇಂದಿನ ತಲೆಮಾರಿನ ಜನತೆ, ಆದರ್ಶಗಳನ್ನು ಇಟ್ಟುಕೊಂಡು ಬದುಕಿದರೆ ಹೇಗೆ ತಮ್ಮನ್ನು ಜೀವಂತಿಕೆಯಾಗಿ ಉಳಿಸಿಕೊಳ್ಳಲು ಸಾಧ್ಯ ಎಂಬುದನ್ನು ಅರ್ಥೈಸುವ ಕಾರ್ಯ ಮಾಡಿದ್ದಾರೆ. ಜಾತಿಪದ್ಧತಿಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ, ಸರ್ವಜನರನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಅಧ್ಯಾಪಕರಾಗಿ, ಹೆಡ್ಮಾಸ್ಟರ್ ಆಗಿ ಕಾರ್ಯನಿರ್ವಹಿಸಿದ ಕೆಂಗರಾಮಯ್ಯ ಅವರು ಎಲ್ಲರಿಗೂ ಮಾದರಿಯಾಗಿದ್ದು, ಆದರ್ಶವಾಗಿದ್ದಾರೆ. ಕೊನೆಕೊನೆಗೆ ಸ್ವಜಾತಿ ಕಡೆಗೆ ಹೊರಳಿದರೂ, ಕೊನೆಯವರೆಗೂ ಅವರು ತಮ್ಮ ಜಾತ್ಯಾತೀತ ನಿಲುವನ್ನು ಬಿಟ್ಟುಕೊಡಲಿಲ್ಲ. ಎಂ.ಎಚ್. ನಾಗರಾಜು ಅವರ ಬೆನ್ನುಡಿಯೂ ಕೂಡ ಈ ಕೃತಿಯ ಮಹತ್ವವನ್ನು ಸಾರುತ್ತದೆ. ಗಾಂಧೀ, ಸ್ವಾಮಿ ವಿವೇಕಾನಂದ ಹಾಗೂ ಅಂಬೇಡ್ಕರ್ ಅವರ ಸಾಮಾಜಿಕ ಸಂಕ್ರಮಣಗಳು ಹೆಡ್‌ಮಾಸ್ಟರ್ ಅವರ ಮನಸ್ಸಿನೊಳಗೆ ಅಚ್ಚೊತ್ತಿದ್ದರ ಪರಿಣಾಮವಾಗಿ ಈ ಕೃತಿಯು ಸೂಕ್ಷ್ಮ ಸಂವೇದನೆಯ ಒಳನೋಟವನ್ನು ಎಳೆಎಳೆಯಾಗಿ ಬಿಡಿಸಿಡುವ ಡಾ. ನಂದೀಶ್ವರ್ ಅವರ ಸರಳ, ಸುಂದರ ಲೇಖನಿಯ ಹರವು ಎಲ್ಲರಿಗೂ ಪ್ರಿಯವಾಗುತ್ತದೆ. ಹೆಡ್‌ಮಾಸ್ಟರ್ ಒಬ್ಬ ಸಮಾಜ ಸುಧಾರಕನಾಗಿ, ಪತ್ರಕರ್ತನಾಗಿ, ವಾಗ್ಮಿಯಾಗಿ, ಥಿಯಾಸೊಫಿಕಲ್ ಸೊಸೈಟಿ ಚಳವಳಿಕಾರನಾಗಿ, ಶಿಕ್ಷಣ ಸಂಸ್ಥೆ–ಶಾಲೆಗಳ ಸ್ಥಾಪಕರಾಗಿ, ಸಹಕಾರಿ ಚಳವಳಿಗಾರರಾದ ಯಶೋಗಾಥೆಯನ್ನು ಸಮಾಜದ ಕೈಗನ್ನಡಿಯಾಗಲು, ಇತರರಿಗೆ ಪ್ರೇರಣೆಯಾಗಲು, ಈ ಗ್ರಂಥ ಪ್ರೇರೇಪಿಸುತ್ತದೆ. ಲೇಖಕರಿಗೆ ಅಭಿನಂದನೆಗಳು, ಶುಭವಾಗಲಿ. ಪ್ರೊ. ರವಿವರ್ಮಕುಮಾರ್ ಪ್ರಯತ್ನದಿಂದಾಗಿ ಒಡಮೂಡಿದ ಈ ಕೃತಿ ಅತ್ಯುತ್ತಮ ಜೀವನ ಚರಿತ್ರೆಯಾಗಿದೆ.

ಪತ್ರ ವಿಭಾಗ : ಓದುಗರ ಪ್ರತಿಸ್ಪಂದನ

ಬಾಪು ಪ್ರಪಂಚ ಮಾರ್ಚ್ ಸಂಚಿಕೆಯು ಅರ್ಥಪೂರ್ಣ ಮಾಹಿತಿಯನ್ನು ಹೊತ್ತು ತಂದಿದೆ. ಇಂದಿರಾ ಕೃಷ್ಣಪ್ಪ ಅವರು ತಮ್ಮ ಸಂಪಾದಕೀಯದಲ್ಲಿ ಕೋವಿಡ್‌ನಿಂದಾಗಿ ನಿರುದ್ಯೋಗ, ಸದುಪಯೋಗವಾಗದ ಆಹಾರ, ಕಾರ್ಮಿಕರು ಹಾಗು ಮಹಿಳೆಯರ ಬವಣೆ ಅದಕ್ಕೆ ಸ್ಪಂದಿಸದ ಸರ್ಕಾರಗಳ ನಿರ್ಧಾರಗಳನ್ನು ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ. ಅವರಿಗೆ ಧನ್ಯವಾದಗಳು.

ಡಾ. ವಿ.ಎಸ್. ಪಾರ್ವತಿ

ಮಾರ್ಚ್ ತಿಂಗಳ ಬಾಪು ಪ್ರಪಂಚ ಸಂಚಿಕೆ ವಿಷಯಗರ್ಭಿತವಾದ ಲೇಖನಗಳನ್ನು ಹೊತ್ತು ತಂದಿದೆ. ರಾಮಾ ಜೋಯಿಸ್, ಮಹಿಳಾ ದಿನಾಚರಣೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಆರೋಗ್ಯಕ್ಕೆ ಸಂಬಂಧಿಸಿದ ಲೇಖನಗಳಲ್ಲಿನ ಮಾಹಿತಿಯು ಓದುಗರಿಗೆ ಉಪಯುಕ್ತವಾದುದಾಗಿದೆ.

ಮಹೇಶ್, ಬೆಂಗಳೂರು

ನಾಡೋಜ ಡಾ.ವೂಡೇ ಪಿ. ಕೃಷ್ಣ ಅವರ 'ರಾಮನ್ ಎಫೆಕ್ಟ್' ಅವಿಷ್ಕಾರದ ರಾಷ್ಟ್ರೀಯ ವಿಜ್ಞಾನ ದಿನ ಫೆಬ್ರವರಿ 1928, ಸರ್. ಸಿ. ವಿ. ರಾಮನ್ ಅವರ ಬಗ್ಗೆ ಪರಿಚಯ ಮಾಡಿಕೊಡುವ ಈ ಲೇಖನ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಆಚರಣೆಗೆ ಸೂಕ್ತವಾಗಿದೆ. ಮುಂದಿನ ಸಂಚಿಕೆಗಳಲ್ಲಿ ಒಬ್ಬೊಬ್ಬ ಪ್ರಸಿದ್ಧ ವಿಜ್ಞಾನಿಗಳ ಪರಿಚಯ ಲೇಖನಗಳನ್ನು ಪ್ರಕಟಿಸಬೇಕಾಗಿ ವಿನಂತಿ.

ಎಸ್. ಕೃಪಾಶಂಕರ್
ಪ್ರಗತಿ ಶಿಕ್ಷಣ ಸಂಸ್ಥೆಗಳು ವಿಜಯಪುರ.

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ವತಿಯಿಂದ ಬಾಪು ಪ್ರಪಂಚ ಮಾಸಿಕದಲ್ಲಿನ ಅನೇಕ ವೈಶಿಷ್ಟಪೂರ್ಣ ಲೇಖನಗಳು ಉಪಯುಕ್ತವೂ, ಸಂಗ್ರಹ ಯೋಗ್ಯವಾಗಿವೆ.

ಎಸ್.ಎಂ. ಶ್ಯಾಮಲಾ

ಬಾಪು ಪ್ರಪಂಚದ ಸಂಪಾದಕಿ ಇಂದಿರಾ ಕೃಷ್ಣಪ್ಪ ಅವರ ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಲೇಖನವು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿರುವುದು ಮತ್ತು ಅವರ ಪರಿಚಯ ತ್ಯಾಗ ಬಲಿದಾನದ ನಮಗೆ ತಿಳಿದು ಅದನ್ನು ಮತ್ತೊಬ್ಬರಿಗೆ ತಿಳಿಸಲು ಉಪಯುಕ್ತವಾಗಿದೆ.

ಎ.ಸಿಸಿಲಿಯಾ ಮೇರಿ
ಉಪನ್ಯಾಸಕಿ, ದೊಡ್ಡ ಸಗರಹಳ್ಳಿ.

ಇಂದಿರಾ ಕೃಷ್ಣಪ್ಪನವರು ನವಭಾರತ ನಿರ್ಮಾಪಕರು ಲೋಕ ಮಾನ್ಯರು : ಶತಮಾನದ ಸ್ಮರಣೆಯ ಲೇಖನವು ಅತ್ಯುತ್ತಮವಾಗಿದೆ.

ಎನ್. ಶ್ರೀನಿವಾಸ ಮೂರ್ತಿ, ವಿಜಯಪುರ.

ವೇಮಗಲ್ ಸೋಮಶೇಖರ್ ಅವರ ಗಾಂಧಿ ಮತ್ತು ದಲಿತರ ದೇವಸ್ಥಾನ ಪ್ರವೇಶ ಲೇಖನವು ಉತ್ತಮವಾಗಿದೆ. ಇದರ ಉಳಿಕೆ ಭಾಗದ ಲೇಖನವನ್ನು ಮುಂದುವರಿಸಿಕೊಂಡು ಬನ್ನಿ.

ಡಾ.ಎನ್.ಎ. ಆದಿನಾರಾಯಣಪ್ಪ
ರಾ.ಸೇ.ಯೋ. ಕೋಲಾರ, ತಮಕ.

ರಾಷ್ಟ್ರೀಯ ಯುವ ಯೋಜನೆಯ ರಾಜ್ಯ ಸಂಯೋಜಕ ಡಾ.ವಿ. ಪ್ರಶಾಂತ ಅವರ ವಾಯು ಪಡೆಯಲ್ಲಿ ಸಾಹಸಿ ತರುಣಿಯರು ಈ ಲೇಖನವು ಸೊಗಸಾಗಿ ಮೂಡಿಬಂದಿದೆ. ಯುವಜನತೆಯ ಸಾಹಸ, ಧೈರ್ಯ ಹಾಗೂ ಸೇವಾ ಮನೋಭಾವನೆಗಳ ಲೇಖನಗಳು ಬಹಳ ಪ್ರಸ್ತುತ ವಾಗಿದೆ.

ಎಚ್.ಎಸ್. ರುದ್ರೇಶ್ ಮೂರ್ತಿ
ಶಿಕ್ಷಣ ತಜ್ಞರು. , ಚಿಕ್ಕಬಳ್ಳಾಪುರ ಜಿಲ್ಲೆ

ಡಾ. ಸಿ. ಆರ್. ಚಂದ್ರಶೇಖರ್ ಅವರ ಮಾದಕ ವಸ್ತುಗಳ ಮಾಯಾಜಾಲ ಲೇಖನವು ಅರ್ಥಪೂರ್ಣ ಹಾಗೂ ಯುವಜನತೆಗೆ ಮಾರ್ಗದರ್ಶಿಯಾಗಿದೆ.

ನವೀನ್ ಕುಮಾರ್ ಕೆ.ಎಸ್.
ಎನ್.ಎಸ್.ಎಸ್. ಕಾರ್ಯಕ್ರಮ ಅಧಿಕಾರಿ

ವಸುಂಧರಾ ಭೂಪತಿ ಅವರ ಪ್ರಾಕೃತಿಕ ಆಹಾರ ಮಹತ್ವ ಲೇಖನದಿಂದ ಆಹಾರ ಸೇವಿಸುವಾಗ ಏನು ತಿನ್ನಬೇಕು ಎಷ್ಟು ಸಮಯಕ್ಕೆ ಎಷ್ಟು ಪ್ರಮಾಣದಲ್ಲಿ ತಿನ್ನಬೇಕು ಎನ್ನುವ ಸಂಗತಿ ನಮಗೆ ತಿಳಿಯಿತು.ಆರೋಗ್ಯ ಜೀವನ ಪದ್ಧತಿಯ ಈ ಲೇಖನ ಉಪಯುಕ್ತವಾಗಿದೆ.

ಶೋಭಾ ವಿ.ಎಂ ಕಿಶೋರ್ ಕುಮಾರ್,

ಬಾಪು ಪ್ರಪಂಚ ಮಾಸಿಕ ಪ್ರತಿ ತಿಂಗಳು ವಿಭಿನ್ನ ಹಾಗೂ ವಿಶಿಷ್ಟ ಲೇಖನಗಳು ನವನಾವಿನ್ಯತೆಗಳೊಂದಿಗೆ ಮೂಡಿಬರುತ್ತಿವೆ. ಗಾಂಧೀ ಭವನಕ್ಕೆ ವಂದನೆಗಳು.

ಗಿರಿಜಾ ಹೆಗ್ಡೆ

ಗಾಂಧಿ ಭವನದಿಂದ ಪ್ರಕಟಗೊಳ್ಳುತ್ತಿರುವ ಬಾಪು ಪ್ರಪಂಚ ಪತ್ರಿಕೆಯಲ್ಲಿ ಆರೋಗ್ಯ ಕುರಿತಾದ ಉಪಯುಕ್ತ ಲೇಖನಗಳ ಜೊತೆ ನಾಡು ನುಡಿಗಾಗಿ ಹೋರಾಟ ನಡೆಸಿದ ಮಹಾನ್ ವ್ಯಕ್ತಿಗಳ ಪರಿಚಯವು ಓದುಗರ ಆಸಕ್ತಿಯನ್ನು ಹೆಚ್ಚಿಸುತ್ತದೆ.

ಲೀಲಾ ವಾಸುದೇವ್

ಕರ್ನಾಟಕ ಕಟ್ಟಿದ ಕೃಷ್ಣರಾಜ ಅವರ ಕುರಿತಾದ ಲೇಖನವು ಉತ್ತಮವಾಗಿ ಮೂಡಿಬಂದಿದೆ.

ಎಸ್.ಎಸ್. ಪ್ರದೀಪ, ಪ್ರಾಂಶುಪಾಲರು.



ದಿ. 27/03/2021ರಂದು ಹೊಸಕೋಟೆ ಸೂಲಿಬೆಲೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಎನ್.ಎಸ್.ಎಸ್. ಸ್ವಯಂ ಸೇವಕ ಎ.ಎಂ. ಪುನೀತ್ ಇವರಿಗೆ ಕ.ಗಾಂ.ಸ್ಮಾ.ನಿಧಿ ಕರೋನ ವಾರಿಯರ್ ಪ್ರಶಸ್ತಿಯನ್ನು ಫ್ರಾನ್ಸಿಸ್ ಝೇವೇರಿಯರ್ ನೀಡಿ ಗೌರವಿಸಿದರು. ಇವರು ಶಾಲಾ ಕಾಲೇಜುಗಳಲ್ಲಿ ಉಚಿತ ಮಾಸ್ಕ ವಿತರಣೆ, ಸರ್ಕಾರಿ ಆಸ್ಪತ್ರೆಗಳಲ್ಲಿ ಕೊರೋನಾ ಜಾಗೃತಿ ಕುರಿತು ಪೋಸ್ಟರ್ ಅಂಟಿಸುವುದು, ಕರೋನಾ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಬೀದಿ ನಾಟಕಗಳ ಆಯೋಜನೆ, ಯುವಕ ಸಂಘ, ಯುವತಿ ಮಂಡಳಿಗಳಲ್ಲಿ ಸ್ವಚ್ಛತೆ ಕುರಿತು ಜಾಗೃತಿ ಕಾರ್ಯಕ್ರಮ, ಕೋವಿಡ್ ಸಂತ್ರಸ್ಥರಿಗೆ ಆಹಾರ ಕಿಟ್‌ಗಳ ವಿತರಣೆಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದಾರೆ. ಚಿತ್ರದಲ್ಲಿ ಡಾ.ವಿ. ಪ್ರಶಾಂತ ಇದ್ದಾರೆ.

ಗಾಂಧಿ ಭವನದ ಕಾರ್ಯಕ್ರಮಗಳು



ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಕಾಡಶೆಟ್ಟಿಹಳ್ಳಿ ಶ್ರೀ ದೈತ್ಯಮಾರಮ್ಮ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಣಿಗಲ್‌ನಲ್ಲಿ ದಿನಾಂಕ 14-03-2021 ರಂದು ಆಯೋಜಿಸಿದ್ದ ವ್ಯಸನಮುಕ್ತ ಸಮಾಜಕ್ಕಾಗಿ ಯುವಜನತೆ ಮತ್ತು ಗಾಂಧೀ ವಿಚಾರಗಳ ಪ್ರಸ್ತುತತೆ ಎಂಬ ವಿಚಾರ ಸಂಕಿರಣದಲ್ಲಿ ತುಮಕೂರು ವಿಶ್ವವಿದ್ಯಾಲಯದ ಕುಲಪತಿ ಡಾ: ವೈ ಎಸ್ ಸಿದ್ದೇಗೌಡ, ಕ.ಗಾಂ.ಸ್ಮಾ.ನಿಧಿ. ಅಧ್ಯಕ್ಷರಾದ ನಾಡೋಜ ವೂಡೇ ಪಿ ಕೃಷ್ಣ, ಡಾ: ಗೋವಿಂದರಾಯ, ಪ್ರೊ: ಲಿಂಗೇಗೌಡ, ಅರಸೀಕೆರೆ ಕಸ್ತೂರ ಬಾ ಆಶ್ರಮದ ಟ್ರಸ್ಟಿ ಪ್ರೊ: ಜಿ.ಬಿ ಶಿವರಾಜು ಕ.ಮ.ಸಂ.ಮಂ. ಅಧ್ಯಕ್ಷರಾದ ಹನುಮನರಸಯ್ಯ, ನಂದೀಶ್, ಮತ್ತು ಡಾ: ನಿಂಗಯ್ಯ ಚಿತ್ರದಲ್ಲಿದ್ದಾರೆ.



ದೇವನಹಳ್ಳಿ ವಿಜಯಪುರದ ಪ್ರಗತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಭಾರತ ಸ್ವಾತಂತ್ರ ಅಮೃತ ಮಹೋತ್ಸವ @ 75 ದಿ.12/03/2021ರ ನೆರೆಹೊರೆ ಯುವ ಸಂಸತ್ತು ಕಾರ್ಯಕ್ರಮವು ನೆಹರು ಯುವ ಕೇಂದ್ರ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಇವರ ಸಹಯೋಗದಲ್ಲಿ ಗಾಂಧಿ ಸೇವಕರಾದ ಪುಟ್ಟಮ್ಮ ರುದ್ರ ಮುನಿಯಪ್ಪ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಬೆಂಗಳೂರು ಉತ್ತರ ವಿಶ್ವವಿದ್ಯಾನಿಲಯದ ರಾ.ಸೇ.ಯೋ.ನ ಡಾ.ಎನ್‌ಎ. ಆದಿನಾರಾಯಣಪ್ಪ, ಪ್ರಾಂಶುಪಾಲ ಎಸ್.ಎಸ್. ಪ್ರದೀಪ, ಎಸ್. ಮಲ್ಲಿಕಾರ್ಜುನ್, ಎಸ್, ಕೃಪಾಶಂಕರ್, ಪ್ರಗತಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಬಿ.ಎನ್. ರಮೇಶ್ ಹಾಗೂ ರ್ಾ.ಯು.ಯೋ. ಡಾ.ವಿ.ಪ್ರಶಾಂತ ಚಿತ್ರದಲ್ಲಿದ್ದಾರೆ.



ನೆಲಮಂಗಲ ತಾಲೂಕಿನ ಶ್ರೀ ವನಕಲ್ಲು ಮಲ್ಲೇಶ್ವರ ಮಹಾಸಂಸ್ಥಾನ ಮಠದಲ್ಲಿ ಡಾ. ಶ್ರೀ ಶ್ರೀ ಬಸವ ರಮಾನಂದ ಮಹಾಸ್ವಾಮೀಜಿಗಳ ನೇತೃತ್ವದಲ್ಲಿ ದಿ.15/03/2021 ರಂದು ರಕ್ತದಾನ ಶಿಬಿರವನ್ನು ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ, ನಿಫಾ ಕರ್ನಾಟಕ ವಲಯ ಹಾಗೂ ನೆಹರು ಯುವ ಕೇಂದ್ರದ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ಮಾಜಿ ಸಭಾಪತಿ ಪುಟ್ಟಣ್ಣ ಕ.ಗಾಂ.ಸ್ಮಾ.ನಿಧಿ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಕಾರ್ಯಕ್ರಮದಲ್ಲಿ ಡಾ. ವಿ. ಪ್ರಶಾಂತ, ನೆಹರು ಯುವ ಕೇಂದ್ರ ರಾಷ್ಟ್ರೀಯ ಸೇವಾ ಕಾರ್ಯಕರ್ತ ಹೆಚ್.ಸಿ. ಶ್ರೀಧರ್ ಚಿತ್ರದಲ್ಲಿದ್ದಾರೆ.





ದಿ. 23.03.2021 ರಂದು ನೆಹರು ಯುವ ಕೇಂದ್ರ ಮತ್ತು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಇವರ ಸಹಯೋಗದಲ್ಲಿ ದೇವನಹಳ್ಳಿ, ದೊಡ್ಡಬಳ್ಳಾಪುರ, ನೆಲಮಂಗಲ ಹಾಗೂ ಹೊಸಕೋಟೆ ತಾಲೂಕಿನ ಯುವಕ ಸಂಘ ಯುವತಿ ಮಂಡಳಿ ಹಾಗೂ ರಾ.ಸೇ.ಯೋ. ಸ್ವಯಂಸೇವಕರಿಗೆ ಹಾಗೂ ಯುವ ಜನತೆಗಾಗಿ ನೀರಿನ ಸಂರಕ್ಷಣೆಯ ಬಗ್ಗೆ ಬೀದಿನಾಟಕ, ಚಿತ್ರಕಲೆ, ಪ್ರಬಂಧ, ಘೋಷಣೆ, ವೆಬಿನರ್ ಹಾಗೂ ಜಾಗೃತಿ ಅರಿವಿನ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ವಿಜೇತರಾದವರಿಗೆ ಪ್ರಾಂಶುಪಾಲ ಬಿ.ಎನ್.ರಮೇಶ್, ಎಸ್.ಎಸ್. ಪ್ರದೀಪ, ರೂಪ ಹಾಗೂ ರಾ.ಯು.ಯೋ. ಡಾ.ವಿ ಪ್ರಶಾಂತ ಪ್ರಶಸ್ತಿ ಪತ್ರಗಳನ್ನು ನೀಡಿ ಗೌರವಿಸಿದರು.





ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಅವರು ಬೆಂಗಳೂರಿನ ಶೇಷಾದ್ರಿಪುರಂ ಕಾಲೇಜಿನ ಸಭಾಂಗಣದಲ್ಲಿ ದಿ.25.03.2021ರಂದು ಏರ್ಪಡಿಸಿದ್ದ ರಾಜ್ಯ ಮಟ್ಟದ ಮಹಿಳಾ ಸಾಹಿತ್ಯ ಸಮ್ಮೇಳನದಲ್ಲಿ ಶಿಕ್ಷಣ ತಜ್ಞರುಗಳಾದ ನಾಡೋಜ ಡಾ ವೂಡೇ ಪಿ ಕೃಷ್ಣ, ಡಾ. ಗೀತಾ ರಾಮಾನುಜಂ, ಸಮ್ಮೇಳನದ ಅಧ್ಯಕ್ಷರು, ಹಿರಿಯ ಸಾಹಿತಿ ಗುಣಸಾಗರಿ ನಾಗರಾಜ್, ಕನ್ನಡಪರ ಹೋರಾಟಗಾರರಾದ ಎಂ. ತಿಮ್ಮಯ್ಯನವರು, ಪ್ರಗತಿಪರ ಚಿಂತಕಿ ಟಿ.ಆರ್.ಬಾಲಾಜಿ ಮುಂತಾದವರು ಗೌ.ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಅವರಿಗೆ ಲೋಹಿಯಾ ಪ್ರಶಸ್ತಿ ಪ್ರಧಾನ ಮಾಡಿದರು.






ಕರ್ನಾಟಕ ವಚನ ಸಾಹಿತ್ಯ ಪರಿಷತ್ತು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಸುಮಂಗಲಿ ಸೇವಾ ಆಶ್ರಮ, ಇವರ ಸಹಯೋಗದಲ್ಲಿ ಗಾಂಧೀ ಭವನದಲ್ಲಿ ದಿ.27–3–2021 ರಂದು ವಿಶ್ವ ಮಹಿಳಾ ದಿನಾಚರಣೆಯನ್ನು ಗಾಂಧೀಭವನದಲ್ಲಿ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಅಧ್ಯಕ್ಷತೆಯಲ್ಲಿ ಸುಮಂಗಲಿ ಸೇವಾ ಆಶ್ರಮದ ಅಧ್ಯಕ್ಷೆ ಡಾ: ಎಸ್. ಜಿ ಸುಶೀಲಮ್ಮ, ಉದ್ಘಾಟನೆಯನ್ನು ರೀನಾ ಸುವರ್ಣ ಅಧ್ಯಕ್ಷರಾದ ನಾಡೋಜ ವೂಡೇ ಪಿ. ಕೃಷ್ಣ, ಎಂ.ವಿ. ತ್ಯಾಗರಾಜು, ಹೆಚ್ ಸುಬ್ಬಣ್ಣ, ಎ. ರಾಮಕೃಷ್ಣಪ್ಪ, ಮಾಯಣ್ಣ, ಎಂ. ತಿಮ್ಮಯ್ಯ, ರಾಂ.ಕೆ. ಹನುಮಂತಯ್ಯ, ಮಂಜುನಾಥ ಆರ್. ಕೇಸರಿ ಹಾಜರಿದ್ದರು. ಕಾರ್ಯದರ್ಶಿ ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರಿಗೆ ಸಾವಿತ್ರಿ ಭಾಯಿ ಪುಲೆ ಪ್ರಶಸ್ತಿ ಪ್ರದಾನ ಮಾಡಲಾಯಿತು. .



ಗಾಂಧಿಭವನದಲ್ಲಿ ಸ್ವಾತಂತ್ರೋತ್ಸವ 75 ಸಮಾಲೋಚನಾ ಸಮಿತಿ ಸಭೆಯನ್ನು ದಿ. 30/03/2021 ರಂದು ಆಯೋಜಿಸಲಾಗಿತ್ತು. ಸಭೆಯಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಡಾ. ಎಚ್.ಎಸ್. ದೊರೆಸ್ವಾಮಿ, ಸುತ್ರಿ ಚನ್ನಮ್ಮ ಹಳ್ಳಿಕೇರಿ, ನಾಡೋಜ ಡಾ. ವೂಡೇ ಪಿ. ಕೃಷ್ಣ, ಇಂದಿರಾ ಕೃಷ್ಣಪ್ಪ, ಪ್ರತಾಪ್ ಲಿಂಗಯ್ಯ, ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಡಾ. ವಸುಂಧರಾ ಭೂಪತಿ, ಜೀರಿಗೆ ಲೋಕೇಶ್, ದೊಡ್ಡಯ್ಯ, ಸದಾನಂದ, ಗಿರಿಜಾ ಹೆಗ್ಡೆ ಹಾಜರಿದ್ದರು.






ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಲೋಹಿಯಾ ಸಮತಾ ವಿದ್ಯಾಲಯ ಇವರ ಸಹಯೋಗದಲ್ಲಿ ಗಾಂಧಿ ಭವನದಲ್ಲಿ ದಿ.04–4–2021ರಂದು ವಿರೋಧಪಕ್ಷದನಾಯಕರಾದಶ್ರೀ ಸಿದ್ದರಾಮಯ್ಯಅವರು 'ಹೆಡ್‌ಮಾಸ್ಟರ್ ಕೆಂಗರಾಮಯ್ಯ' ಕೃತಿ ಲೋಕಾರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಶಾಸಕರು, ಮಾಜಿ ವಿಧಾನಸಭಾಧ್ಯಕ್ಷರಾದ ಕೆ.ಆರ್. ರಮೇಶ್‌ಕುಮಾರ್, ಕ.ಗಾಂ.ಸ್ಮಾ.ನಿಧಿ ಅಧ್ಯಕ್ಷರಾದ ನಾಡೋಜ ವೂಡೇ ಪಿ. ಕೃಷ್ಣ, ಕೃತಿಕಾರ ಡಾ. ನಂದೀಶ್ವರ್, ಪ್ರೊ. ರವಿವರ್ಮಕುಮಾರ್, ಡಾ. ವಿವೇಕಾನಂದ ಹಾಗೂ ಕ.ಗಾಂ.ಸ್ಮಾ.ನಿಧಿ ಕಾರ್ಯದರ್ಶಿ ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರು ಭಾಗವಹಿಸಿದ್ದರು.

2 UTTARPRABHA Kannada Daily Morning ಉತ್ತರಪ್ರಭ 13 April 2021

ಸಮಾಜ ಸೇವೆಯಿಂದ ಡಾಕ್ಟರ್ ಆದ ಎಚ್.ಕೆ. ಪಾಟೀಲ್





ಪುಸ್ತಕ ಬಿಡುಗಡೆ | ಡಾ. ವಸುಂಧರಾ ಭೂಪತಿ ಅಭಿಮತ | ಗುಣಸಾಗರಿ ನಾಗರಾಜ್ ಅವರ 3 ಕೃತಿ ಬಿಡುಗಡೆ

ಮಹಿಳಾ ದಿನ ವರ್ಷ ಪೂರ್ತಿ ಆಚರಿಸಿ

• ಕನ್ನಡ ಪ್ರಭ ವಾರ್ತೆ ಬೆಂಗಳೂರು



ಗ್ರಾಮೀಣಾಭಿವೃದ್ಧಿ ವಿವಿಯ ಪ್ರಥಮ ಘಟಿಕೋತ್ಸವದಲ್ಲಿ ಪ್ರದಾನ | ಸಾಧನೆಗೆ ಸಂದ ಗೌರವ

ಆದರ್ಶ ಸಹಕಾರಿ, ಮುತ್ಸದ್ದಿ ಎಚ್ಕೆ ಪಾಟೀಲರಿಗೆ ಗೌರವ ಡಾಕ್ಟರೇಟ್



ರಾಷ್ಟ್ರ ಮಟ್ಟದಲ್ಲೂ ಮಿಂಚು

ಯುವ ಪೀಳಿಗೆಯ ಶಕ್ತಿಯ ಅಭಿವೃದ್ಧಿಗೆ ಬಳಕೆಯಾಗ...

ನೆರೆಹೊರೆ ಯುವ ಸಂಸತ್, ಉಪನ್ಯಾಸ ಕಾರ್ಯಕ್ರಮದಲ್ಲಿ ಎಚ್.ಎಸ್.ರುದ್ರೇಶಮ...




• ಕನ್ನಡಪ್ರಭ ವಾರ್ತೆ ವಿಜಯಪುರ

...ಯುವಶಕ್ತಿ ದೇಶದ ಅಭಿವೃದ್ಧಿಗೆ ಬಳಕೆಯಾಗಲಿ

...ತ್ಸೋತ್ಸವ ಅಮೃತ ಮಹೋತ್ಸವದ ಅಂಗವಾಗಿ ನೆರೆಹೊರೆ ಯುವ ಸಂಸತ್ ಕಾರ್ಯಕ್ರಮ





ಗಾಂಧಿ ಭವನದಲ್ಲಿಂದು ಡಾ.ರಾಮ್ ಮನೋಹರ್ ಲೋಹಿಯಾ ಸಮತಾ ವಿದ್ಯಾಲಯ ವತಿಯಿಂದ ಹೆಡ್‌ಮಾಸ್ಟರ್ ಕೆಂಗರಾಮಯ್ಯ ಕೃತಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ವಿಶ್ವನಾಯಕ ಸಿದ್ದರಾಮಯ್ಯ, ಮಾಜಿ ಸ್ಪೀಕರ್ ಹಾಗೂ ಶಾಸಕ ಕೆ.ಆರ್. ರಮೇಶ್ ಕುಮಾರ್, ನಾಡೋಜ ಪ್ರೊ.ಪಿ.ಕೃಷ್ಣ, ಪ್ರೊ.ರವಿವರ್ಮ ಕುಮಾರ್ ಪಾಲ್ಗೊಂಡಿದ್ದರು.

ಈ ಸಂಜೆ Sun. 04 April 2021
https://epaper.eesanje.com/c/59557738

ಕನ್ನಡಪ್ರಭ


ಮೇರು ನಾಯಕನಿಗೆ ಡಾಕ್ಟರೇಟ್ ಗೌರವ




ಮಕ್ಕಳಿಗೆ ಆತ್ಮಸ್ಥೈರ್ಯ ತುಂಬುವ ಶಿಕ್ಷಣ ಅಗತ್ಯ

ಸಂ.ಕ.ಸಮಾಚಾರ ಬೆಂಗಳೂರು

ಇಂದಿನ ಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬುವಂತ ಶಿಕ್ಷಣ ನೀಡಬೇಕಾಗಿದೆ ಎಂದು ಶಿಕ್ಷಣ ತಜ್ಞೆ ಡಾ.ಗೀತಾ ರಾಮಾನುಜಂ ಹೇಳಿದರು.



ಶೇಷಾದ್ರಿಪುರ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಮಹಿಳಾ ಸಾಹಿತ್ಯ ಸಮ್ಮೇಳನದಲ್ಲಿ ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಅವರಿಗೆ ಡಾ. ಲೋಹಿಯಾ ಪ್ರಶಸ್ತಿ ಪ್ರದಾನ ಮಾಡಲಾಯಿತು.



ಪುಸ್ತಕ ವಿಭಾಗ

(ಪ್ರಸಿದ್ಧ ಕೃತಿಗಳ ಸಂಕ್ಷಿಪ್ತ ಭಾಗ ನಿಯತವಾಗಿ ಬರಲಿವೆ)

ROOTS : Sold Into Slavery

Condensed form of the story by Alex Harley

Continued from previous edition...

More than a decade ago, Alex Haley began a long and arduous attempt to discover his ancestral roots. Like most black Americans, he had little to go on at first-only a few meagre clues, given to him in childhood. But as he pursued his search, the pieces of his ancient family puzzle began to fall into place. The story that finally emerged portrays not merely the agony of one man but, in a very real sense, the epic journey of the American Negro. In "By Slave Ship to America,' the first part of 'Roots, which appeared last month, Haley re-created the boyhood of his African ancestor, Kunta Kinte, Kunta's capture in 1767 by slavers and the ordeal of his passage across the Atlantic on a slave ship. 'Sold into Slavery' brings the young Kunta to the alien and cruel world of colonial America.

When the feeble old gardener became ill, Kunta tiled the garden alone. The season of snow came, and the other blacks were caught up in an increasing excitement about some day called "Christmas." It had something to do with singing, dancing and eating. Kunta overheard talk that Christmas also involved the Allah of the toubob and the black ones. It made him ill at case, and during the days of festivities he did not leave his hut even to visit the fiddler. Spring came for Kunta, and then summer, in a sweating blur of days as he struggled to plough, plant and cultivate the garden, and supply vegetables to Bell, who was cook for the big house. At night he was too tired to do more than throw himself down on his corn-husk mattress, his clothes wet with sweat, and sleep. Sometimes he still thought of escape, but his impulse to flee was always tempered by the terrible memories of what had happened to him. When the harvest was in and the autumn chores were begun, there was talk of Christmas again. This Christmas, Kunta felt, Allah would have no objection to his merely observing the activities. But the Moslem Kunta was deeply offended when he watched the preparation of alcohol from fermented apples. He thought it sickening when the young black ones amused themselves by holding dried hog bladders on sticks close to the fire until they burst. And he was particularly repulsed when Bell supervised the cooking of a large, black iron potful of hog jowls and black eyed peas for the New Years of "Sebenteen Sebenty." "Hog jowl an' peas is good luck!" the fiddler shouted at him, his mouth full. Kunta was disgusted. Sitting on his stool in his hut, he worried that he might find himself casing into an acceptance of the ways of the other blacks. Yet he wanted to know them better-the fiddler and the old gardener and the cook Bell.

One day, on an impulse, Kunta told Bell that she looked like a Mandinka. He meant it in a complimentary way, and he was astonished by her irate outburst: "What fool stuff you talkin' 'bout? Don' know how come white folks keep on emptyin' out boatloads of African niggers!"

To be continued...

Chronology of events of personal & Public life of Mahatma Gandhi
(year wise - from 1869)

1895 June 17. Balasundaram's case brought Gandhi into touch with the indentured Indians.

August 11. Sent a long petition to Lord Chamberlain in London protesting against the proposed £ 3 Poll Tax imposed on Indian labour and requested Lord Elgin. Viceroy of India, to look into it and stop immigration of more Indian labour to South Africa.

August 29. An Indian deputation led by Dadabhai Naoroji waited on the new Colonial Secretary in London in connection with the proposed Natal Franchise Bill

September 13. Lord Chamberlain informed Natal Government that Her Majesty the Queen had withheld assent to the Bill.

December 12. Gandhi's appeal to Every Briton in South Africa, issued as a pamphlet was eulogised by the Natal Mercury for its "great merit and moderation

1896 March 3. The new Franchise Bill was gazetted.

April 27. Indian community submitted a memorial to the Speaker and members of the Legislative Assembly of Natal setting forth objections to the Bill.

May 24. Sent a letter to the Prime Minister, Sir John Robinson, challenging his remarks regarding Natal Indian Congress being a "secret body.

June 5. Left Durban for India on board the S.S. Pingola which headed for Calcutta.

July 4. Reached Calcutta. Departed for Bombay via Allahabad. Missed his train at Allahabad, stayed there for the day and interviewed Mr Chesney, Editor of The Pioneer. This interview, he wrote, "laid the foundation of the series of incidents which ultimately led to my being lynched in Natal".

July 9. Reached Rajkot. Joined the Sanitary Visitors' Committee at Rajkot on the outbreak of plague in Bombay

August 14. Published the Green Pamphlet, regarding the grievances of the British Indians in South Africa

To be continued...

Courtesy : Mahatma Gandhi A Chronology
Published by : Ministry of Information & Broadcasting, Govt. of India, Collection by : Dr. Poornima Jogi, N.S.S.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಪ್ರಕಟಣೆಗಳು

1. ಆರೋಗ್ಯ ರಹಸ್ಯ 10–00
2. ಕರ್ನಾಟಕದಲ್ಲಿ ಗಾಂಧೀ 5–00
3. ರಾಮನಾಮ 6–00
4. ಗಾಂಧೀ ಬಳಗದ ವಿದೇಶಿಯರು 40–00
5. ಆರೋಗ್ಯ 8–00
6. ಪ್ರಾರ್ಥನೆ 40–00
7. ಸತ್ಯಾಗ್ರಹ 8–00
8. ಮಹಿಳೆಯರಿಗಾಗಿ 8–00
9. ಪಂಚಾಯತ್ ರಾಜ್ 12–00
10. ಆದರ್ಶಗಳು 12–00
11. ನಮ್ಮ ಗಾಂಧೀ ತಾತ 22–00
12. ದೇವನಗರಿಯಲ್ಲಿ ಗಾಂಧೀ ಧ್ವನಿ 2–00
13. ನಮ್ಮ ಗಾಂಧೀ ತಾತ 15–00
14. ಹೋರಾಟ ಶ್ರೀ 40–00
15. ಮಹಾತ್ಮ ಗಾಂಧೀಜಿ ಅವರ ಜೀವನ ಮೈಲಿಗಲ್ಲುಗಳು 3–00
16. ಗಾಂಧೀಜಿ ಜೀವನ ಚರಿತ್ರೆ 25–00
17. ಕುವೆಂಪು ಕಂಡ ಗಾಂಧೀ 25–00
18. ಉಪ್ಪಿನ ಸತ್ಯಾಗ್ರಹ 5–00
19. ಹಿಂದ್ ಸ್ವರಾಜ್ 50–00
20. ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ 25–00
21. ನನ್ನ ಕನಸಿನ ಭಾರತ 30–00
22. ಹಿಂದೂ ಧರ್ಮ 25–00
23. ಮಹಿಳೆಯರು 63–00
24. ಸ್ವಾತಂತ್ರ್ಯ 42–00
25. ಅಸ್ಪೃಶ್ಯತೆ 45–00
26. ಒಳ್ಳೆಯ ಜೀವನ 60–00
27. ಗಾಂಧೀ ಮತ್ತು ಕರ್ನಾಟಕ 200–00
28. ಸತ್ಯ 38–00
29. ವಿದ್ಯಾರ್ಥಿಗಳಿಗಾಗಿ 30–00
30. ಸರ್ವೋದಯ 30–00
31. ಖಾದಿ ಗ್ರಾಮೋದ್ಯೋಗ 58–00
32. ನನ್ನ ಬಾಲ್ಯದ ನೆನಪುಗಳು 52–00
33. ಗ್ರಾಮರಾಜ್ಯ ಆಡಳಿತ 5–00
34. ನನ್ನ ಕನಸಿನ ಸ್ವರಾಜ್ಯ 42–00
35. ಹಾಸ್ಯ ಮತ್ತು ಗಾಂಧೀ 44–00
36. ನನ್ನ ಆದರ್ಶಗ್ರಾಮ 5–00
37. ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ಧತಿ 48–00
38. ಸತ್ಯಾಗ್ರಹಿ 40–00
39. ಗ್ರಾಮದಾನ ಗ್ರಾಮ ಸ್ವರಾಜ್ಯ 25–00
40. ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ
41. ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ 5–00
42. ಸತ್ಯಾಗ್ರಹ 5–00
43. ಹಿಂದ್ ಸ್ವರಾಜ್ 5–00
44. ಆರೋಗ್ಯ 5–00
45. ಮಹಾತ್ಮ ಗಾಂಧಿ ಪ್ರಸ್ತುತತೆ 10–00
46. ಬಹುರೂಪಿ ಗಾಂಧಿ 35–00
47. ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ 30–00
48. ಕೃತಯುಗಿ ವಿನೋಬಾ ಭಾವೆ 15–00
49. ಮೋಹನ ತರಂಗ 40–00
50. ನಮ್ಮ ಗಾಂಧಿ ತಾತ 22–00
51. ಗೀತಾ ಪ್ರವಚನ 80–00
52. ಜೆ.ಪಿ. ಜೀವನ ಹಾದಿ 45–00
53. ಗಣ್ಯರು ಕಂಡಂತೆ ಗಾಂಧಿ 20.0
54. ಗೀತಾಮಾತೆ 80.00
55. ಲೋಕ ಚಿಂತಕರು 145.00
56. ಕರ್ನಾಟಕದ ಕಸ್ತೂರ್‌ಬಾ ಯಶೋಧರಮ್ಮ ದಾಸಪ್ಪ 38.00
57. ಮಹದೇವ ದೇಸಾಯಿ 63.00
58. ಸಮಾಜವಾದ : ಗಾಂಧೀ ದೃಷ್ಟಿಕೋನ 15.00
59. ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ 28.00
60. ಗಾಂಧೀ ಬಳಗದ ವಿದೇಶಿಯರು 89.00
61. ಮಹಾತ್ಮ ಗಾಂಧೀ ಮತ್ತು ಸ್ವಚ್ಛ ಭಾರತ 33.00
62. ಮಹಾತ್ಮ ಗಂಧೀಜಿ ಅವರ ಶೈಕ್ಷಣಿಕ ಸಿದ್ಧಾಂತ 80.00
63. ಹುಕ್ಕೇರಿಕರ ರಾಮರಾಯರು 110.00
64. ಮಹಿಳೆಯರು 63.00
65. ನನ್ನ ಬಾಲ್ಯದ ನೆನಪುಗಳು 52.00
66. ನಯೀ ತಾಲೀಂ 58
67. Nayi Talim 58.00
68. Temple & Mosque 10–00
69. Rastrapita Mahatma Gandhi 25–00
70. Swarajya of My Dreams 5–00
71. Gandhi My Grand Father 5–00
72. Grand Pa Gandhi 5–00
73. Relevance of Gandhi 20–00
74. Vinoba Sage of the Age 20.00
75. Kasturba 33.00
76. Mahatma Gandhi and his Foreign Associates 87

Tariff rates for Advertisement in Bapu Prapancha Kannada English Monthly Magzine

Sl.no.	Particulars	Rates (Rs)
1.	Half Page (Black & White)	1,000.00
2.	Full Page (Black & White)	2,000.00
3.	Quarter Page	1,000
4.	2nd Cover Page	5,000.00
5.	3rd Back Cover Page	5,000.00
6.	Back Cover Page	10,000.00

ಚಂದಾದಾರರಾಗಲು, ಪುಸ್ತಕ ಖರೀದಿಸಲು, ಲೇಖನ ಹಾಗೂ ಜಾಹೀರಾತು ಪ್ರಕಟಿಸಲು

ಸಂಪರ್ಕಿಸಿ : ಯೋಗೀಶ್, ಸಹಾಯಕ ಕಾರ್ಯದರ್ಶಿ – 9738605799

ಚಂದ್ರಪ್ಪ, ಕಾರ್ಯನಿರ್ವಾಹಕ ಅಧಿಕಾರಿ – 7619134999, ನವೀನ್, ಸಹಾಯಕರು – 7892798344

RNI NO : KARBIL/2019/77950

If undelivered please return to: Hon. Secretary, Karnataka Gandhi Smaraka Nidhi, Gandhi Bhavana, Kumara Park Post, Bengaluru - 560001,Ph: 080 22261967, Email : gandhibhavanabengaluru@gmail.com

ಬಾಪು ಪ್ರಪಂಚ ಕನ್ನಡ-ಇಂಗ್ಲಿಷ್ ಮಾಸ ಪತ್ರಿಕೆ
RNI NO : KARBIL/2019/77950
Registered No. : KA/BGGPO/2589/2020-2022
published 15th of every month and posted on 20th of every month at Patrikachannel, Bengaluru - 560026



ಮಹಾದೇವಿ ವರ್ಮಾ : (26.03.1907– 11, ಸೆಪ್ಟೆಂಬರ್ 1987)

ಖ್ಯಾತ ಹಿಂದಿ ಕವಯಿತ್ರಿ, ಸ್ವಾತಂತ್ರ್ಯ ಹೋರಾಟಗಾರ್ತಿ, ಮಹಿಳಾ ಹಕ್ಕುಗಳ ಪ್ರತಿಪಾದಕಿ ಹಾಗು ಶಿಕ್ಷಣ ತಜ್ಞೆ ಮಹಾದೇವಿ ವರ್ಮಾ ಅವರು ಉತ್ತರ ಪ್ರದೇಶದ, ಫಾರುಖಾಬಾದಿನಲ್ಲಿ ಜನಿಸಿದರು. ಮಹಾದೇವಿಯವರಿಗೆ 1916ರಲ್ಲಿಯೇ ಬಾಲ್ಯ ವಿವಾಹವಾಗಿತ್ತು. ಇವರ ಪತಿ ಲಕ್ನೋದಲ್ಲಿ ವ್ಯಾಸಂಗ ಮಾಡುತ್ತಿದ್ದುದರಿಂದ ತವರಿನಲ್ಲಿಯೇ ಉಳಿದು ವಿದ್ಯಾಭ್ಯಾಸವನ್ನು ಮುಂದುವರಿಸಿದರು. ಉನ್ನತ ವ್ಯಾಸಂಗವನ್ನು ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ 1929ರಲ್ಲಿ ಬಿ.ಎ, 1933ರಲ್ಲಿ ಸಂಸ್ಕೃತದಲ್ಲಿ ಎಂ.ಎ ಪದವಿ ಪಡೆದರು. ಆತ್ಮಚರಿತ್ರೆ "ಮೇರೆ ಬಚ್ಪನ್ ಕೆ ದಿನ್"ನಲ್ಲಿ, ಅಂದಿನ ಲಿಂಗ ತಾರತಮ್ಯದ ಬಗ್ಗೆ ಸವಿವರವಾಗಿ ವಿವರಿಸಿದ್ದಾರೆ. ಮಾಸ್ಟರ್ಸ್ ಪದವಿಗಾಗಿ ಪಾಲಿ ಹಾಗೂ ಪ್ರಾಕೃತ ಅಭ್ಯಸಿಸಿದ ಅವರು ಅಲಹಾಬಾದಿನ ಹಳ್ಳಿ ಮಕ್ಕಳಿಗೆ ಪಾಠ ಮಾಡಲಾರಂಭಿಸಿದರು. ರಾಜಕೀಯ ಚಟುವಟಿಕೆಗಳಲ್ಲಿ ಬಹಿರಂಗವಾಗಿ ಭಾಗವಹಿಸದಿದ್ದರೂ, ಇವರು ಗಾಂಧಿ ತತ್ವಗಳನ್ನು ಅನುಸರಿಸತೊಡಗಿದರು. ಅಲಹಾಬಾದಿನ ಮಹಿಳಾ ವಿದ್ಯಾಪೀಠದ ಮುಖ್ಯೋಪಾಧ್ಯಾಯಕಿ, ಪ್ರಾಂಶುಪಾಲೆ ಮುಂದೆ ಕುಲಪತಿಯಾಗಿಯೂ ಕಾರ್ಯ ನಿರ್ವಹಿಸಿದರು. ಮಹಾದೇವಿ ಅವರು ಹಲವು ಕವಿ ಸಮ್ಮೇಳನಗಳನ್ನು ಹಾಗು ಸಣ್ಣ ಕಥಾ ಬರಹಗಾರರ ಸಮ್ಮೇಳನಗಳನ್ನು ಆಯೋಜಿಸಿದರು. ಹಿಂದಿ ಪತ್ರಿಕೆ 'ಚಾಂದ್'ನ ಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದರು. ಹಿಂದಿ ಸಾಹಿತ್ಯ ಲೋಕದ "ಆಧುನಿಕ ಮೀರಾ" ಎಂದು ಖ್ಯಾತರಾಗಿದ್ದ ಇವರಿಗೆ 1982 ರಲ್ಲಿ 'ಜ್ಞಾನಪೀಠ' ಪುರಸ್ಕಾರದಿಂದ ಗೌರವಿಸಲಾಗಿದೆ.



ಬೀರಬಲ್ ಸಹಾನಿ : (14.11.1891 – 10.04.1949)

ಬೀರಬಲ್ ಸಹಾನಿ ಪಂಜಾಬಿನ ಶಹಪುರ್ ಜಿಲ್ಲೆಯ ಭೇರಾದಲ್ಲಿ ಜನಿಸಿದರು. ಭೂವಿಜ್ಞಾನ ಮತ್ತು ಪುರಾತತ್ವ ಶಾಸ್ತ್ರದ ಬಗ್ಗೆ ಆಸಕ್ತಿಯುಳ್ಳವರಾಗಿದ್ದು, ಭಾರತೀಯ ಉಪಖಂಡದ ಪಳೆಯುಳಿಕೆ, ಸಸ್ಯಗಳ ಅಧ್ಯಯನ ನಡೆಸಿದವರಾಗಿದ್ದಾರೆ. ಅವರ ತಂದೆ ರುಚಿರಾಮ್ ಅವರು ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದ್ದರು. ಮನೆ ಸಮೀಪದಲ್ಲೆ ಇದ್ದ ಮದನ್‌ಮೋಹನ್ ಮಾಳವಿಯಾ ಅವರ ಮನೆಗೆ ಬರುತ್ತಿದ್ದ ಮೋತಿಲಾಲ್ ನೆಹರೂ, ಗೋಪಾಲ್ ಕೃಷ್ಣ ಗೋಖಲೆ, ಸರೋಜಿನಿ ನಾಯ್ಡು ಅವರ ಪರಿಚಯವಾಗಿತ್ತು. ಸಹಾನಿ 1914 ರಲ್ಲಿ ಕೇಂಬ್ರಿಡ್ಜ್‌ನ ಎಮ್ಯಾನುಯೆಲ್ ಕಾಲೇಜಿನಿಂದ ಪದವಿ, ಆಲ್ಬರ್ಟ್ ಚಾರ್ಲ್ಸ್ ಸೆವಾರ್ಡ್ನಡಿಯಲ್ಲಿ ಅಧ್ಯಯನ ಮತ್ತು ಲಂಡನ್ನ ವಿಶ್ವವಿದ್ಯಾಲಯದ ಡಿ.ಎಸ್.ಸಿ. ಪದವಿ ಪಡೆದರು. ಇವರು ಇಂಗ್ಲೆಂಡ್‌ನಲ್ಲಿದ್ದಾಗ ಭಾರತೀಯ ಗೊಂಡ್ವಾನ ಸಸ್ಯಗಳ ಕುರಿತು ಅಧ್ಯಯನ ನಡೆಸಿದರು. ಸಹಾನಿ ಭಾರತಕ್ಕೆ ಹಿಂದಿರುಗಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ, ಒಂದು ವರ್ಷ ಸಸ್ಯವಿಜ್ಞಾನ ಪ್ರಾಧ್ಯಾಪಕರಾಗಿ, ಲಕ್ನೋ ವಿಶ್ವವಿದ್ಯಾಲಯದ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿಯೂ ಕಾರ್ಯ ನಿರ್ವಹಿಸಿದರು. 1929 ರಲ್ಲಿ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯವು ಇವರ ಸಂಶೋಧನೆಗಳನ್ನು ಗುರುತಿಸಿ SC.D ಪದವಿಯನ್ನು ನೀಡಿದೆ. ಸಹಾನಿ ಅವರು ವಿಶ್ವದ ಅನೇಕ ಸಂಶೋಧಕರ ಸ್ನೇಹ ಹೊಂದಿದ್ದರು ಮತ್ತು ಭಾರತ ಮತ್ತು ವಿದೇಶಗಳಲ್ಲಿನ ಹಲವಾರು ಅಕಾಡೆಮಿಗಳು ಮತ್ತು ಸಂಸ್ಥೆಗಳಿಂದ ಗುರುತಿಸಲ್ಪಟ್ಟಿದ್ದರು. 1936 ರಲ್ಲಿ ರಾಯಲ್ ಸೊಸೈಟಿ ಆಫ್ ಲಂಡನ್ (FRS)ನ ಫೆಲೋ ಆಗಿ ಆಯ್ಕೆಯಾದರು. ಇದು ಭಾರತೀಯ ಸಸ್ಯಶಾಸ್ತ್ರಜ್ಞನಿಗೆ ಮೊದಲ ಬಾರಿಗೆ ಬ್ರಿಟೀಷರಿಂದ ಸಂದ ಅತ್ಯುನ್ನತ ವೈಜ್ಞಾನಿಕ ಗೌರವವಾಗಿತ್ತು.



ಬುಕರ್ ತಾಲಿಯಾಫೆರೊ ವಾಷಿಂಗ್ಟನ್ : (05.04.1856 – 14.11.1915)

ಶಿಕ್ಷಣತಜ್ಞ, ಲೇಖಕ, ವಾಗ್ಮಿ ಮತ್ತು ಅಮೆರಿಕಾದ ಅಧ್ಯಕ್ಷರುಗಳಿಗೆ ಸಲಹೆಗಾರರಾಗಿದ್ದವರು ಬುಕರ್ ಟಿ. ವಾಷಿಂಗ್ಟನ್. ಇವರು ಆಫ್ರಿಕನ್-ಅಮೇರಿಕನ್ ಸಮುದಾಯದಲ್ಲಿ ಸಮಕಾಲೀನ ಕಪ್ಪು ವರ್ಣೀಯರ ಪ್ರಮುಖ ನಾಯಕರಾಗಿದ್ದರು. ಇವರು ಗುಲಾಮಗಿರಿ ತಲೆಮಾರಿನ ಕೊನೆಯ ಕಪ್ಪು ಅಮೆರಿಕನ್ ನಾಯಕರಾಗಿದ್ದರು. ಶತಮಾನದ ಉತ್ತರಾರ್ಧದಲ್ಲಿ ಮತ್ತು 20ನೇ ಶತಮಾನದ ಆರಂಭದಲ್ಲಿ ಪುನರ್ನಿರ್ಮಾಣದವಾದ ದಕ್ಷಿಣ ರಾಜ್ಯಗಳಲ್ಲಿ ಜಾರಿಗೊಳಿಸಿದ ಹಕ್ಕು ನಿರಾಕರಣೆ ಮತ್ತು ಜಿಮ್ ಕ್ರೌ ತಾರತಮ್ಯ ಕಾನೂನುಗಳಿಂದ ಇವರು ಹೊಸದಾಗಿ ದಬ್ಬಾಳಿಕೆಗೆ ಒಳಗಾಗಿದ್ದರು. ವಾಷಿಂಗ್ಟನ್ ಆಫ್ರಿಕನ್-ಅಮೇರಿಕನ್ ವ್ಯವಹಾರಗಳ ಪ್ರಮುಖ ಪ್ರತಿಪಾದಕ ಮತ್ತು ನ್ಯಾಷನಲ್ ನೀಗ್ರೋ ಬ್ಯುಸಿನೆಸ್ ಲೀಗ್‌ನ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದರು. ವಾಷಿಂಗ್ಟನ್ "ಅಟ್ಲಾಂಟಾ ರಾಜಿ" ಭಾಷಣವು ಇವರಿಗೆ ರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟಿತ್ತು. ಜಿಮ್ ಕ್ರೌ ಪ್ರತ್ಯೇಕತೆ ಮತ್ತು ದಕ್ಷಿಣದ ಕಪ್ಪು ಮತದಾರರ ಹಕ್ಕು ನಿರಾಕರಣೆಯನ್ನು ನೇರವಾಗಿ ಪ್ರಶ್ನಿಸಲು ಪ್ರಯತ್ನಿಸುವುದಕ್ಕಿಂತ ಶಿಕ್ಷಣ ಮತ್ತು ಉದ್ಯಮಶೀಲತೆಯ ಮೂಲಕ ಕಪ್ಪು ಜನರ ಪ್ರಗತಿಗೆ ಕರೆ ನೀಡಿದರು. ವಾಷಿಂಗ್ಟನ್ ಮಧ್ಯಮ ವರ್ಗದ ಕರಿಯರು, ಚರ್ಚ್ ಮುಖಂಡರು ಮತ್ತು ಬಿಳಿಯ ಸಹೃದಯಿಗಳು ಮತ್ತು ರಾಜಕಾರಣಿಗಳ ರಾಷ್ಟ್ರವ್ಯಾಪಿ ಒಕ್ಕೂಟವನ್ನು ಆರಂಭಿಸಿದರು. ಸ್ವ-ಸಹಾಯ ಮತ್ತು ಶಿಕ್ಷಣದ ಮೇಲೆ ಕೇಂದ್ರೀಕರಿಸುವ ಮೂಲಕ ಸಮುದಾಯದ ಆರ್ಥಿಕ ಶಕ್ತಿ ನಿರ್ಮಿಸುವ ಗುರಿಯೊಂದಿಗೆ ವಾಷಿಂಗ್ಟನ್ ಜನಾಂಗೀಯ ಉನ್ನತಿಯ ಬೆಂಬಲಿಗನಾಗಿದ್ದರು.

ಇವರಿಗೆ,

____

____

Printed and Published by Secretary, Karnataka Gandhi Smaraka Nidhi on behalf of Gandhi Bhavana, Kumarapark East, Bengaluru - 560001, Ph : 080 22261967, Printed at CreativeGeekZ, #58, Yadhava College Road, Madhavanagara Bengaluru - 560001, Ph : 080 40927049